ಸೋಮವಾರ, ಮೇ 9, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 128 | ಪುಟ 10

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

ಪಿಯುಸಿಯಲ್ಲಿ ಆರ್ಟ್ಸ್, ಕಾಮರ್ಸ್, ಸೈನ್ಸ್ ಮುಗಿಸಿದ ವಿದ್ಯಾರ್ಥಿಗಳು ಜೆಇಇ ಪರೀಕ್ಷೆ ಬರೆಯದೇ ಮದ್ರಾಸ್ ಐಐಟಿಯಲ್ಲಿ ಡೇಟಾಸೈನ್ಸ್ ಬಿಎಸ್‌ಸಿಗೆ ಸೇರಬಹುದು!

ಆಳ-ಅಗಲ
ವಿದೇಶಿ ವಿನಿಮಯ ಮೀಸಲು ಇಳಿಕೆ

'ಏಕರೂಪ ನಾಗರಿಕ ಸಂಹಿತೆ: ಗೋವಾ ಮಾದರಿ' 8

ರುದ್ರಗೌಡರ ಲಾಕರ್‌ನಲ್ಲಿ ಅರ್ಧ ಕೆ.ಜಿ. ಚಿನ್ನ 4

ರಾಜ್ಯ ಅಥ್ಲೆಟಿಕ್ ಕೂಟ
ಶಶಿಕಾಂತ್, ರೀನಾ ಮಿಂಚಿನ ಓಟ 10

ವಾರಕ್ಕೊಮ್ಮೆ ತಾಲ್ಲೂಕು ಭೇಟಿ, ತಿಂಗಳಿಗೊಂದು ಗ್ರಾಮ ವಾಸ್ತವ್ಯ ಕಡ್ಡಾಯ

ಜಿಲ್ಲಾಧಿಕಾರಿಗಳಿಗೆ ಸಿ.ಎಂ ತಾಕೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರ ಮತ್ತು ವಿಳಂಬ ಧೋರಣೆಯಿಂದ ಸರ್ಕಾರದ ವರ್ಚಸ್ಸಿಗೆ ಹಾನಿಯಾಗುತ್ತದೆ. ಯಾವುದೇ ಸಂದರ್ಭದಲ್ಲೂ ಈ ಎರಡನ್ನೂ ಸಹಿಸುವುದಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳಿಗೆ ಭಾನುವಾರ ಎಚ್ಚರಿಕೆ ನೀಡಿದರು.



ಬಜೆಟ್ ಘೋಷಣೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳ ಜತೆ ನಾಲ್ಕು ಗಂಟೆಗಳ ಕಾಲ ವಿಡಿಯೊ ಕಾನ್ಫರೆನ್ಸ್ ನಡೆಸಿದ ಅವರು, ಆಡಳಿತದ ವಿವಿಧ ಹಂತದಲ್ಲಿರುವ ಭ್ರಷ್ಟಾಚಾರವನ್ನು ನಿಯಂತ್ರಿಸುವಂತೆ ತಾಕೀತು ಮಾಡಿದರು. ಚುನಾವಣಾ ವರ್ಷವಾಗಿರುವ ಕಾರಣದಿಂದ ಬಜೆಟ್ ಘೋಷಣೆಗಳನ್ನು ಕಾಲಮಿತಿಯೊಳಗೆ ಅನುಷ್ಠಾನಕ್ಕೆ ತರಬೇಕು. ಈ ನಿಟ್ಟಿನಲ್ಲಿ ತಕ್ಷಣದಿಂದಲೇ ಕಾರ್ಯಪ್ರವೃತ್ತರಾಗಬೇಕು ಎಂದು ಸೂಚಿಸಿದರು.

ಸಮಯದ ಮಿತಿ ಬೇಡ: ಜಿಲ್ಲಾಧಿಕಾರಿಗಳು ನಿಗದಿತ ಅವಧಿಗೆ ಸೀಮಿತವಾಗಿ ಕೆಲಸ ಮಾಡಿದರೆ ಗುರಿ ಸಾಧಿಸಲು ಸಾಧ್ಯವಿಲ್ಲ. ಜಿಲ್ಲಾಧಿಕಾರಿ, ಹೆಚ್ಚುವರಿ ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ, ತಹಶೀಲ್ದಾರ್ ಎಲ್ಲರೂ ಹೆಚ್ಚು ಸಮಯವನ್ನು ಕರ್ತವ್ಯಕ್ಕೆ ಮೀಸಲಿಡಬೇಕು. ಎಲ್ಲ ಹಂತಗಳಲ್ಲಿ ಕಡತ ವಿಲೇವಾರಿಗೆ ವೇಗ ನೀಡಬೇಕು. 'ಅರ್ಜಿ ಸಲ್ಲಿಸಿದರೆ ಕೆಲಸ ಆಗುವುದಿಲ್ಲ' ಎಂಬ ಮಾತು ಹುಸಿಯಾಗುವಂತೆ ಕೆಲಸ ಮಾಡಬೇಕು ಎಂದು ನಿರ್ದೇಶನ ನೀಡಿದರು.

8ನೇ ಪುಟ ನೋಡಿ

ಮಳೆಗಾಲದ ತಯಾರಿಗೆ ಸೂಚನೆ

'ಮಳೆಗಾಲ ಆರಂಭವಾಗುತ್ತಿರುವುದರಿಂದ ಬಿತ್ತನೆ ಬೀಜ, ರಸಗೊಬ್ಬರ ದಾಸ್ತಾನು ಕುರಿತು ಜಿಲ್ಲಾಧಿಕಾರಿಗಳು ತಕ್ಷಣವೇ ಪರಿಶೀಲನೆ ನಡೆಸಬೇಕು. ಕೊರತೆ ಕಂಡುಬಂದಲ್ಲಿ ಅಗತ್ಯವಿರುವಷ್ಟು ಬಿತ್ತನೆ ಬೀಜ ಮತ್ತು ರಸಗೊಬ್ಬರ ದಾಸ್ತಾನಿಗೆ ಕ್ರಮ ಕೈಗೊಳ್ಳಬೇಕು' ಎಂದು ಮುಖ್ಯಮಂತ್ರಿ ಸೂಚಿಸಿದರು.

ಎಲ್ಲಾ ಗ್ರಾಮಗಳಲ್ಲಿ ಸ್ಮಶಾನಕ್ಕೆ ಜಮೀನು ಮಂಜೂರು ಮಾಡಲು ಕ್ರಮ ಕೈಗೊಳ್ಳಬೇಕು. ಕಂದಾಯ ಇಲಾಖೆಯಿಂದ ರೂಪಿಸಿರುವ ಹೊಸ ಯೋಜನೆಯಡಿ 72 ಗಂಟೆಯೊಳಗೆ ಅರ್ಜಿಗಳ ವಿಲೇವಾರಿ ಕುರಿತು ನಿಗಾ ವಹಿಸಬೇಕು ಎಂದರು.

ಶಿಕ್ಷಕರ ನೇಮಕಾತಿ ಪರೀಕ್ಷೆಗೆ ಸಮಿತಿ

'ಶಿಕ್ಷಕರ ನೇಮಕಾತಿ ಪರೀಕ್ಷೆಯಲ್ಲಿ ಬಿಗಿ ಕಟ್ಟೆಚ್ಚರ ವಹಿಸಲು ಸರ್ಕಾರ ನಿರ್ಧರಿಸಿದೆ. ಇದಕ್ಕಾಗಿ ಎಲ್ಲ ಜಿಲ್ಲೆಗಳಲ್ಲೂ ಜಿಲ್ಲಾಧಿಕಾರಿಗಳ ನೇತೃತ್ವದ ಸಮಿತಿ ರಚಿಸಲು ಮುಖ್ಯಮಂತ್ರಿ ಸೂಚಿಸಿದ್ದಾರೆ. ಪರೀಕ್ಷಾ ಕೇಂದ್ರಗಳಲ್ಲಿ ಬಿಗಿ ಭದ್ರತೆ ಒದಗಿಸಿ, ಸರ್ಪಗಾವಲಿನಲ್ಲಿ ಪರೀಕ್ಷೆ ನಡೆಸುವಂತೆ ತಾಕೀತು ಮಾಡಿದ್ದಾರೆ' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಡೀಮ್ಡ್ ಅರಣ್ಯದ ವ್ಯಾಪ್ತಿಯಲ್ಲಿರುವ ಜಮೀನನ್ನು ಕಂದಾಯ ಇಲಾಖೆಗೆ ಹಸ್ತಾಂತರ ಮಾಡುವ ವಿಚಾರವನ್ನೂ ಮುಖ್ಯಮಂತ್ರಿಯವರು ಜಿಲ್ಲಾಧಿಕಾರಿಗಳಿಗೆ ತಿಳಿಸಿದರು. ಯಾವುದೇ ರೈತರನ್ನು ಒಕ್ಕಲೆಬ್ಬಿಸದಂತೆ ಸ್ಪಷ್ಟವಾದ ನಿರ್ದೇಶನ ನೀಡಿದ್ದಾರೆ' ಎಂದರು.

ಪ್ರಮುಖ ಸೂಚನೆಗಳು

- ಸರ್ಕಾರದ ವಿವಿಧ ಯೋಜನೆಗಳಿಗೆ ತಿಂಗಳೊಳಗೆ ಜಮೀನು ಗುರುತಿಸುವುದು.
- ಗೋಶಾಲೆಗಳ ನಿರ್ಮಾಣಕ್ಕೆ ಎಲ್ಲ ಜಿಲ್ಲೆಗಳಲ್ಲೂ ತಲಾ 10 ಎಕರೆ ಜಮೀನು ಗುರುತಿಸುವುದು.
- 19 ಜಿಲ್ಲೆಗಳಲ್ಲಿ ಅಲೆಮಾರಿ ಸಮುದಾಯಗಳ ಜನರಿಗೆ ವಸತಿ ಕಲ್ಪಿಸಲು ಜಮೀನು ಗುರುತಿಸುವುದು.
- 7,000 ಶಾಲಾ ಕೊಠಡಿ, 100 ಪ್ರಾಥಮಿಕ ಆರೋಗ್ಯ ಕೇಂದ್ರ, 4,000 ಅಂಗನವಾಡಿ ಕೇಂದ್ರಗಳ ನಿರ್ಮಾಣಕ್ಕೆ ತ್ವರಿತ ಚಾಲನೆ.

'ಅರ್ಜಿ ತಿರಸ್ಕಾರವೇ ಪ್ರಾಮಾಣಿಕತೆಯಲ್ಲ'

'ಸಾರ್ವಜನಿಕರು ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸುವುದೇ ಪ್ರಾಮಾಣಿಕತೆ ಎಂದು ಅಧಿಕಾರಿಗಳು ಭಾವಿಸಬಾರದು. ಜನರಿಗೆ ಸಹಾಯ ಮಾಡಲು ಅಧಿಕಾರಿಗಳು ಸ್ವಲ್ಪ ಪ್ರಮಾಣದ ತೊಂದರೆಯನ್ನಾದರೂ ಎದುರಿಸಲು ಸಿದ್ಧರಾಗಿರಬೇಕು' ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದರು.

'ಬಡವರಿಗೆ ಸಹಾಯ ಮಾಡಲು ಯಾವುದೇ ನಿರ್ಧಾರ ತೆಗೆದುಕೊಂಡರೂ ಸರ್ಕಾರ ನಿಮ್ಮ ರಕ್ಷಣೆಗೆ ನಿಲ್ಲುತ್ತದೆ. ಕಷ್ಟದಲ್ಲಿರುವ ಬಡವರಿಗೆ ಸಹಾಯ ಮಾಡಿದರೆ ಹೊಸ ಚೈತನ್ಯ ಮೂಡುತ್ತದೆ. ಅದರಿಂದ ನಿಮಗೂ ತೃಪ್ತಿ ದೊರೆಯುತ್ತದೆ. ಆಡಳಿತದಲ್ಲಿ ಬದಲಾವಣೆ ಆಗುತ್ತಿದೆ. ಸರಳ, ಸುಲಭ ಮತ್ತು ಸ್ವಚ್ಛವಾದ ಆಡಳಿತವಿದೆ ಎಂಬ ಭಾವನೆ ಬರುವಂತೆ ಕೆಲಸ ಮಾಡಬೇಕು' ಎಂದರು.

ಬದರಿನಾಥ ದರ್ಶನ ಉತ್ತರಾಖಂಡದ ಬದರಿನಾಥ ದೇಗುಲ ಭಾನುವಾರ ಸಾಂಪ್ರದಾಯಿಕ ಆಚರಣೆಗಳೊಂದಿಗೆ ಪುನರಾರಂಭಗೊಂಡಿದ್ದು, ಭಾರಿ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಮೀಸಲಾತಿ ತೊಡಕು ನಿವಾರಣೆಗೆ ನ್ಯಾ. ಭಕ್ತವತ್ಸಲ ನೇತೃತ್ವದ ಆಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳಿಗೆ ಸ್ಥಳೀಯ ಸಂಸ್ಥೆಗಳಲ್ಲಿ ನೀಡಿರುವ ಮೀಸಲಾತಿಯನ್ನು ಖಾತರಿಪಡಿಸಲು ಆಯಾ ಸಮುದಾಯಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ಗುರುತಿಸಲು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ. ಭಕ್ತವತ್ಸಲ ನೇತೃತ್ವದಲ್ಲಿ ಆಯೋಗ ರಚಿಸಿ ಆದೇಶ ಹೊರಡಿಸಲಾಗಿದೆ.

ನಿವೃತ್ತ ಐಎಎಸ್ ಅಧಿಕಾರಿ ಸಿ.ಆರ್. ಚಿಕ್ಕಮಠ ಅವರನ್ನು ಆಯೋಗದ ಸದಸ್ಯರನ್ನಾಗಿ ನೇಮಿಸಲಾಗಿದೆ. ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿ ಕಲ್ಪಿಸಲು ಉಂಟಾಗಿರುವ ತೊಡಕು ನಿವಾರಣೆಗೆ ಮಾರ್ಚ್ 31 ರಂದು ನಡೆದ ಸರ್ವಪಕ್ಷ ಸಭೆಯ ನಿರ್ಧಾರದಂತೆ ಆಯೋಗ ರಚಿಸಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಶನಿವಾರ ಆದೇಶ ಹೊರಡಿಸಿದೆ.

ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಸಮುದಾಯಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ಗುರುತಿಸುವುದು ಮತ್ತು ಈ ಸಮುದಾಯಗಳಿಗೆ ರಾಜಕೀಯ ಮೀಸಲಾತಿ ಕಲ್ಪಿಸುವ ಸಂಬಂಧ ಅಧ್ಯಯನ ನಡೆಸಿ, ಶಿಫಾರಸು ಮಾಡುವ ಜವಾಬ್ದಾರಿಯನ್ನು ಆಯೋಗಕ್ಕೆ ನೀಡಲಾಗಿದೆ. ಆಯೋಗವು ತನ್ನ ಕೆಲಸವನ್ನು ಪೂರ್ಣಗೊಳಿಸಲು ಯಾವುದೇ ಕಾಲಮಿತಿ ವಿಧಿಸಿಲ್ಲ.

ಕೆ. ಭಕ್ತವತ್ಸಲ

'ನಿಖರವಾದ ಅಂಕಿಅಂಶಗಳ ಆಧಾರದಲ್ಲಿ ಮೂರು ಹಂತದ ಪರಿಶೀಲನೆ ನಡೆಸಿ, ಆಯಾ ಸಮುದಾಯಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ಖಾತರಿಪಡಿಸಿದ ಬಳಿಕವೇ ರಾಜಕೀಯ ಮೀಸಲಾತಿ ನೀಡಬೇಕು' ಎಂದು ಸುಪ್ರೀಂಕೋರ್ಟ್ 2010ರಲ್ಲಿ ತೀರ್ಪು ನೀಡಿತ್ತು. 2021ರ ಮಾರ್ಚ್‌ನಲ್ಲೂ ಸುಪ್ರೀಂಕೋರ್ಟ್ ಇದನ್ನು ಪುನರುಚ್ಚರಿಸಿತ್ತು. 2022 ರ ಜನವರಿಯಲ್ಲಿ ಮಹಾರಾಷ್ಟ್ರ ಹಾಗೂ ಮಧ್ಯಪ್ರದೇಶ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಮೂರು ಹಂತದ ಪರಿಶೀಲನೆ ಇಲ್ಲದೆ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಲು ಅವಕಾಶ ನಿರಾಕರಿಸಿತ್ತು. ಈ ಆದೇಶ ಇಡೀ ದೇಶಕ್ಕೆ ಅನ್ವಯವಾಗುತ್ತದೆ ಎಂದು ಸುಪ್ರೀಂಕೋರ್ಟ್ ಹೇಳಿತ್ತು.

ರಾಜ್ಯದಲ್ಲಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಬಿಬಿಎಂಪಿ ಸೇರಿದಂತೆ ಹಲವು ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಬಾಕಿ ಇವೆ. ಮೂರು ಹಂತದ ಪರಿಶೀಲನೆ ನಡೆಸದಿದ್ದರೆ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಲು ಸಾಧ್ಯವಿಲ್ಲ. ಈ ಕಾರಣದಿಂದ ಮೂರು ಹಂತದ ಪರಿಶೀಲನೆಯ ಭಾಗವಾಗಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಆಯೋಗ ರಚಿಸಲಾಗಿದೆ.

ಶಾಲೆ ಮೇಲೆ ಬಾಂಬ್ 60 ಮಂದಿ ಸಾವು

ಲುಹಾನ್‌ಸ್ಕ್/ಮಾಸ್ಕೊ (ಎಎಫ್‌ಪಿ/ರಾಯಿಟರ್ಸ್): ಉಕ್ರೇನ್ ಮೇಲೆ ವಿಶೇಷ ಸೇನಾ ಕಾರ್ಯಾಚರಣೆ ನಡೆಸುತ್ತಿರುವ ರಷ್ಯಾ, ಭಾನುವಾರ ಪೂರ್ವದ ಹಳ್ಳಿಯಲ್ಲಿನ ಶಾಲೆ ಮೇಲೆ ಬಾಂಬ್ ದಾಳಿ ನಡೆಸಿದ್ದು, 60 ಮಂದಿ ಮೃತಪಟ್ಟಿದ್ದಾರೆ. 8

ಹಿಮಾಚಲ ಪ್ರದೇಶ: ವಿಧಾನಸಭೆ ದ್ವಾರದಲ್ಲಿ ಖಾಲಿಸ್ತಾನಿ ಧ್ವಜ

ಧರ್ಮಶಾಲಾ: 'ರಾಜ್ಯ ವಿಧಾನಸಭೆಯ ಆವರಣದ ಮುಖ್ಯದ್ವಾರದ ಹೊರಗೆ ಖಾಲಿಸ್ತಾನಿ ಧ್ವಜಗಳನ್ನು ಕಟ್ಟಲಾಗಿತ್ತು, ಆವರಣದ ಗೋಡೆಯ ಮೇಲೆ ಖಾಲಿಸ್ತಾನಿ ಪರ ಘೋಷಣೆಗಳನ್ನು ಬರೆಯಲಾಗಿತ್ತು. ಧ್ವಜಗಳನ್ನು ತೆಗೆದು, ಬರಹ ಅಳಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ. 9

'ತಾಜ್ ಮಹಲ್: ಮುಚ್ಚಿದ ಕೋಣೆಗಳ ಬಾಗಿಲು ತೆರೆಸಿ'

ಲಖನೌ: ತಾಜ್‌ಮಹಲ್ ಒಳಗಿರುವ ಮುಚ್ಚಿದ ಕೊಠಡಿಗಳ ಬಾಗಿಲು ತೆರೆಸಿ, ಅಲ್ಲಿ ಹಿಂದೂ ವಿಗ್ರಹಗಳು, ಧರ್ಮ-ಗ್ರಂಥಗಳು ಇವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ ನಿರ್ದೇಶನ ನೀಡಬೇಕು ಎಂದು ಕೋರಿ ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠದ ಮುಂದೆ ಅರ್ಜಿ ಸಲ್ಲಿಸಲಾಗಿದೆ. 9

'ಮಸೀದಿಗಳಲ್ಲಿ ಧ್ವನಿವರ್ಧಕ: ಕಾನೂನು ಕೈಗೆತ್ತಿಕೊಳ್ಳಬಾರದು'

ಹುಬ್ಬಳ್ಳಿ: 'ಧ್ವನಿವರ್ಧಕಗಳಲ್ಲಿ ಶಬ್ದ ಎಷ್ಟಿರಬೇಕು ಎಂಬುದರ ಬಗ್ಗೆ ಪರೀಶಿಲಿಸಿ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳುತ್ತದೆ. ಹಾಗಾಗಿ, ಯಾರೂ ಕಾನೂನು ಕೈಗೆತ್ತಿಕೊಳ್ಳಬಾರದು' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಮಸೀದಿಗಳಲ್ಲಿ ಧ್ವನಿವರ್ಧಕ ತೆರವಿಗೆ ಶ್ರೀರಾಮ ಸೇನೆ ಹಾಗೂ ಹಿಂದೂಪರ ಸಂಘಟನೆಗಳು ನೀಡಿದ್ದ ಗಡುವು ಕುರಿತು ಭಾನುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಸರ್ಕಾರ ಮಾಡಬೇಕಾದ ಕೆಲಸವನ್ನು ಮಾಡುತ್ತದೆ. ಬೇರೆಯವರು ಸರ್ಕಾರದ ಕೆಲಸ ಮಾಡುವ ಅಗತ್ಯವಿಲ್ಲ' ಎಂದರು.

ಒಳ ಪುಟ

ಗಾಳಿ, ಮಳೆ: ಕುಸಿದ ಚಾವಣಿ – ಧರೆಗುರುಳಿದ ಮರಗಳು 3

ಪಿಎಸ್‌ಐ: ಪರೀಕ್ಷೆ ನಡೆದ 92 ಕೇಂದ್ರಗಳಲ್ಲೂ ಪರಿಶೀಲನೆ ನಡೆಸಲು ತೀರ್ಮಾನ

ಪ್ರಥಮ ಪತ್ರಿಕೆಯಲ್ಲೂ ಅಕ್ರಮ ಶಂಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಪರೀಕ್ಷೆಯ ಪ್ರಥಮ ಪತ್ರಿಕೆಯಲ್ಲೂ (ಪತ್ರಿಕೆ-1) ಅಕ್ರಮ ನಡೆದಿರುವ ಶಂಕೆ ವ್ಯಕ್ತವಾಗಿದೆ.

ಪ್ರಬಂಧ, ಭಾಷಾಂತರ ಹಾಗೂ ಸಂಕ್ಷಿಪ್ತಗೊಳಿಸುವಿಕೆಯನ್ನು ಒಳಗೊಂಡಿರುವ ಈ ಪತ್ರಿಕೆ ಒಟ್ಟು 50 ಅಂಕಗಳದ್ದಾಗಿತ್ತು. ಕನ್ನಡದಿಂದ ಇಂಗ್ಲಿಷ್‌ಗೆ ಹಾಗೂ ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರಿಸಲು ತಲಾ 10 ಅಂಕಗಳನ್ನು ನಿಗದಿ ಮಾಡಲಾಗಿತ್ತು. 20 ಅಂಕಗಳಿಗಾಗಿ ಅಭ್ಯರ್ಥಿಗಳು ವಿಷಯವೊಂದರ ಮೇಲೆ ದೀರ್ಘ ಪ್ರಬಂಧ ರಚಿಸಬೇಕಾಗುತ್ತದೆ. 700 ರಿಂದ 800 ಪದಗಳ ಸುದ್ದಿಯೊಂದನ್ನು 100 ಪದಗಳಿಗೆ ಸಂಕ್ಷಿಪ್ತಗೊಳಿಸಬೇಕು. ಇದಕ್ಕೆ 10 ಅಂಕಗಳನ್ನು ನಿಗದಿ ಮಾಡಲಾಗಿತ್ತು.

'ಹಲವು ಅಭ್ಯರ್ಥಿಗಳು ಭಾಷಾಂತರ ಹಾಗೂ ಪ್ರಬಂಧ ಬರೆಯುವುದಕ್ಕಾಗಿ ಬ್ಲೂಟೂತ್ ಉಪಕರಣಗಳ ನೆರವು ಪಡೆದಿರುವ ಅನುಮಾನ ವ್ಯಕ್ತವಾಗಿದೆ. ಈ ದಿಸೆಯಲ್ಲಿ ತನಿಖೆ ಮುಂದುವರಿಸಲಾಗಿದ್ದು, ಅಗತ್ಯ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

ಪರೀಕ್ಷೆ ನಡೆದ 92 ಕೇಂದ್ರಗಳಲ್ಲೂ ಪರಿಶೀಲನೆ ನಡೆಸಲು ಸಿಐಡಿ ಅಧಿಕಾರಿಗಳ ತಂಡ ನಿರ್ಧರಿಸಿರುವುದಾಗಿ ಗೊತ್ತಾಗಿದೆ.

ಎಂಟು ತಂಡಗಳ ರಚನೆ: ಅಕ್ರಮದ ಜಾಲ ರಾಜ್ಯದ ವಿವಿಧ ಜಿಲ್ಲೆಗಳಿಗೂ ವ್ಯಾಪಿಸಿರುವ ಸಾಧ್ಯತೆ ಇರುವುದರಿಂದ ತನಿಖೆಯನ್ನು ಮತ್ತಷ್ಟು ತೀವ್ರಗೊಳಿಸಲು ಮುಂದಾಗಿರುವ ಸಿಐಡಿ ಅಧಿಕಾರಿಗಳು ಡಿವೈಎಸ್‌ಪಿಗಳ ನೇತೃತ್ವದಲ್ಲಿ ಎಂಟು ವಿಶೇಷ ತಂಡಗಳನ್ನು ರಚಿಸಿದ್ದಾರೆ.

'ಡಿಜಿಪಿ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಧಿಕಾರಿಗಳೂ ಅಕ್ರಮದಲ್ಲಿ ಭಾಗಿಯಾಗಿರುವ ಆರೋಪ ಕೇಳಿ ಬಂದಿದ್ದು ಈ ನಿಟ್ಟಿನಲ್ಲೂ ತನಿಖೆ ನಡೆಸಲು ತೀರ್ಮಾನಿಸಲಾಗಿದೆ' ಎಂದೂ ಸಿಐಡಿ ಮೂಲಗಳು ಮಾಹಿತಿ ನೀಡಿವೆ.

4ನೇ ಪುಟ ನೋಡಿ

ಬ್ಲೂಟೂತ್ ಜಾಡು ಹಿಡಿದು ಹೊರಟ ತಂಡ

ಪಿಎಸ್‌ಐ ಅಕ್ರಮದಲ್ಲಿ ಬಳಕೆಯಾಗಿರುವ ಬ್ಲೂಟೂತ್ ಉಪಕರಣಗಳ ಜಾಡು ಹಿಡಿದಿರುವ ಸಿಐಡಿ ತಂಡ, ಇವುಗಳನ್ನು ಎಲ್ಲಿಂದ ತರಲಾಗಿದೆ, ಪೂರೈಕೆ ಮಾಡಿದವರು ಯಾರು ಎಂಬುದರ ಕುರಿತ ಮಾಹಿತಿ ಕಲೆಹಾಕುತ್ತಿದೆ.

'ಹೋದ ವರ್ಷ ನಡೆದಿದ್ದ ಎಫ್‌ಡಿಎ ಪರೀಕ್ಷೆಯಲ್ಲೂ ಬ್ಲೂಟೂತ್ ಬಳಸಿ ಅಕ್ರಮ ನಡೆಸಲಾಗಿತ್ತು. ಈ ಸಂಬಂಧ ಶಿವರಾಜ್ ಪಾಟೀಲ ಹಾಗೂ ಇತರರನ್ನು ಪೊಲೀಸರು ಬಂಧಿಸಿದ್ದರು. ಪಿಎಸ್‌ಐ ಅಕ್ರಮದಲ್ಲಿ ಬಳಕೆಯಾಗಿರುವ ಬ್ಲೂಟೂತ್‌ಗಳನ್ನೂ ಈ ತಂಡದವರೇ ಪೂರೈಕೆ ಮಾಡಿರುವ ಶಂಕೆ ವ್ಯಕ್ತವಾಗಿದೆ' ಎಂದೂ ಸಿಐಡಿ ಮೂಲಗಳು ತಿಳಿಸಿವೆ.

ಗ್ರಾಮ ಪಂಚಾಯಿತಿ ಅಧ್ಯಕ್ಷನ ಬಂಧನ

ಚನ್ನರಾಯಪಟ್ಟಣ (ಹಾಸನ ಜಿಲ್ಲೆ): ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಭಾಗಿಯಾದ ಆರೋಪದಡಿ ಬೆಕ್ಕ ಗ್ರಾಮ ಪಂಚಾಯಿತಿ ಅಧ್ಯಕ್ಷ ಕೇಶವಮೂರ್ತಿ ಅವರನ್ನು ಸಿಐಡಿ ಅಧಿಕಾರಿಗಳು ಭಾನುವಾರ ಬಂಧಿಸಿದ್ದಾರೆ.

ಕೇಶವಮೂರ್ತಿ

ಗಾಂಧಿ ವೃತ್ತದ ಬಳಿಯಿರುವ ಮನೆಯಿಂದ ಕೇಶವಮೂರ್ತಿ ಅವರನ್ನು ವಿಚಾರಣೆಗಾಗಿ ಅಧಿಕಾರಿಗಳು ಶನಿವಾರ ಬೆಂಗಳೂರಿಗೆ ಕರೆದೊಯ್ದಿದ್ದರು. ಇದೇ ಪ್ರಕರಣದಲ್ಲಿ ಚನ್ನರಾಯಪಟ್ಟಣದ ಪುರಸಭೆ ಸದಸ್ಯರೊಬ್ಬರು ಭಾಗಿಯಾಗಿರುವ ಶಂಕೆ ಇದ್ದು, ಅವರ ಪತ್ತೆಗೆ ಮುಂದಾಗಿದ್ದಾರೆ.

ಬೆಕ್ಕ ಗ್ರಾಮದ ಚಂದ್ರಶೇಖರ್ ಅವರ ಪುತ್ರ ವೆಂಕಟೇಶ್ ಪಿಎಸ್‌ಐ ಹುದ್ದೆಯ ತಾತ್ಕಾಲಿಕ ಪಟ್ಟಿಯಲ್ಲಿ ಆಯ್ಕೆಯಾಗಿದ್ದಾರೆ. ಇದಕ್ಕಾಗಿ ಚಂದ್ರಶೇಖರ್ ತನ್ನ ಸಂಬಂಧಿ ಕೇಶವಮೂರ್ತಿ ಮೂಲಕ ₹ 40 ಲಕ್ಷ ನೀಡಿದ್ದರು ಎನ್ನಲಾಗಿದೆ. ವೆಂಕಟೇಶ್ ಹಾಗೂ ಚಂದ್ರಶೇಖರ್ ಅವರನ್ನೂ ಸಿಐಡಿ ಅಧಿಕಾರಿಗಳು ವಿಚಾರಣೆಗೊಳಪಡಿಸಿದ್ದರು.

ವೆಂಕಟೇಶ್ ಅರಸೀಕೆರೆ ತಾಲ್ಲೂಕಿನ ಗ್ರಾಮ ಪಂಚಾಯಿತಿಯೊಂದರಲ್ಲಿ ನರೇಗಾ ಯೋಜನೆಯಡಿ ಕಿರಿಯ ಎಂಜಿನಿಯರ್ ಆಗಿ ಹೊರಗುತ್ತಿಗೆ ಆಧಾರದಡಿ ಕೆಲಸ ಮಾಡುತ್ತಿದ್ದರು.

ಇನ್ನಷ್ಟು ಸುದ್ದಿಗಳು 4

ಚಿನಕುರಳಿ

ಪ್ರಕಾಶ್ ಶೆಟ್ಟಿ



ಟೆಂಡರ್ ಪರಿಶೀಲನೆ ಸಮಿತಿ: ನ್ಯಾ. ರತ್ನಕಲಾ ನೇತೃತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೈಗೊಳ್ಳುವ ₹ 50 ಕೋಟಿಗಿಂತ ಹೆಚ್ಚು ಮೊತ್ತದ ಕಾಮಗಾರಿಗಳು ಹಾಗೂ ಖರೀದಿಗೆ ಸಂಬಂಧಿಸಿದ ಟೆಂಡರ್ ದಾಖಲೆಗಳು ಹಾಗೂ ಅಂದಾಜು ಪಟ್ಟಿಗಳನ್ನು ಟೆಂಡರ್ ಪೂರ್ವದಲ್ಲೇ ಪರಿಶೀಲಿಸುವುದಕ್ಕಾಗಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ರತ್ನಕಲಾ ನೇತೃತ್ವದಲ್ಲಿ ತ್ರಿಸದಸ್ಯ ಸಮಿತಿ ನೇಮಿಸಲಾಗಿದೆ.

ಜಲ ಸಂಪನ್ಮೂಲ ಇಲಾಖೆಯ ನಿವೃತ್ತ ಕಾರ್ಯದರ್ಶಿ ಬಿ.ಜಿ. ಗುರುಪಾದಸ್ವಾಮಿ (ಎಂಜಿನಿಯರಿಂಗ್ ತಜ್ಞ) ಹಾಗೂ ರಾಜ್ಯ ಲೆಕ್ಕಪತ್ರ ಇಲಾಖೆಯ ನಿವೃತ್ತ ನಿರ್ದೇಶಕ ಕೆ. ನಂದಕುಮಾರ್ (ಹಣಕಾಸು ತಜ್ಞ) ಅವರನ್ನು ಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. ಲೋಕೋಪಯೋಗಿ ಇಲಾಖೆಯ ಅಡಿಯಲ್ಲಿ ಈ ಸಮಿತಿಯು ಕಾರ್ಯನಿರ್ವಹಿಸಲಿದೆ ಎಂದು ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್. ಪ್ರಸಾದ್ ಶನಿವಾರ ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

ರತ್ನಕಲಾ

₹ 50 ಕೋಟಿ ಮತ್ತು ಅದಕ್ಕಿಂತ ಹೆಚ್ಚಿನ ವೆಚ್ಚದ ಎಲ್ಲ ನಿರ್ಮಾಣ ಕಾಮಗಾರಿಗಳು ಹಾಗೂ ಸಾರ್ವಜನಿಕ ಸಂಗ್ರಹಣೆಯ ಟೆಂಡರ್ ಪ್ರಕ್ರಿಯೆಗಳು ಈ ಸಮಿತಿಯ ವ್ಯಾಪ್ತಿಗೆ ಬರಲಿವೆ. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಟೆಂಡರ್ ಹಂತದಲ್ಲೇ ಅಕ್ರಮಗಳು ನಡೆಯುತ್ತಿವೆ ಎಂಬ ಆರೋಪ ಕೇಳಿ ಬಂದಿತ್ತು. ಈ ಕಾರಣದಿಂದ ಟೆಂಡರ್ ಪರಿಶೀಲನೆಗೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಸಮಿತಿ ರಚಿಸಲು 2021ರ ಡಿಸೆಂಬರ್ 12 ರಂದು ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿತ್ತು. ಅದರ ಅನುಸಾರ ಸಮಿತಿ ರಚಿಸಲಾಗಿದೆ.

ಸಮಿತಿಯ ಅಧ್ಯಕ್ಷರಿಗೆ ಮಾಸಿಕ ₹ 2 ಲಕ್ಷ ಮತ್ತು ಸದಸ್ಯರಿಗೆ ಮಾಸಿಕ ತಲಾ ₹ 1 ಲಕ್ಷ ಗೌರವ ಧನ ನಿಗದಿಪಡಿಸಲಾಗಿದೆ. ಸಭೆ ಹಾಗೂ ಪ್ರವಾಸ ಭತ್ಯೆಗಳನ್ನೂ ಒದಗಿಸಲಾಗುತ್ತದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಜಹಾಂಗೀರ್‌ಪುರಿ: ತನಿಖೆ ನಡೆಸುವಂತೆ ಪೊಲೀಸ್ ಆಯುಕ್ತರಿಗೆ ಕೋರ್ಟ್ ಸೂಚನೆ

'ಗಲಭೆಯಲ್ಲಿ ಪೊಲೀಸರು ಶಾಮೀಲಾಗಿದ್ದಾರೆಯೇ?'

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿಯ ಜಹಾಂಗೀರ್ ಪುರಿಯಲ್ಲಿ ಹನುಮ ಜಯಂತಿ ದಿನವಾದ ಏಪ್ರಿಲ್ 16ರಂದು ನಡೆದ ಕೋಮು ಗಲಭೆಯ ಪಿತೂರಿಯಲ್ಲಿ, ಅಕ್ರಮ ಮೆರವಣಿಗೆ ತಡೆಯಲು ವಿಫಲರಾದ ಪೊಲೀಸ್ ಅಧಿಕಾರಿಗಳ ಪಾತ್ರ ಇದೆಯೇ ಎಂದು ತನಿಖೆ ನಡೆಸುವಂತೆ ದೆಹಲಿ ಪೊಲೀಸ್ ಆಯುಕ್ತರಿಗೆ ನ್ಯಾಯಾಲಯ ಸೂಚಿಸಿದೆ.

ಇದು (ಮೆರವಣಿಗೆ ತಡೆ) ಪೊಲೀಸರ ಸಂಪೂರ್ಣ ವೈಫಲ್ಯ. ಇದನ್ನು ಬದಿಗೆ ತಳ್ಳಲು ಸಾಧ್ಯವೇ ಇಲ್ಲ ಎಂದು ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಗಗನ್‌ದೀಪ್ ಸಿಂಗ್ ಹೇಳಿದ್ದಾರೆ.

ಮೆರವಣಿಗೆ ಸಂದರ್ಭದ ಘಟನಾವಳಿ, ಅನಪೇಕ್ಷಿತ ಘಟನೆ ತಡೆ ಮತ್ತು ಕಾನೂನು–ಸುವ್ಯವಸ್ಥೆ ಕಾಯ್ದುಕೊಳ್ಳುವಲ್ಲಿ ಸ್ಥಳೀಯಾಡಳಿತದ ಪಾತ್ರ, ಪಿತೂರಿಯಲ್ಲಿ ಭಾಗಿಯಾದವರು ಯಾರು ಎಂಬುದನ್ನು ಪತ್ತೆ ಮಾಡಬೇಕಿದೆ ಎಂದು ನ್ಯಾಯಾಲಯ ಹೇಳಿದೆ.

ಗಲಭೆಗೆ ಕಾರಣವಾದ ಮೆರವಣಿಗೆಗೆ ಪೊಲೀಸರಿಂದ ಅನುಮತಿ ಪಡೆದಿರಲಿಲ್ಲ. ಆ ಮೆರವಣಿಗೆಯು ಅಕ್ರಮವಾಗಿತ್ತು ಎಂದು ಸರ್ಕಾರ ಈಗಾಗಲೇ ಒಪ್ಪಿಕೊಂಡಿದೆ ಎಂದು ಕೋರ್ಟ್ ಹೇಳಿದೆ.

'ಅನುಮತಿ ಪಡೆಯದ ಮೆರವಣಿಗೆಯನ್ನು ನಿಲ್ಲಿಸಲು ವಿಫಲರಾದ ಸ್ಥಳೀಯ ಪೊಲೀಸರು ಸಂಪೂರ್ಣವಾಗಿ ವಿಫಲರಾಗಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಾಣಿಸುತ್ತದೆ. ಆದರೆ, ಈ ವಿಚಾರವನ್ನು ಹಿರಿಯ ಅಧಿಕಾರಿಗಳು ಬದಿಗೆ ಸರಿಸಲು ಯತ್ನಿಸಿದಂತೆ ಕಾಣಿಸುತ್ತಿದೆ' ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ತಪ್ಪಿತಸ್ಥರು ಯಾರು ಎಂಬುದನ್ನು ಗುರುತಿಸಿ, ಹೊಣೆ ಹೊರಿಸಬೇಕಿದೆ. ಹಾಗಾದರೆ, ಭವಿಷ್ಯದಲ್ಲಿ ಇಂತಹ ಘಟನೆ ಮರುಕಳಿಸುವುದನ್ನು ತಡೆಯಬಹುದು. ಹಾಗೆಯೇ ಪೊಲೀಸರು ಅಸಡ್ಡೆ ತೋರುವುದನ್ನು ತಪ್ಪಿಸಬಹುದು. ಪೊಲೀಸರು ಶಾಮೀಲಾಗಿದ್ದಾರೆಯೇ ಎಂಬುದನ್ನೂ ಪತ್ತೆ ಮಾಡಬೇಕಿದೆ ಎಂದು ಆದೇಶದಲ್ಲಿ ಹೇಳಲಾಗಿದೆ.

ಅಕ್ರಮ ಮೆರವಣಿಗೆಯನ್ನು ತಡೆಯುವ ಬದಲಿಗೆ, ಜಹಾಂಗೀರ್‌ಪುರಿ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ರಾಜೀವ್ ರಂಜನ್ ಮತ್ತು ಸಿಬ್ಬಂದಿ ಮೆರವಣಿಗೆಯ ಜತೆಗೆ ಸಾಗಿದ್ದರು ಎಂಬುದು ಎಫ್‌ಐಆರ್‌ನಿಂದಲೇ ಸ್ಪಷ್ಟವಾಗುತ್ತದೆ. ಮೆರವಣಿಗೆಯನ್ನು ನಿಲ್ಲಿಸಿ ಜನರನ್ನು ಚದುರಿಸುವ ಮೂಲಕ ತಮ್ಮ ಕರ್ತವ್ಯ ನಿರ್ವಹಿಸುವ ಬದಲಿಗೆ ಪೊಲೀಸರು ಮೆರವಣಿಗೆಯ ಉದ್ದಕ್ಕೂ ಜತೆಗೆ ಸಾಗಿದರು ಎಂದು ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ಮೆರವಣಿಗೆಯ ಸಂದರ್ಭದಲ್ಲಿ ಕೋಮು ಗಲಭೆ ನಡೆದಿತ್ತು. ಬಳಿಕ, ಗಲಭೆಯ ಆರೋಪಿಗಳು ಅಕ್ರಮವಾಗಿ ನಿರ್ಮಿಸಿದ್ದಾರೆ ಎನ್ನಲಾದ ಕಟ್ಟಡಗಳನ್ನು ಉತ್ತರ ದೆಹಲಿ ಮಹಾನಗರ ಪಾಲಿಕೆಯು ನೆಲಸಮ ಮಾಡಲು ಆರಂಭಿಸಿತ್ತು. ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಸುಪ್ರೀಂ ಕೋರ್ಟ್ ನೀಡಿದ ಆದೇಶದ ಬಳಿಕ ಕಾರ್ಯಾಚರಣೆ ನಿಂತಿತ್ತು.

ಗಲಭೆಗೆ ಸಂಬಂಧಿಸಿ 20 ಮಂದಿಯನ್ನು ಬಂಧಿಸಲಾಗಿದೆ. ಹನುಮ ಜಯಂತಿ ಮೆರವಣಿಗೆ ಸಂದರ್ಭದಲ್ಲಿನ ಕಲ್ಲುತೂರಾಟದಲ್ಲಿ ಎಂಟು ಪೊಲೀಸರು ಗಾಯಗೊಂಡಿದ್ದರು. ಏಪ್ರಿಲ್ 10ರಂದು ನಡೆದ ರಾಮನವಮಿಯ ಮೆರವಣಿಗೆಯ ಸಂದರ್ಭದಲ್ಲಿಯೂ ಗುಜರಾತ್, ಮಹಾರಾಷ್ಟ್ರ, ಮಧ್ಯ ಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ ಗಲಭೆ ನಡೆದಿತ್ತು.

ಆರೋಪಿಗಳಿಗೆ ಜಾಮೀನು ಇಲ್ಲ

ಜಹಾಂಗೀರ್‌ಪುರಿ ಗಲಭೆಯ ಎಂಟು ಮಂದಿ ಆರೋಪಿಗಳ ಜಾಮೀನು ಅರ್ಜಿಯನ್ನು ಕೋರ್ಟ್ ವಜಾ ಮಾಡಿತು.

ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಗಳು ಮತ್ತು ಸಾಕ್ಷಿಗಳ ಹೇಳಿಕೆ ಆಧಾರದಲ್ಲಿ ಆರೋಪಿಗಳನ್ನು ಗುರುತಿಸಲಾಗಿದೆ. ತನಿಖೆ ಇನ್ನೂ ಮುಗಿದಿಲ್ಲ. ಇನ್ನೂ ಕೆಲವು ಆರೋಪಿಗಳನ್ನು ಬಂಧಿಸಬೇಕಿದೆ ಎಂದು ಕೋರ್ಟ್ ಹೇಳಿದೆ.

ಆರೋಪಿಗಳ ವಿರುದ್ಧ ಇರುವ ಆಪಾದನೆಗಳು ಗಂಭೀರವಾಗಿವೆ. ಆರೋಪಿಗಳನ್ನು ಬಿಡುಗಡೆ ಮಾಡಿದರೆ ಅವರು ಸಾಕ್ಷಿಗಳನ್ನು ಬೆದರಿಸಬಹುದು ಎಂಬ ಶಂಕೆಯೂ ವ್ಯಕ್ತವಾಗಿದೆ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

ಕಾರು ಡಿಕ್ಕಿ: ಬಾಲಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪ್ಪನ ಜೊತೆ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಬಾಲಕನಿಗೆ ಕಾರು ಡಿಕ್ಕಿಯಾಗಿದ್ದು, ಗಂಭೀರವಾಗಿ ಗಾಯಗೊಂಡಿದ್ದ ಆತ ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದಾನೆ.

ಪ್ರಕರಣ ದಾಖಲಿಸಿಕೊಂಡಿರುವ ಎಲೆಕ್ಟ್ರಾನಿಕ್ ಸಿಟಿ ಸಂಚಾರ ಠಾಣೆ ಪೊಲೀಸರು ಕಾರು ಚಾಲಕ ಅಂದಾನಯ್ಯ (37) ಎಂಬುವವರನ್ನು ಬಂಧಿಸಿದ್ದಾರೆ.

‘ಅವಿನಾಶ್ (4) ಮೃತ ಬಾಲಕ. ಈತ ಕೂಲಿ ಕಾರ್ಮಿಕ ಹನುಮಂತಯ್ಯ ಎಂಬುವವರ ಮಗ. ಇವರಿಬ್ಬರು ಶನಿವಾರ ಸಂಜೆ ಸೋಮಸುಂದರಪಾಳ್ಯದ ಗುರುಮೂರ್ತಿ ದೇವಸ್ಥಾನ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಘಟನೆ ನಡೆದಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮುಖ್ಯಮಂತ್ರಿ ನವನಗರೋತ್ಥಾನ ಯೋಜನೆಯಡಿ ಕೆ–100 ನೀರ ಹಾದಿ ಯೋಜನೆ

ರಾಜಕಾಲುವೆಯ ಹೂಳು ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲ ರಾಜಕಾಲುವೆಯನ್ನು ಕೆ.ಆರ್. ಮಾರುಕಟ್ಟೆಯಿಂದ ಬೆಳ್ಳಂದೂರು ಕೆರೆಯವರೆಗೆ ನವೀಕರಿಸಲು ಕೈಗೆತ್ತಿಕೊಂಡಿರುವ ‘ಕೆ-100 ನೀರಹಾದಿ ಯೋಜನೆ’ಯಡಿ 6 ಕಿ.ಮೀ. ಉದ್ದದ ರಾಜಕಾಲುವೆಯ ಹೂಳೆತ್ತಿ ಕಲುಷಿತಗೊಂಡಿದ್ದ ತಳಭಾಗವನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಲಾಗಿದೆ. ಇಲ್ಲಿ ನೀರು ಭೂಮಿಗೆ ಇಂಗುವುದಕ್ಕೂ ವಿಶೇಷ ವ್ಯವಸ್ಥೆ ಕಲ್ಪಿಸಲಾಗಿದೆ.

ಇನ್ನುಳಿದ 3.6 ಕಿ.ಮೀ ಉದ್ದದ ರಾಜಕಾಲುವೆಯಲ್ಲಿ ಹೂಳೆತ್ತುವ ಕಾರ್ಯ ಪ್ರಗತಿಯಲ್ಲಿದೆ. ರಾಜಕಾಲುವೆ ಇಕ್ಕೆಲಗಳಲ್ಲಿ ಹಸಿರೀಕರಣ, ರಾತ್ರಿ ಸಮಯದಲ್ಲಿ ಉದ್ಯಾನವನದ ರೀತಿಯಲ್ಲಿ ಅಲಂಕಾರಿಕ ವಿದ್ಯುದ್ದೀಪಗಳ ಅಳವಡಿಕೆ, ಪಕ್ಕದಲ್ಲಿ ವಿಹಾರಪಥ ರೂಪಿಸಿ ಗ್ರಾನೈಟ್ ಅಳವಡಿಕೆ, ಗ್ರಿಲ್ ಅಳವಡಿಕೆ ಕಾಮಗಾರಿಗಳು ನಡೆಯುತ್ತಿವೆ.

ಕಾಮಗಾರಿಯನ್ನು ತುಷಾರ್ ಗಿರಿನಾಥ್ ಅವರು ಭಾನುವಾರ ಪರಿಶೀಲಿಸಿದರು

ರಾಜಕಾಲುವೆ ಪಕ್ಕದಲ್ಲಿರುವ ಮನೆಗಳ ಶೌಚನೀರನ್ನು ನೇರವಾಗಿ ರಾಜಕಾಲುವೆಗೆ ಹರಿದು ಬಿಡುತ್ತಿದ್ದರು. ಅದನ್ನು ತಡೆಯಲು ಜಲಮಂಡಳಿ ಅಧಿಕಾರಿಗಳು ಕ್ರಮಕೈಗೊಂಡಿದ್ದಾರೆ. ಹೊಸದಾಗಿ ಒಳಚರಂಡಿ ಕೊಳವೆಗಳನ್ನು ಅಳವಡಿಸಿ ಶೌಚನೀರು ರಾಜಕಾಲುವೆ ಸೇರದಂತೆ ವ್ಯವಸ್ಥೆ ಕಲ್ಪಿಸಿದ್ದಾರೆ. ರಾಜಕಾಲುವೆಯಲ್ಲಿ ಹರಿಯುವ ನೀರನ್ನು ಶುದ್ಧೀಕರಿಸಲು ಕುಂಬಾರಗುಂಡಿ ಬಳಿ ಕೊಳಚೆ ನೀರನ್ನು ಶುದ್ಧೀಕರಿಸುವ ಘಟಕ (ಎಸ್‌ಟಿಪಿ) ನಿರ್ಮಿಸಲಾಗುತ್ತಿದೆ. ಈ ಎಸ್‌ಟಿಪಿಯು ನಿತ್ಯ 50 ಲಕ್ಷ ಲೀಟರ್‌ಗಳಷ್ಟು ಕೊಳಚೆ ನೀರನ್ನು ಶುದ್ಧೀಕರಿಸುವ ಸಾಮರ್ಥ್ಯವನ್ನು ಹೊಂದಲಿದೆ.

ಜೆ.ಸಿ ರಸ್ತೆಯಿಂದ ಶಾಂತಿನಗರ ಬಸ್ ನಿಲ್ದಾಣದವರೆಗಿನ 1.5 ಕಿ.ಮೀ ಉದ್ದದ ರಾಜಕಾಲುವೆಯ ಎರಡೂ ಬದಿಯ ತಡೆಗೋಡೆಗಳು ಹಾಗೂ ತಳಮಟ್ಟದ ಸೇತುವೆಗಳ ವಾಸ್ತುಶಿಲ್ಪವನ್ನು ವಿಶೇಷ ಮಾದರಿಯಲ್ಲಿ ವಿನ್ಯಾಸಗೊಳಿಸಲಾಗುತ್ತಿದೆ. ರಾಜಕಾಲುವೆಗಳಲ್ಲಿ ನಿರ್ಮಿಸುತ್ತಿರುವ 6 ಸೇತುವೆಗಳು ಪೂರ್ಣಗೊಂಡಿವೆ. ಇನ್ನುಳಿದ 3 ಸೇತುವೆಗಳ ಕೆಲಸ ಪ್ರಗತಿಯಲ್ಲಿದೆ. ವಿದ್ಯುತ್ ಅಳವಡಿಕೆಗಾಗಿ ಅತ್ಯಾಧುನಿಕ ವಿದ್ಯುತ್ ಪರಿವರ್ತಕಗಳನ್ನು ಅಳವಡಿಸಲಾಗಿದೆ. ರಾಜಕಾಲುವೆಯ ಎರಡೂ ಬದಿಗಳಲ್ಲೂ ಸರ್ವೀಸ್ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಸರ್ವಿಸ್ ರಸ್ತೆಗಳಲ್ಲಿ ಬೀಳುವ ಮಳೆ ನೀರು ರಾಜಕಾಲುವೆಗೆ ಹರಿದು ಹೋಗುವಂತೆ ಮಾಡಲು ಕೊಳವೆಗಳನ್ನು ಅಳವಡಿಸಲಾಗುತ್ತಿದೆ. ರಸ್ತೆ ಪಕ್ಕದಲ್ಲಿ ಕೇಬಲ್ ಅಳವಡಿಕೆಗೆ ಕೊಳವೆ ಹಾಗೂ ಚೇಂಬರ್‌ಗಳನ್ನು ನಿರ್ಮಿಸುವ ಕಾಮಗಾರಿಗಳೂ ಮುಗಿಯುವ ಹಂತದಲ್ಲಿವೆ.

ಮುಖ್ಯಮಂತ್ರಿಯವರ ನವ ನಗರೋತ್ಥಾನ ಯೋಜನೆಯಡಿ ‘ಕೆ–100 ನೀರ ಹಾದಿ’ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಕಾಮಗಾರಿಯನ್ನು ಭಾನುವಾರ ಪರಿಶೀಲಿಸಿದರು.

ಸುದ್ದಿ 2 ನಿಮಿಷ

ಸಿಮೆಂಟ್ ಇಟ್ಟಿಗೆಯಿಂದ ತಲೆಗೆ ಹೊಡೆದು ಯುವಕನ ಕೊಲೆ

ಬೆಂಗಳೂರು: ಗುರಾಯಿಸಿದ ಕಾರಣಕ್ಕೆ ನಡೆದ ಜಗಳವು ರವಿಕಿರಣ್ (27) ಎಂಬುವವರ ಕೊಲೆಯಲ್ಲಿ ಅಂತ್ಯವಾಗಿದ್ದು, ಆರೋಪಿ ಬಾಲಕೃಷ್ಣನನ್ನು (19) ಯಲಹಂಕ ನ್ಯೂಟೌನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಯುವಕರಿಬ್ಬರೂ ಅಟ್ಟೂರು ಲೇಔಟ್ ನಿವಾಸಿಗಳು. ಏಪ್ರಿಲ್ 25ರಂದು ಠಾಣೆ ವ್ಯಾಪ್ತಿಯ ಬೀಡಾ ಅಂಗಡಿಯೊಂದಕ್ಕೆ ಇಬ್ಬರೂ ಸಿಗರೇಟ್ ಖರೀದಿಸಲು ಹೋಗಿದ್ದರು. ಗುರಾಯಿಸಿದ ಎಂಬ ಕಾರಣಕ್ಕೆ ಮಾತಿಗೆ ಮಾತು ಬೆಳೆದು ಜಗಳವು ವಿಕೋಪಕ್ಕೆ ತಿರುಗಿತ್ತು. ಆರೋಪಿ ಬಾಲಕೃಷ್ಣ ಸಿಮೆಂಟ್ ಇಟ್ಟಿಗೆಯೊಂದರಿಂದ ರವಿಕೃಷ್ಣ ಅವರ ತಲೆಗೆ ಹೊಡೆದಿದ್ದ. ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಚಿಕಿತ್ಸೆಗೆ ಸ್ಪಂದಿಸದೆ ಅವರು ಶನಿವಾರ ಮೃತಪಟ್ಟಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಾರಮ್ಮ ಜಾತ್ರೆ ಸಂಭ್ರಮ

ದಾಬಸ್ ಪೇಟೆ: ಬಣ್ಣದ ಹೂಗಳಿಂದ ಅಲಂಕಾರಗೊಂಡ ದೇವಿಯ ಮೂರ್ತಿ. ತಮಟೆ ವಾದ್ಯಗಳ ನಿನಾದ, ವಾದನಕ್ಕೆ ದೇವಿಯನ್ನು ಎತ್ತಿಕೊಂಡ ಯುವಕರ ನೃತ್ಯ. ಮನೆ ಮನೆಗಳಲ್ಲಿ ಹಬ್ಬದ ವಾತಾವರಣ. ಇದು ನೆಲಮಂಗಲ ತಾಲ್ಲೂಕಿನ ಪ್ರಸಿದ್ದವಾದ ಹದಿನೆಂಟು ಹಳ್ಳಿಗಳ ’ಹೆಗ್ಗುಂದ ಮಾರಮ್ಮ’ ಜಾತ್ರೆ (ಊರ ಜಾತ್ರೆ) ನೋಟ.

ಕೊರೊನಾ ಹಿನ್ನಲೆಯಲ್ಲಿ ಮೂರು ವರ್ಷಗಳಿಂದ ಜಾತ್ರೆ ನಡೆದಿರಲಿಲ್ಲ. ಜಾತ್ರೆಯು ಶುಕ್ರವಾರ ಆರಂಭವಾಗಿದ್ದು, ಮಂಗಳವಾರದವರೆಗೆ ನಡೆಯಲಿದೆ. ಶುಕ್ರವಾರ ಹೊರಟ ದೇವರು ಮಂಗಳವಾರದಂದೇ ದೇವಾಲಯದ ಒಳಗೆ ಕೂರಿಸುವುದು.

ದೇವಾಲಯದಲ್ಲಿ ಧಾರ್ಮಿಕ ಕಾರ್ಯಗಳೊಂದಿಗೆ ದೇವಿಗೆ ವಿಶೇಷ ಪೂಜೆ ನೆರವೇರಿಸಿದ ನಂತರ ತಮಟೆ ಹಾಗೂ ಅರೆ ವಾದ್ಯಗಳೊಂದಿಗೆ ದೇವಿಯ ಮೂರ್ತಿಯನ್ನು ದ್ಯಾವಿಗೆಯಲ್ಲಿ ಕೂರಿಸಿಕೊಂಡು ಜಾತ್ರೆಗೆ ಸೇರುವ ಊರುಗಳಿಗೆ ಮಡ್ಲಕ್ಕಿ ಹಾಗೂ ಪೂಜೆಗೆ ಕರೆದೊಯ್ಯಲಾಗುತ್ತದೆ.

ಸಂಪಿಗೆ ರಸ್ತೆ: ಶೀಘ್ರ ವೈಟ್‌ಟಾಪಿಂಗ್ ಪೂರ್ಣ

ವಿವಿಧ ಅಭಿವೃದ್ಧಿ ಕಾಮಗಾರಿಗಳ ಪರಿಶೀಲಿಸಿದ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ₹175 ಕೋಟಿ ವೆಚ್ಚದಲ್ಲಿ ಇಂಟಿಗ್ರೇಟೆಡ್ ಎಲಿವೇಡೆಡ್ ಕಾರಿಡಾರ್
- ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಸೂಚನೆ

ಬೆಂಗಳೂರು: ಸಂಪಿಗೆ ರಸ್ತೆಯಲ್ಲಿ ಮಂತ್ರಿ ಮಾಲ್ ಬಳಿಯಿಂದ ಯಶವಂತಪುರ ಜಂಕ್ಷನ್‌ವರೆಗೆ ಕೈಗೆತ್ತಿಕೊಂಡಿರುವ ವೈಟ್ ಟಾಪಿಂಗ್ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಅವರು ಭಾನುವಾರ ಪರಿಶೀಲಿಸಿದರು.

ಸಂಪಿಗೆ ರಸ್ತೆಯ ವೈಟ್ ಟಾಪಿಂಗ್ ಕಾಮಗಾರಿಯು ಬಹುತೇಕ ಪೂರ್ಣಗೊಂಡಿದೆ. ಪಾದಚಾರಿ ಮಾರ್ಗ, ಜಲಮಂಡಳಿಯ ಕುಡಿಯುವ ನೀರು ಹಾಗೂ ಒಳಚರಂಡಿ ಕೊಳವೆ ಅಳವಡಿಕೆ, ಬೆಸ್ಕಾಂನ ವಿದ್ಯುತ್ ಕೇಬಲ್‌ಗಳು ಹಾಗೂ ಒಎಫ್‌ಸಿಗಾಗಿ ಪ್ರತ್ಯೇಕ ಡಕ್ಟ್ ಅಳವಡಿಕೆ ಕೆಲಸಗಳು ಬಾಕಿ ಇವೆ.

‘ಈ ಸಣ್ಣ-ಪುಟ್ಟ ಕಾಮಗಾರಿಗಳನ್ನು ಬೇಗ ಮುಗಿಸಿ ಸಂಪಿಗೆ ರಸ್ತೆಯಲ್ಲಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು’ ಎಂದು ಮುಖ್ಯ ಆಯುಕ್ತರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಎಲಿವೇಟೆಡ್ ಕಾರಿಡಾರ್ ಕಾಮಗಾರಿ ಪರಿಶೀಲನೆ: ಯಲಹಂಕ ಠಾಣೆ ಜಂಕ್ಷನ್‌ನಿಂದ ಯಲಹಂಕ ನ್ಯೂ ಟೌನ್‌ನ ಜಲಮಂಡಳಿಯ ಜಂಕ್ಷನ್‌ವರೆಗೆ ₹ 175 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ 1.8 ಕಿ.ಮೀ ಉದ್ದದ ಇಂಟಿಗ್ರೇಟೆಡ್ ಎಲಿವೇಟೆಡ್ ಕಾರಿಡಾರ್ ಕಾಮಗಾರಿಯನ್ನೂ ಮುಖ್ಯ ಆಯುಕ್ತರು ಪರಿಶೀಲಿಸಿದರು. ಕಾರಿಡಾರ್ ಕಾಮಗಾರಿಯನ್ನು ಹಂತ-ಹಂತವಾಗಿ ಜಾರಿಗೊಳಿಸಬೇಕು. ಕಾಮಗಾರಿಯ ವೇಳೆ ವಾಹನಗಳ ಸಂಚಾರಕ್ಕೆ ತೊಂದರೆ ಆಗದಂತೆ ಎಚ್ಚರ ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಲಾಯಿತು.

ಜಯಮಹಲ್ ರಸ್ತೆ ಪರಿಶೀಲನೆ: ಜಯಮಹಲ್ ರಸ್ತೆ ವಿಸ್ತರಣೆಯ ಸಿದ್ಧತೆಗಳನ್ನು ಮುಖ್ಯ ಆಯುಕ್ತರು ಪರಿವೀಕ್ಷಣೆ ನಡೆಸಿದರು.ಮೇಖ್ರಿವೃತ್ತ–ಜಯಮಹಲ್ ರಸ್ತೆಯಲ್ಲಿರುವ ಒಳಚರಂಡಿಯ ಕೊಳವೆಗಳು ಹಾಗೂ ನೀರು ಪೂರೈಕೆ ಕೊಳವೆಗಳನ್ನು ಸ್ಥಳಾಂತರಿಸಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸ್ಯಾಂಕಿ ದಂಡೆ ರಸ್ತೆ: ಟೆಂಡರ್ ಪ್ರಕ್ರಿಯೆ ಶೀಘ್ರ

ಭಾಷ್ಯಂ ವೃತ್ತದಿಂದ ಮಲ್ಲೇಶ್ವರ 18ನೇ ಕ್ರಾಸ್ ನವರೆಗಿನ 900 ಮೀಟರ್ ಉದ್ದದ ಸ್ಯಾಂಕಿ ದಂಡೆ ರಸ್ತೆಯನ್ನು ₹ 60 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಈ ರಸ್ತೆಯ ಅಗಲವನ್ನು 15 ಮೀಟರ್‌ಗೆ ವಿಸ್ತರಿಸುವ ಕ್ರಿಯಾಯೋಜನೆಗೆ ಅನುಮೋದನೆ ಸಿಕ್ಕಿದ್ದು, ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ. ಈ ಕಾಮಗಾರಿ ಅನುಷ್ಠಾನಗೊಳ್ಳುವ ಸ್ಥಳ ಪರಿಶೀಲನೆ ನಡೆಸಿದ ಮುಖ್ಯ ಆಯುಕ್ತರು, ‘ಟೆಂಡರ್ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಿ, ಕೆಲಸ ಪ್ರಾರಂಭಿಸಬೇಕು’ ಎಂದು ಸೂಚನೆ ನೀಡಿದರು.

ರಸ್ತೆಗುಂಡಿ ತಪ್ಪಿಸುವಾಗ ಅವಘಡ: ನಟಿ ಸುನೇತ್ರ ಪಂಡಿತ್ ತಲೆಗೆ ಗಾಯ

ಬೆಂಗಳೂರು: ರಸ್ತೆಗುಂಡಿ ತಪ್ಪಿಸುವಾಗ ಸ್ಕೂಟರ್‌ನಿಂದ ಆಯತಪ್ಪಿ ಬಿದ್ದು ನಟಿ ಸುನೇತ್ರ ಪಂಡಿತ್ ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಚಿತ್ರೀಕರಣ ಮುಗಿದ ಬಳಿಕ ಸಭೆಯೊಂದರಲ್ಲಿ ಭಾಗಿಯಾಗಿದ್ದ ಸುನೇತ್ರ, ಶನಿವಾರ ರಾತ್ರಿ 11.30ರ ಸುಮಾರಿಗೆ ಸ್ಕೂಟರ್‌ನಲ್ಲಿ ಮನೆಗೆ ಮರಳುತ್ತಿದ್ದರು. ಈ ವೇಳೆ ಎನ್.ಆರ್.ಕಾಲೊನಿಯ 9ನೇ ಅಡ್ಡರಸ್ತೆ ಬಳಿ ಇರುವ ಗುಂಡಿ ಹಾಗೂ ಅವೈಜ್ಞಾನಿಕ ರಸ್ತೆ ಉಬ್ಬಿನಿಂದಾಗಿ ಸ್ಕೂಟರ್‌ನಿಂದ ನಿಯಂತ್ರಣ ತಪ್ಪಿ ಕೆಳಕ್ಕೆ ಬಿದ್ದಿದ್ದರು. ಈ ವೇಳೆ ಅವರ ತಲೆಗೆ ಗಂಭೀರ ಗಾಯವಾಗಿತ್ತು.

‘ಸ್ಥಳೀಯರೊಬ್ಬರು ನಮ್ಮ ತಾಯಿಯನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದರು. ಅವರು ಅಪಾಯದಿಂದ ಪಾರಾಗಿದ್ದಾರೆ. ಚಿಕಿತ್ಸೆಗೂ ಸಕಾರಾತ್ಮಕವಾಗಿ ಸ್ಪಂದಿಸುತ್ತಿದ್ದಾರೆ’ ಎಂದು ಸುನೇತ್ರಾ ಅವರ ಮಗಳು ಶ್ರೇಯಾ ತಿಳಿಸಿದ್ದಾರೆ.

ಸುಧಾ ಓದಿರಿ

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತ್
ಮೀನುಗಾರಿಕೆ ಇಲಾಖೆ
ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿ
ಬೆಂಗಳೂರು ಉತ್ತರ ತಾಲ್ಲೂಕು, ಸರ್ಕಾರಿ ಮಂಜುಗಡ್ಡೆ ಕಾರ್ಖಾನೆ ಕಟ್ಟಡ
ಕೆ.ಆರ್.ವೃತ್ತ, ಬೆಂಗಳೂರು–560001

ಸಂಖ್ಯೆ: ಹಗುಪ/02/2022–23 ದಿನಾಂಕ: 07.05.2022

ಕೆರೆಗಳ ಮೀನು ಪಾಶುವಾರು ಹಕ್ಕಿನ ಗುತ್ತಿಗೆ ಪ್ರಕಟಣೆ

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕಿನ ಇಲಾಖಾ ವ್ಯಾಪ್ತಿಯ (1) ಆಲೂರು ಕೆರೆ (2) ಚೊಕ್ಕಸಂದ್ರ ಕೆರೆ (3) ಅಮೃತಹಳ್ಳಿ ಕೆರೆ (4) ಅಳ್ಳಾಳಸಂದ್ರ ಕೆರೆ (5) ಕೊಡಗೀಹಳ್ಳಿ ಕೆರೆ (ದೊಡ್ಡಬೊಮ್ಮಸಂದ್ರ) (6) ಹೆಬ್ಬಾಳ ಕೆರೆ (7) ಜಕ್ಕೂರು ಕೆರೆ (8) ಸೊಂಡೆಕೊಪ್ಪ ಕೆರೆ (9) ಮಲ್ಲತ್ತಹಳ್ಳಿ ಕೆರೆ (10) ಹೆರೋಹಳ್ಳಿ ಕೆರೆ (11) ಹಾರೋಹಳ್ಳಿ ಕೆರೆ (12) ಚೊಕ್ಕನಹಳ್ಳಿ ಕೆರೆ (13) ತಿರುಮೇನಹಳ್ಳಿ ಕೆರೆ (14) ಅಗ್ರಹಾರ ಕೆರೆ (15) ಮಲ್ಲಸಂದ್ರ ಕೆರೆ (16) ನೆಲಗದರನಹಳ್ಳಿ ಕೆರೆ (17) ಮಳೆಕೆರೆ ದೊಡ್ಡಕೆರೆ (18) ಅಬ್ಬಿಗೆರೆ ಕೆರೆ (19) ನರಸೀಪುರ–20 ಕೆರೆ (20) ನರಸೀಪುರ–26 ಕೆರೆ (21) ಐವರಕಂಡಪುರ ಕೆರೆ (22) ಕಮ್ಮಗೊಂಡನಹಳ್ಳಿ ಕೆರೆ (23) ಅಡ್ಡೆವಿಶ್ವನಾಥಪುರ ಕೆರೆ (24) ಲಕ್ಷ್ಮೀಪುರ ಕೆರೆ ಮೀನು ಪಾಶುವಾರು ಹಕ್ಕನ್ನು 2022–23 ನೇ ಸಾಲಿನಿಂದ 5 ವರ್ಷಗಳ ಅವಧಿಗೆ ನೇರ ಗುತ್ತಿಗೆ ಮೂಲಕ ವಿಲೇವಾರಿ ಮಾಡಲಾಗುವುದು. ಆಸಕ್ತಿಯುಳ್ಳ ಮೀನುಗಾರರ ಸಹಕಾರ ಸಂಘಗಳು ಮಾತ್ರ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ದಿನಾಂಕ: 26.05.2022 ರೊಳಗೆ ಈ ಕಛೇರಿಗೆ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

ಸಹಿ/– ಮೀನುಗಾರಿಕೆ ಸಹಾಯಕ ನಿರ್ದೇಶಕರು
ಬೆಂಗಳೂರು ಉತ್ತರ ತಾಲ್ಲೂಕು

DIPR/CP/BCPL/414/2022-23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾವ್ಯಾನಂದ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕನ್ನಡಸಾಹಿತ್ಯಸಂವರ್ಧಕ ಟ್ರಸ್ಟ್ ವತಿಯಿಂದ ‘ಕಾವ್ಯಾನಂದ ಪುರಸ್ಕಾರ’ಕ್ಕೆ ಪುಸ್ತಕಗಳನ್ನು ಆಹ್ವಾನಿಸಲಾಗಿದೆ. ಈ ಪುರಸ್ಕಾರ ₹50 ಸಾವಿರ ನಗದು, ಪ್ರಶಸ್ತಿ ಫಲಕ ಒಳಗೊಂಡಿವೆ.

2019ರ ಜನವರಿಯಿಂದ 2020ರ ಡಿಸೆಂಬರ್‌ವರೆಗೆ ಪ್ರಕಟವಾದ ಪುಸ್ತಕಗಳನ್ನು ಸಲ್ಲಿಸಬಹುದು. ಆಸಕ್ತರು ಜುಲೈ 31ರೊಳಗೆ ಪುಸ್ತಕದ ನಾಲ್ಕು ಪ್ರತಿಗಳನ್ನು ಟ್ರಸ್ಟ್ ವಿಳಾಸಕ್ಕೆ ತಲುಪಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್, 19ನೇ ‘ಜಿ’ ಮುಖ್ಯರಸ್ತೆ, ರಾಜಾಜಿನಗರ.
ಸಂಪರ್ಕ: 080-23321035

ನಗರದಲ್ಲಿ ಇಂದು

ಲಕ್ಷ್ಮೀನರಸಿಂಹ ನವರಾತ್ರೋತ್ಸವ: ಬಾಳೆಹಣ್ಣಿನ ವಿಶೇಷ ಅಲಂಕಾರ, ಆಯೋಜನೆ ಮತ್ತು ಸ್ಥಳ–ಅಭಯ ಲಕ್ಷ್ಮೀನರಸಿಂಹ ಪಟ್ಟಾಭಿರಾಮ ಕಂಭದ ನರಸಿಂಹ ದೇವಸ್ಥಾನ (ವಜ್ರಕ್ಷೇತ್ರ), ತ್ಯಾಗರಾಜನಗರ, ಬೆಳಿಗ್ಗೆ 9ರಿಂದ

ಹಿರಿಯ ಅಧಿಕಾರಿಗಳ ವಸತಿಗೃಹ ಕಟ್ಟಡ ನಿರ್ಮಾಣದ ಶಂಕುಸ್ಥಾಪನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅತಿಥಿ–ಸಚಿವ ಸಿ.ಸಿ. ಪಾಟೀಲ, ಸ್ಥಳ–ಮೂರನೇ ಅಡ್ಡರಸ್ತೆ, ವಸಂತನಗರ, ಬೆಳಿಗ್ಗೆ 9.15

ಆರ್ಟಸ್ಟಿಕ ಉತ್ಸವ: ಚಿತ್ರಕಲಾ ಪ್ರದರ್ಶನ ಮತ್ತು ಸ್ಟುಡಿಯೊ ಉದ್ಘಾಟನೆ, ಆಯೋಜನೆ, ಸ್ಥಳ–ಸೇಂಟ್ ಜೋಸೆಫ್ ಕಾಲೇಜು, ಬೆಳಿಗ್ಗೆ 9.30

ಮಹಾ ಸಂಪ್ರೋಕ್ಷಣ ಮಹೋತ್ಸವ: ಆಯೋಜನೆ ಮತ್ತು ಸ್ಥಳ–ತಿರುಮಲ ತಿರುಪತಿ ದೇವಸ್ಥಾನ, ವೈಯಾಲಿಕಾವಲ್, ಬೆಳಿಗ್ಗೆ 9.30ರಿಂದ

ಅ.ನ.ಕೃಷ್ಣರಾಯರ ಜನ್ಮದಿನ: ಆಯೋಜನೆ–ಮಾವಳ್ಳಿ ಕರ್ನಾಟಕ ಸಂಘ, ಸ್ಥಳ–ಅ.ನ.ಕೃಷ್ಣರಾಯರ ಪ್ರತಿಮೆ, ಸಜ್ಜನ್‌ರಾವ್ ವೃತ್ತ, ವಿ.ವಿ.ಪುರ, ಬೆಳಿಗ್ಗೆ 10.30

ಭಾಷಾಂತರ ಕೋರ್ಸ್‌ನ ಪ್ರಮಾಣಪತ್ರ ವಿತರಣೆ ಮತ್ತು ಉಪನ್ಯಾಸ: ಅಧ್ಯಕ್ಷತೆ–ಬಿ.ಅನ್ನಪೂರ್ಣಮ್ಮ, ಆಯೋಜನೆ–ನ್ಯಾಷನಲ್ ಕಾಲೇಜು, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಸ್ಥಳ–ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ಮಧ್ಯಾಹ್ನ 2.30

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**) ಸಹ ಮಾಡಬಹುದು.

ಲಾಲ್‌ಬಾಗ್: ದುರ್ವಾಸನೆ ಬೀರುವ ಶೌಚಾಲಯ

ಲಾಲ್‌ಬಾಗ್ ಉದ್ಯಾನದಲ್ಲಿರುವ ಸಾರ್ವಜನಿಕ ಶೌಚಾಲಯ

ಲಾಲ್‌ಬಾಗ್ ಉದ್ಯಾನದ ಸಿದ್ದಾಪುರ ಗೇಟ್ ಬಳಿ ಇರುವ ಸಾರ್ವಜನಿಕ ಶೌಚಾಲಯ ದುಸ್ಥಿತಿ ತಲುಪಿದೆ. ತೋಟಗಾರಿಕೆ ಇಲಾಖೆಯು ಶೌಚಾಲಯದ ನಿರ್ವಹಣೆ ಸರಿಯಾಗಿ ಮಾಡುತ್ತಿಲ್ಲ. ಪ್ರತಿದಿನ ಸಾವಿರಾರು ಮಂದಿ ವಾಯುವಿಹಾರಕ್ಕೆ ಬರುತ್ತಾರೆ. ಆದರ, ಈ ಶೌಚಾಲಯ ಇದ್ದೂ ಇಲ್ಲದಂತಾಗಿದೆ.

ಶೌಚಾಲಯದಿಂದ ಮೂತ್ರ ಮತ್ತು ಮಲದ ದುರ್ವಾಸನೆ ಬೀರುತ್ತಿದ್ದು, ಸಾರ್ವಜನಿಕರು ಇದನ್ನು ಬಳಸಲು ಆಗುತ್ತಿಲ್ಲ. ಉದ್ಯಾನದಲ್ಲಿ ಶೌಚಾಲಯ ನಿರ್ಮಿಸಿದರೆ ಸಾಲದು. ಅದರ ನಿರ್ವಹಣೆಯನ್ನೂ ಸಮರ್ಪಕವಾಗಿ ಮಾಡಬೇಕು. ನಾಮಕಾವಸ್ಥೆಯ ಶೌಚಾಲಯದಿಂದ ಜನರಿಗೆ ಯಾವುದೇ ಪ್ರಯೋಜನವಿಲ್ಲ. ಶೌಚಾಲಯಗಳು ಜನಸ್ನೇಹಿಯಾಗಿರಲಿ. ಬಳಕೆಗೆ ಯೋಗ್ಯವಾಗುವಂತೆ ಶೌಚಾಲಯವನ್ನು ಶುಚಿಯಾಗಿಡಲು ಕ್ರಮ ಕೈಗೊಳ್ಳಿ.

–ಉದ್ಯಾನದ ನಡಿಗೆದಾರರು

ಸಹಕಾರ ನಗರದಲ್ಲಿ ಹಾಳಾಗಿರುವ ರಸ್ತೆ

ರಸ್ತೆಯುದ್ದಕ್ಕೂ ಗುಂಡಿ

ಸಹಕಾರ ನಗರದ 20ನೇ ಮುಖ್ಯರಸ್ತೆಯಲ್ಲಿ ವಿದ್ಯುತ್ ಸಂಪರ್ಕಕ್ಕಾಗಿ ರಸ್ತೆ ಅಗೆಯಲಾಗಿತ್ತು. ಆದರೆ, ಕಾಮಗಾರಿ ಮುಗಿದ ನಂತರ ಅದನ್ನು ಸರಿಯಾಗಿ ಮುಚ್ಚಿಲ್ಲ. ಇದರಿಂದ ರಸ್ತೆಯುದ್ದಕ್ಕೂ ಗುಂಡಿ ಬಿದ್ದಿದೆ. ಪ್ರತಿದಿನ ಸಾವಿರಾರು ವಾಹನಗಳು ಇದೇ ರಸ್ತೆಯಲ್ಲಿ ಸಂಚರಿಸುತ್ತವೆ.

ಗುಂಡಿ ಮಾರ್ಗದಲ್ಲಿ ಮಳೆ ಬಂದಾಗ ನೀರು ಹರಿಯುತ್ತದೆ. ಡಾಂಬರು ಕಿತ್ತಿರುವುದರಿಂದ ವಾಹನಗಳ ಸಂಚಾರಕ್ಕೆ ಸಮಸ್ಯೆಯಾಗಿದೆ. ಸಂಬಂಧಪಟ್ಟ ಇಲಾಖೆಯವರು ಈ ಬಗ್ಗೆ ಗಮನಹರಿಸಬೇಕು. ಗುಂಡಿಗೆ ಡಾಂಬರು ಹಾಕುವ ಮೂಲಕ ರಸ್ತೆಯನ್ನು ಸಂಚಾರಕ್ಕೆ ಮುಕ್ತಗೊಳಿಸಿ.

ರಮೇಶ್ ಗೌಡ, ನಾಗವಾರ

ಶೌಚಾಲಯದ ಬಾಗಿಲು ತೆರೆಯಿರಿ

ಮೆಜೆಸ್ಟಿಕ್‌ನ ಬಿಎಂಟಿಸಿ ಬಸ್ ನಿಲ್ದಾಣದಲ್ಲಿ ಶೌಚಾಲಯಕ್ಕೆ ಬೀಗ ಹಾಕಲಾಗಿದೆ.

ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಬಿಎಂಟಿಸಿ ಬಸ್‌ಗಳು ನಿಲ್ಲುವ ಪ್ಲಾಟ್‌ಫಾರ್ಮ್ 19ರ ಬಳಿ ಇರುವ ಸಾರ್ವಜನಿಕ ಶೌಚಾಲಯ ಸುಮಾರು ಐದು ತಿಂಗಳುಗಳಿಂದ ಮುಚ್ಚಲಾಗಿದೆ. ಇದರಿಂದ ನಿಲ್ದಾಣಕ್ಕೆ ಬರುವ ಸಾವಿರಾರು ಪ್ರಯಾಣಿಕರಿಗೆ ಸಮಸ್ಯೆಯಾಗಿದೆ. ಶೌಚಾಲಯದ ಬಾಗಿಲು ಮುಚ್ಚಿರುವುದರಿಂದ ಪುರುಷರು ಪ್ಲಾಟ್‌ಫಾರ್ಮ್ ಪಕ್ಕದಲ್ಲೇ ಮೂತ್ರ ವಿಸರ್ಜನೆ ಮಾಡುತ್ತಾರೆ. ಇದರಿಂದ ಅಲ್ಲಿರುವ ಪ್ರಯಾಣಿಕರಿಗೆ ಕಿರಿಕಿರಿಯಾಗುವುದಲ್ಲದೆ, ದುರ್ನಾತವನ್ನೂ ತಡೆದುಕೊಳ್ಳಬೇಕಾಗಿದೆ. ಮಹಿಳೆಯರು ತುರ್ತು ಸಮಸ್ಯೆಯಿಂದ ಪರದಾಡುವುದನ್ನು ಹಲವು ಬಾರಿ ನೋಡಿದ್ದೇನೆ. ಅಲ್ಲೇ ಇರುವ ಅಧಿಕಾರಿಗಳು ಇದನ್ನು ಕಂಡೂ ಕಾಣದಂತೆ ಮೌನವಾಗಿರುತ್ತಾರೆ. ಶೌಚಾಲಯ ಸ್ವಚ್ಛಗೊಳಿಸಿ ಸಾರ್ವಜನಿಕರ ಬಳಕೆಗೆ ಅನುಕೂಲ ಮಾಡಿಕೊಡಿ.

ಗೋಪಾಲ್, ಸಾರ್ವಜನಿಕ

ಬೀದಿ ದೀಪಗಳು ಬೆಳಕು ನೀಡಲಿ



ಕತ್ತಲು ಆವರಿಸಿರುವ ಕೆಂಗೇರಿ ವರ್ತುಲ ರಸ್ತೆ

ಕೆಂಗೇರಿ ವರ್ತುಲ ರಸ್ತೆಯ ಮರಿಯಪ್ಪನ ಪಾಳ್ಯದಿಂದ ಕೆಂಚನಪುರ ಕ್ರಾಸ್ ಹಾಗೂ ನಾಗದೇವನಹಳ್ಳಿವರೆಗೆ ಎರಡು ತಿಂಗಳಿನಿಂದ ವೈಟ್‌ಟಾಪಿಂಗ್ ಕೆಲಸ ನಡೆಯುತ್ತಿದೆ. ಕೆಂಚನಪುರ ಕ್ರಾಸ್‌ನಿಂದ ಆರ್.ಆರ್.ಬಡಾವಣೆವರೆಗಿನ ಮಾರ್ಗದಲ್ಲಿ ಬೀದಿದೀಪಗಳು ಕೆಟ್ಟಿವೆ. ಒಂದು ತಿಂಗಳಿನಿಂದಲೂ ಈ ಸಮಸ್ಯೆ ಮುಂದುವರಿದಿದ್ದು, ಸಂಜೆಯಾದರೆ ಈ ರಸ್ತೆಪೂರ್ಣ ಕತ್ತಲು ಆವರಿಸಿಕೊಂಡಿರುತ್ತದೆ.

ರಸ್ತೆಯಲ್ಲಿ ಎರಡೂ ಬದಿ ವಾಹನಗಳು ಸಂಚರಿಸುವುದರಿಂದ ದಟ್ಟಣೆಯೂ ಹೆಚ್ಚು. ಕೇಬಲ್ ಅಳವಡಿಕೆಗಾಗಿ ರಸ್ತೆ ಪಕ್ಕದಲ್ಲಿ ಅಗೆದಿರುವ ಗುಂಡಿಗಳನ್ನೂ ಮುಚ್ಚಿಲ್ಲ. ಇದರಿಂದ ಪಾದಚಾರಿಗಳಿಗೆ ಬಹಳ ಸಮಸ್ಯೆಯಾಗಿದೆ. ಈ ಬಗ್ಗೆ ಪಾಲಿಕೆಗೆ ಹಲವು ಬಾರಿ ದೂರು ನೀಡಿದರೂ ದುರಸ್ತಿಗೆ ಮುಂದಾಗಿಲ್ಲ. ದಯವಿಟ್ಟು ರಸ್ತೆಯಲ್ಲಿರುವ ಬೀದಿ ದೀಪಗಳನ್ನು ಸರಿಪಡಿಸಬೇಕು.

ಲೋಹಿತಾಶ್ವ, ಜಗಜ್ಯೋತಿ ಬಡಾವಣೆ

ಚಾವಣಿ ಹಾಸು ದುರಸ್ತಿ ಮಾಡಿ



ವಿಕಾಸ ಸೌಧದ ಬಳಿ ಚಾವಣಿ ಹಾಸು ಹಾಳಾಗಿರುವುದು.

ವಿಕಾಸ ಸೌಧ ಮುಂಭಾಗದ ಮೆಟ್ರೊ ನಿಲ್ದಾಣದ ಬಳಿ ಸಾರ್ವಜನಿಕರ ಅನುಕೂಲಕ್ಕಾಗಿ ನಿರ್ಮಿಸಿರುವ ಚಾವಣಿ ಹಾಸು ಹಾಳಾಗಿದೆ. ನೆರಳಿಗಾಗಿ ಮೇಲೆ ಹಾಕಿದ್ದ ವಸ್ತುಗಳು ಹಳೆಯದಾಗಿರುವುದರಿಂದ ಕಿತ್ತು ಬರುತ್ತಿವೆ. ಇದರಿಂದ ಸಾರ್ವಜನಿಕರಿಗೆ ಬಿಸಿಲು, ಮಳೆಯಿಂದ ರಕ್ಷಣೆಗೆ ತೊಂದರೆಯಾಗುತ್ತಿದೆ. ಸಾರ್ವಜನಿಕರ ಹಿತದೃಷ್ಟಿಯಿಂದ ಮೇಲ್ಚಾವಣಿಯನ್ನು ಶೀಘ್ರವಾಗಿ ದುರಸ್ತಿ ಮಾಡಿ.

ಲಕ್ಷ್ಮೀಕಾಂತ್, ಸಾರ್ವಜನಿಕ

ರಸ್ತೆ ಸರಿಪಡಿಸಿ

ಚಾಮರಾಜಪೇಟೆಯ ಅಪ್ಪುರಾವ್ ರಸ್ತೆಯ ಸ್ಥಿತಿ

ಚಾಮರಾಜಪೇಟೆಯ ಅಪ್ಪುರಾವ್ ರಸ್ತೆ ಬಹಳ ದಿನಗಳಿಂದ ಹದಗೆಟ್ಟಿದೆ. ಸದಾ ಜನಜಂಗುಳಿ ಹಾಗೂ ವಾಹನ ಸಂಚಾರವಿರುವ ಈ ರಸ್ತೆ ಹಳ್ಳಗಳಿಂದ ತುಂಬಿದೆ. ಮಳೆ ಬಂದರೆ ರಸ್ತೆ ಜಲಾವೃತಗೊಳ್ಳುತ್ತದೆ. ಗುಂಡಿಗಳ ನಡುವೆ ವಾಹನಗಳು ಸಂಚರಿಸುವುದು ಸವಾಲಿನ ಕೆಲಸ. ಈ ಸ್ಥಿತಿಯಿಂದಾಗಿ ಹಲವಾರು ಅಪಘಾತಗಳು ಸಂಭವಿಸಿದ್ದು, ರಸ್ತೆಯನ್ನು ಶೀಘ್ರವಾಗಿ ದುರಸ್ತಿ ಮಾಡಿದರೆ ಒಳ್ಳೆಯದು.

ಸಂಜೀವಿನಿ, ಚಾಮರಾಜಪೇಟೆ

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

WANTED BUSINESS Partner Non Veg Hotel 10 Lakhs Investment Monthly Income 2 Lakhs: 9606701007/ 8892501007

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

REAL ESTATE SELLING

Flat

Frazer Town

RS. 30 Lakhs and 62 Lakhs, 1 & 2 BHK Ready to move/ Register with A khata, Power & Water 2kms from Frazer Town, last Flats Call Sterling Directly: 9886142684

JOB OPPORTUNITIES

General

WANTED EXPERIENCED, Efficient Retired officials andEntrepreneurs Male /Female for INDIA'S MOST TRUSTED BRAND 9886326012

ASTRO YATRA

ವಿಶ್ವವಿಖ್ಯಾತ ಕೇರಳ ಜ್ಯೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ಪ್ಯಾಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು–04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು–84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

PROSPECTIVE CAREER, Retired, VRS, Professionals, Senior Citizens, Business People, Substantial Income. International Recognition. 97400-90431/ 8884445665

Part-Time Jobs

REPUTED MNC COMPANT will Provide WORK FROM HOME, Earn 30000 to 35000 Malleshwaram. Contact: 7019215243/ 9886641282

I, USHA RAO W/o. Pradeep Madhava Rao with address at #238, 1st Floor, 12th A Main Road, 6th Block Rajajinagar, Bengaluru-560010 Have Changed My Name to M.N. USHA vide Affidavit Dated 06-05-2022 Before Notary S.Vijayakumar, Bangalore.

I, MARY SHALINI, residing at No-1110/02 1st Main 1st Cross S H Layout, K B Sandra Bengaluru-560032 have changed my name to SHALINI R, vide affidavit dated-06-05-2022 before Notary SIVAKUMARA M N, Bengaluru.

PERSONAL

Change of Name

I, PRADEEP RAO MADHAVA RAO S/o. J. Madhava Rao with address at #238, 1st Floor, 12th A Main Road, 6th Block Rajajinagar, Bengaluru- 560010 Have Changed My Name to PRADEEP MADHAVA RAO vide Affidavit Dated 06-05-2022 Before Notary S.Vijayakumar, Bangalore.

Wanted

WANTED FEMALE Office Assistant Qualification any Degree, Good Communication Skills: Kannada, English, Hindi. in around Rajajinagar Contact: 23307910/ 9108458798

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Classifieds
Book Your Classifieds Ads
Online Log in to dhclassifieds.com
For More Details Call
9880856233 • 9886213331
Email: Santhoshkumar@deccanherald.co.in

‘ವಿಶ್ವ ಬ್ಯಾಂಕ್ ನೆರವಿನ ರಿವಾರ್ಡ್ ಯೋಜನೆ’ ಕಾರ್ಯಕ್ರಮದಲ್ಲಿ ಸಿಎಂ ಸೂಚನೆ

ಜಲಾನಯನ ಕಾರ್ಯ: ಮೌಲ್ಯಮಾಪನ ನಡೆಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಾನಯನ ಯೋಜನೆ ಅಡಿಯಲ್ಲಿ ಈವರೆಗೆ ಕೈಗೊಂಡಿರುವ ಕಾಮಗಾರಿಗಳ ಪರಿಣಾಮಗಳ ಕುರಿತು ಮೌಲ್ಯಮಾಪನ ನಡೆಸಬೇಕು ಎಂದು ಜಲಾನಯನ ಅಭಿವೃದ್ಧಿ ಇಲಾಖೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದರು.

ಹೆಬ್ಬಾಳದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಭಾಂಗಣದಲ್ಲಿ ಭಾನುವಾರ ನಡೆದ ‘ವಿಶ್ವ ಬ್ಯಾಂಕ್ ನೆರವಿನ ರಿವಾರ್ಡ್ ಯೋಜನೆ’ ಮತ್ತು ಜಲಾನಯನ ಉತ್ಕೃಷ್ಟತಾ ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿಯವರು ಅಧಿಕಾರಿಗಳಿಗೆ ಈ ಸೂಚನೆ ನೀಡಿದರು.

‘ಸುಜಲಾ ಒಂದು, ಎರಡು ಮತ್ತು ಮೂರನೇ ಹಂತದ ಯೋಜನೆಗಳಲ್ಲಿ ನೂರಾರು ಕೋಟಿ ರೂಪಾಯಿ ಮೊತ್ತದ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಒಂದೂವರೆ ದಶಕದಿಂದ ಈ ಯೋಜನೆ ಜಾರಿಯಲ್ಲಿದೆ. ಇದರಿಂದ ಮಣ್ಣು ಮತ್ತು ನೀರಿನ ಸಂರಕ್ಷಣೆಗೆ ಯಾವ ಅನುಕೂಲಗಳಾಗಿವೆ ಎಂಬುದನ್ನು ತಿಳಿಯಬೇಕು. ಅಂತರ್ಜಲ ಮಟ್ಟ ಹೆಚ್ಚಳಕ್ಕೆ ಯೋಜನೆಯಿಂದ ಎಷ್ಟು ಸಹಾಯವಾಗಿದೆ ಎಂಬುದನ್ನೂ ಪತ್ತೆ ಮಾಡಬೇಕು. ಹಿಂದಿನ ಕಾಮಗಾರಿಗಳ ಅನುಷ್ಠಾನದಲ್ಲಿನ ಒಳ್ಳೆಯ ಅಂಶಗಳು ಹಾಗೂ ಲೋಪಗಳನ್ನು ಅರಿಯಬೇಕು. ಅದರ ಆಧಾರದಲ್ಲೇ ಹೊಸ ಯೋಜನೆ ಅನುಷ್ಠಾನಕ್ಕೆ ಮಾರ್ಗಸೂಚಿ ರೂಪಿಸಬೇಕು’ ಎಂದು ಹೇಳಿದರು.

ವಿಶ್ವ ಬ್ಯಾಂಕ್ ನೆರವಿನ ರಿವಾರ್ಡ್ ಯೋಜನೆಗೆ ಭಾನುವಾರ ಕೇಂದ್ರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಗಿರಿರಾಜ್ ಸಿಂಗ್ ಅವರು ಚಾಲನೆ ನೀಡಿದರು. ರಾಷ್ಟ್ರೀಯ ಮಳೆಯಾಶ್ರಿತ ಪ್ರದೇಶ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಡಾ. ಅಶೋಕ್ ದಳವಾಯಿ, ಕೃಷಿ ಸಚಿವ ಬಿ.ಸಿ. ಪಾಟೀಲ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

ನಕಲಿ ಬೀಜಗಳ ಹಾವಳಿ ರೈತರಿಗೆ ದೊಡ್ಡ ಸವಾಲಾಗಿದೆ. ಈ ಸಮಸ್ಯೆ ನಿವಾರಿಸಲು ಬೀಜೋತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಬೇಕಿದೆ. ಖಾಸಗಿ ಕಂಪನಿಗಳು ಮಾರುಕಟ್ಟೆಗೆ ಪೂರೈಸುವ ಬೀಜಗಳ ಪೂರ್ವಾಪರ ಮಾಹಿತಿಯನ್ನು ತಿಳಿಯಲು ‘ಸೀಡ್ ಟ್ರ್ಯಾಕಿಂಗ್’ ವ್ಯವಸ್ಥೆಯನ್ನು ಜಾರಿಗೊಳಿಸಬೇಕಿದೆ ಎಂದರು.

ಹಿಡುವಳಿ ಕಾರ್ಡ್: ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿ, ‘ವಿಶ್ವ ಬ್ಯಾಂಕ್ ನೆರವಿನ ರಿವಾರ್ಡ್ ಯೋಜನೆಯ ಅಡಿಯಲ್ಲಿ ರೈತರಿಗೆ ಹಿಡುವಳಿ ಕಾರ್ಡ್ ವಿತರಿಸಲಾಗುವುದು. ಪ್ರತಿ ರೈತರ ಹಿಡುವಳಿ ಜಮೀನಿನ ವಿವರ, ಅದರಲ್ಲಿನ ಬೆಳೆಗಳು, ಜಮೀನಿನಲ್ಲಿರುವ ಸಮಸ್ಯೆಗಳ ಮಾಹಿತಿಗಳನ್ನು ಅದರಲ್ಲಿ ನಮೂದಿಸಲಾಗುವುದು. ಎಲ್ಲ ರೈತರೂ ಈ ಯೋಜನೆಯ ಲಾಭ ಪಡೆಯಬೇಕು’ ಎಂದರು.

ಕೃಷಿ ಸಚಿವ ಬಿ.ಸಿ. ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು. ಒಡಿಶಾ ಕೃಷಿ ಸಚಿವ ಅರುಣ್ ಕುಮಾರ್ ಸಾಹೂ ಅಲ್ಲಿನ ಜಲಾನಯನ ಅಭಿವೃದ್ಧಿ ಯೋಜನೆ ಅನುಷ್ಠಾನಕ್ಕೆ ಕೈಗೊಂಡಿರುವ ಕ್ರಮಗಳ ಕುರಿತು ವಿವರಿಸಿದರು. ಸಚಿವರಾದ ಮುನಿರತ್ನ, ಎಸ್.ಟಿ. ಸೋಮಶೇಖರ್, ವಿಧಾನ ಪರಿಷತ್ ಸದಸ್ಯ ಎಚ್.ಎಂ. ರಮೇಶ್ ಗೌಡ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ರಾಷ್ಟ್ರೀಯ ಮಳೆಯಾಶ್ರಿತ ಪ್ರದೇಶ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಅಶೋಕ್ ದಳವಾಯಿ, ವಿಶ್ವ ಬ್ಯಾಂಕ್‌ನ ಕೃಷಿ ತಜ್ಞ ಆಂಡ್ರೀವ್ ದಿ ಗುಡ್ ಲ್ಯಾಂಡ್, ಕೃಷಿ ಇಲಾಖೆ ಕಾರ್ಯದರ್ಶಿ ಶಿವಯೋಗಿ ಸಿ. ಕಳಸದ, ಆಯುಕ್ತ ಡಾ.ಎಂ.ವಿ. ವೆಂಕಟೇಶ್, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್. ರಾಜೇಂದ್ರ ಪ್ರಸಾದ್ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆ ನಿರ್ದೇಶಕ ಬಿ.ವೈ. ಶ್ರೀನಿವಾಸ್ ಉಪಸ್ಥಿತರಿದ್ದರು.

‘ಫಲವತ್ತತೆ ಹೆಚ್ಚಿಸಲು ಉನ್ನತ ಕೇಂದ್ರ’

‘ಬಂಜರು ಜಮೀನುಗಳಲ್ಲಿ ಫಲವತ್ತತೆ ಹೆಚ್ಚಿಸುವುದಕ್ಕಾಗಿಯೇ ವಿಶ್ವ ಬ್ಯಾಂಕ್ ಸಹಭಾಗಿತ್ವದಲ್ಲಿ ಉನ್ನತ ಮಟ್ಟದ ಕೇಂದ್ರ (ಸೆಂಟರ್ ಫಾರ್ ಎಕ್ಸಲೆನ್ಸ್) ಸ್ಥಾಪಿಸಬೇಕಿದೆ’ ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಗಿರಿರಾಜ್ ಸಿಂಗ್ ಸಲಹೆ ನೀಡಿದರು.

‘ಕರ್ನಾಟಕದಲ್ಲಿ ಈಗಾಗಲೇ ಜಲಾನಯನ ಯೋಜನೆ ಅಡಿಯಲ್ಲಿ ಸಾವಿರಾರು ಎಕರೆ ಬಂಜರು ಜಮೀನಿನಲ್ಲಿ ಫಲವತ್ತತೆ ಹೆಚ್ಚಿಸಲಾಗಿದೆ. ಉನ್ನತ ಮಟ್ಟದ ಕೇಂದ್ರದ ಮೂಲಕ ಹೆಚ್ಚು ಕೆಲಸ ಮಾಡಬೇಕು. ಬಂಜರು ಜಮೀನಿನಲ್ಲಿ ಫಲವತ್ತತೆ ಹೆಚ್ಚಿಸಿ, ತೋಟಗಾರಿಕಾ ಬೆಳೆಗಳನ್ನು ಬೆಳೆಯುವ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಬೇಕು’ ಎಂದರು.

ಸಾಧಕರಿಗೆ ಸನ್ಮಾನ

ಅತ್ಯುತ್ತಮ ರೈತ ಉತ್ಪಾದಕ ಸಂಸ್ಥೆಗಳಿಗೆ ಇದೇ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ರೈತ ಉತ್ಪಾದಕ ಸಂಸ್ಥೆಗಳ ಏಕರೂಪ ಬ್ರಾಂಡಿಂಗ್ ಸ್ಪರ್ಧೆಗೂ ಚಾಲನೆ ನೀಡಲಾಯಿತು. ರಾಜ್ಯದ ವಿವಿಧ ತಾಲ್ಲೂಕುಗಳಲ್ಲಿ ರೈತರ ಜಮೀನಿಗೆ ತೆರಳಿ ಸೇವೆ ಒದಗಿಸುವುದಕ್ಕಾಗಿ ಸಿದ್ಧಪಡಿಸಿರುವ 100 ಸಂಚಾರಿ ಕೃಷಿ ಪ್ರಯೋಗಾಲಯಗಳಿಗೂ ಮುಖ್ಯಮಂತ್ರಿ ಹಾಗೂ ಕೇಂದ್ರ ಸಚಿವರು ಚಾಲನೆ ನೀಡಿದರು.

19 ಲಕ್ಷ ಇವಿಎಂ ಕಣ್ಮರೆ: ತನಿಖೆಗೆ ಪಾಟೀಲ ಆಗ್ರಹ

ಬೆಂಗಳೂರು: ದೇಶದ ವಿವಿಧ ರಾಜ್ಯಗಳಲ್ಲಿ ಚುನಾವಣೆಗಳಿಗೆ ಬಳಕೆ ಮಾಡಲು ಪೂರೈಸಿದ್ದ 19 ಲಕ್ಷ ವಿದ್ಯುನ್ಮಾನ ಮತಯಂತ್ರಗಳು (ಇವಿಎಂ) ಕಣ್ಮರೆಯಾಗಿರುವ ಕುರಿತು ಸ್ವತಂತ್ರ ತನಿಖೆ ನಡೆಸಲು ರಾಷ್ಟ್ರಪತಿಯವರಿಗೆ ಪತ್ರ ಬರೆಯುವಂತೆ ಕಾಂಗ್ರೆಸ್ ಶಾಸಕ ಎಚ್.ಕೆ. ಪಾಟೀಲ ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಆಗ್ರಹಿಸಿದರು.

ವಿಧಾನಸಭೆಯ ಕಳೆದ ಅಧಿವೇಶನದಲ್ಲಿ ಚುನಾವಣಾ ಸುಧಾರಣೆ ಕುರಿತು ಚರ್ಚೆ ನಡೆದಿತ್ತು. ಆಗ, 19 ಲಕ್ಷ ಇವಿಎಂಗಳು ಕಣ್ಮರೆಯಾಗಿರುವ ಕುರಿತು ಕೇಂದ್ರ ಚುನಾವಣಾ ಆಯೋಗವು ಮಾಹಿತಿ ಹಕ್ಕು ಕಾಯ್ದೆಯಡಿ ನೀಡಿರುವ ಮಾಹಿತಿಯಲ್ಲಿ ಒಪ್ಪಿಕೊಂಡಿರುವುದನ್ನು ಪಾಟೀಲ ಪ್ರಸ್ತಾಪಿಸಿದ್ದರು. ಈ ದಾಖಲೆಗಳನ್ನು ಒದಗಿಸುವುದಾಗಿ ಹೇಳಿದ್ದರು.

ಮಾಹಿತಿ ಹಕ್ಕು ಹೋರಾಟಗಾರ ಮನೋರಂಜನ್ ರಾಯ್ ಕೇಂದ್ರ ಚುನಾವಣಾ ಆಯೋಗ ಸೇರಿದಂತೆ ವಿವಿಧ ಪ್ರಾಧಿಕಾರಗಳಿಂದ ಪಡೆದಿರುವ ಅಧಿಕೃತ ಮಾಹಿತಿಯ 2,750 ಪುಟಗಳಷ್ಟು ದಾಖಲೆಗಳನ್ನು ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ಭಾನುವಾರ ಸಲ್ಲಿಸಿದರು.

ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ‘ಹಲವು ವರ್ಷಗಳಿಂದ ಚುನಾವಣಾ ಪ್ರಕ್ರಿಯೆಗೆ ಒದಗಿಸಿದ್ದ 19 ಲಕ್ಷ ಇವಿಎಂಗಳು ಎಲ್ಲಿವೆ ಎಂಬುದು ಗೊತ್ತಿಲ್ಲ. ಅವುಗಳನ್ನು ಬಳಸಿ ಚುನಾವಣಾ ಅಕ್ರಮ ಎಸಗುವ ಸಾಧ್ಯತೆ ಇದೆ. ಈ ಕುರಿತು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಲು ಕ್ರಮ ಕೈಗೊಳ್ಳುವಂತೆ ರಾಷ್ಟ್ರಪತಿಯವರಿಗೆ ತಿಳಿಸಲು ಸ್ಪೀಕರ್ ಅವರನ್ನು ಒತ್ತಾಯಿಸಿದ್ದೇನೆ’ ಎಂದರು.

ನಗರದ ಹಲವೆಡೆ ಬಿರುಗಾಳಿ ಸಹಿತ ಆಲಿಕಲ್ಲು ಮಳೆ • ಕಂಬಗಳು ಉರುಳಿ ವಿದ್ಯುತ್ ವ್ಯತ್ಯಯ

ಗಾಳಿ, ಮಳೆ: ಕುಸಿದ ಚಾವಣಿ – ಧರೆಗುರುಳಿದ ಮರಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಭಾನುವಾರ ಬಿರುಗಾಳಿ ಸಹಿತ ಆಲಿಕಲ್ಲು ಮಳೆ ಸುರಿದಿದ್ದು, ಹಲವು ಮರ ಹಾಗೂ ವಿದ್ಯುತ್ ಕಂಬಗಳು ಧರೆಗೆ ಉರುಳಿ ಸಾಕಷ್ಟು ಹಾನಿಯಾಗಿದೆ.

ಬೆಳಿಗ್ಗೆಯಿಂದಲೇ ಬಿಸಿಲಿನ ವಾತಾವರಣ ಇತ್ತು. ಸಂಜೆಯ ವೇಳೆ ಕಾರ್ಮೋಡಗಳು ದಟ್ಟೈಸಿ ಬಿರುಗಾಳಿ ಸಹಿತ ಜೋರು ಮಳೆ ಶುರುವಾಯಿತು.

ಕೋರಮಂಗಲದಲ್ಲಿ ಮರ ಬಿದ್ದು ಕಾರು ಹಾಗೂ ಆಂಬುಲೆನ್ಸ್ ಜಖಂ ಗೊಂಡಿದ್ದವು. ಬಿಟಿಎಂ ಲೇಔಟ್‌ನಲ್ಲಿ ಒಟ್ಟು 7 ಕಡೆ ವಿದ್ಯುತ್ ಕಂಬಗಳು ಧರೆಗೆ ಉರುಳಿದವು. ಎನ್.ಎಸ್. ಪಾಳ್ಯದಲ್ಲಿ ಮರವೊಂದು ಬಿದ್ದಿದ್ದರಿಂದ ಕಾರೊಂದು ಸಂಪೂರ್ಣವಾಗಿ ನುಜ್ಜುಗುಜ್ಜಾಗಿತ್ತು. ಎಚ್‌ಎಸ್‌ಆರ್ ಲೇಔಟ್‌ನ 24ನೇ ಮುಖ್ಯರಸ್ತೆಯಲ್ಲಿ ಮರದ ಕೊಂಬೆಯೊಂದು ಮುರಿದುಬಿದ್ದು ಕಾರೊಂದಕ್ಕೆ ಹಾನಿಯಾಗಿತ್ತು.

ಎಚ್‌ಎಸ್‌ಆರ್ ಬಡಾವಣೆಯಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣದ ಗ್ಯಾಲರಿಯ ಚಾವಣಿಯೂ ಕುಸಿದು ಬಿದ್ದಿದೆ. ಮಾರ್ಚ್ 1ರಂದು ನಡೆದಿದ್ದ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈ ಕ್ರೀಡಾಂಗಣವನ್ನು ಉದ್ಘಾಟಿಸಿದ್ದರು. ಬಿರುಗಾಳಿಯಿಂದಾಗಿ ಬಿಟಿಎಂ ಬಡಾವಣೆಯ ಬೇಕರಿಯೊಂದರ ಎದುರು ಹಾಕಲಾಗಿದ್ದ ಚಾವಣಿಯೂ ಉರುಳಿ ಬಿದ್ದಿತು. ಆ ಚಾವಣಿಯ ಕೆಳಗೆ ಕೆಲ ಯುವಕರು ನಿಂತಿದ್ದರು. ಅವರಿಗೆ ಯಾವುದೇ ತೊಂದರೆ ಆಗಿಲ್ಲ.



ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣದ ಗ್ಯಾಲರಿಯ ಚಾವಣಿ ಕುಸಿದಿರುವುದು

ವಿದ್ಯುತ್ ತಂತಿಗಳ ಮೇಲೆ ಮರದ ಕೊಂಬೆ ಮುರಿದು ಬಿದ್ದಿರುವುದು

ರಾಜರಾಜೇಶ್ವರಿ ನಗರ, ಕೆಂಗೇರಿ ಸೇರಿದಂತೆ ಕೆಲವೆಡೆ ಆಲಿಕಲ್ಲು ಸಹಿತ ಮಳೆಯಾಗಿದೆ. ಈ ದೃಶ್ಯಗಳನ್ನು ಮೊಬೈಲ್‌ಗಳಲ್ಲಿ ಸೆರೆಹಿಡಿದಿರುವ ಹಲವರು ಅದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಾಕಿ ಖುಷಿಪಟ್ಟಿದ್ದಾರೆ. ಆಲಿಕಲ್ಲು ಮಳೆಯಿಂದಾಗಿ ಕೆಂಗೇರಿ ಬಳಿ ರಸ್ತೆ ಕಾಣದೆ ಕಾರು ಚಾಲಕರೊಬ್ಬರು ಪರದಾಡಿರುವ ವಿಡಿಯೊ ಕೂಡ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ವಿದ್ಯುತ್ ವ್ಯತ್ಯಯ: ಭಾರಿ ಗಾಳಿ ಹಾಗೂ ಮಳೆಯಿಂದಾಗಿ ಕಂಬಗಳು ಉರುಳಿ ಬಿದ್ದಿದ್ದರಿಂದ ವಿದ್ಯುತ್ ಪೂರೈಕೆಯಲ್ಲೂ ವ್ಯತ್ಯಯ ಉಂಟಾಗಿತ್ತು.

‘ಎಚ್‌ಎಸ್‌ಆರ್ ಲೇಔಟ್‌ನಲ್ಲಿ 35, ನೆಲಮಂಗಲದಲ್ಲಿ 21 ಮರಗಳು ಬಿದ್ದಿರುವ ಕುರಿತು ವರದಿಯಾಗಿದೆ. ಕೆಂಗೇರಿ, ಬಂಡೇಮಠ, ಎಚ್‌ಎಸ್ ಆರ್ ಲೇಔಟ್ ಹಾಗೂ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಿದೆ’ ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

ನಾಗರಿಕರ ಪರದಾಟ: ಮಳೆಯಿಂದಾಗಿ ಹಲವೆಡೆ ವಾಹನ ಸಂಚಾರ ಅಸ್ತವ್ಯಸ್ತವಾಗಿತ್ತು. ಇದರಿಂದ ನಾಗರಿಕರು ಪರದಾಡಬೇಕಾಯಿತು. ಕೆ.ಆರ್. ಮಾರುಕಟ್ಟೆ ಸೇರಿದಂತೆ ನಗರದ ವಿವಿಧೆಡೆ ಸುರಿದ ಮಳೆಯಿಂದ ಬೀದಿ ಬದಿ ವ್ಯಾಪಾರಿಗಳು ಸಂಕಷ್ಟ ಎದುರಿಸುವಂತಾಯಿತು.

‘ಪಠ್ಯಪುಸ್ತಕದಲ್ಲಿ ತಾಯಿ ಮಹತ್ವ ತಿಳಿಸಿ’

ಬೆಂಗಳೂರು: ‘ಪಠ್ಯಪುಸ್ತಕಗಳಲ್ಲಿ ತಾಯಿ ಮಹತ್ವದ ಬಗ್ಗೆ ತಿಳಿಸಿಕೊಡುವ ವಿಷಯ ಸೇರಿಸಬೇಕು’ ಎಂದು ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಒತ್ತಾಯಿಸಿದ್ದಾರೆ.ಈ ಬಗ್ಗೆ ಮುಖ್ಯಮಂತ್ರಿ ಮತ್ತು ಶಿಕ್ಷಣ ಸಚಿವರಿಗೆ ಪತ್ರ ಬರೆದಿರುವ ಅವರು, ‘ಪ್ರಾಥಮಿಕ, ಪ್ರೌಢ ಶಿಕ್ಷಣದಲ್ಲಿ ತಾಯಿಯ ಮಹತ್ವ ಸಾರುವ ವಿಷಯವನ್ನು ಪಠ್ಯದಲ್ಲಿ ಸೇರಿಸಬೇಕು’ ಎಂದು ಕೋರಿದ್ದಾರೆ.

ಅಪಘಾತ: 8 ಸಾವು

ಹೈದರಾಬಾದ್ (ಪಿಟಿಐ): ತೆಲಂಗಾಣದ ಕಾಮರೆಡ್ಡಿ ಜಿಲ್ಲೆಯಲ್ಲಿ ಭಾನುವಾರ ಸಂಜೆ ಲಾರಿಯೊಂದು ಮಿನಿ ಟ್ರಕ್‌ಗೆ ಡಿಕ್ಕಿ ಹೊಡೆದುದರಿಂದ ಆರು ಮಹಿಳೆಯರು ಸೇರಿದಂತೆ 8 ಮಂದಿ ಮೃತಪಟ್ಟಿದ್ದಾರೆ. 20ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಎಸ್.ಪಿ. ಶ್ರೀನಿವಾಸ್ ರೆಡ್ಡಿ ತಿಳಿಸಿದ್ದಾರೆ.

ಪಂಚಮಸಾಲಿ ಸಮಾಜ ಮುಗಿಸಲು ಯತ್ನ: ಯತ್ನಾಳ

ಪ್ರಜಾವಾಣಿ ವಾರ್ತೆ

ವಿಜಯಪುರ: ‘ಜಿಲ್ಲೆಯಲ್ಲಿ ಪಂಚಮಸಾಲಿ ನಾಯಕತ್ವ ಇರಬಾರದೆಂದು ಹಲವರು ಸತತ ಪ್ರಯತ್ನ ನಡೆಸಿದ್ದಾರೆ. ಸಮಾಜವನ್ನು ಮುಗಿಸಬೇಕು ಅಂತಾರೆ. ಅದು ಆಗದ ಕೆಲಸ’ ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಹಿಟ್ಟಿನಹಳ್ಳಿ ಗ್ರಾಮದಲ್ಲಿ ಭಾನುವಾರ ಕಿತ್ತೂರು ರಾಣಿ ಚನ್ನಮ್ಮ ಕಂಚಿನ ಮೂರ್ತಿ ಉದ್ಘಾಟಿಸಿ, ‘ಕಿತ್ತೂರ ರಾಣಿ ಚೆನ್ನಮ ಅವರ ವಿರುದ್ಧ ಯುದ್ಧದ ಸಂದರ್ಭದಲ್ಲಿ ಮೋಸ ಮಾಡಿದಂತೆ, ಇದೀಗ ಪಂಚಮಸಾಲಿ ಸಮಾಜದ 2-ಎ ಮೀಸಲು ಹೋರಾಟ ನಡೆಸಿರುವ ನಮ್ಮ ಶಕ್ತಿ ಕುಂದಿಸಲು ನಮ್ಮವರೇ ಸಂಚು ನಡೆಸಿದ್ದಾರೆ. ಹೋರಾಟದ ಮೂಲಕ ಯತ್ನಾಳ ಸಮುದಾಯದ ದೊಡ್ಡ ನಾಯಕನಾಗುತ್ತಾನೆ ಎಂಬ ಭಯವಿದೆ’ ಎಂದು ಯತ್ನಾಳ ದೂರಿದರು.

‘ನಾನು ಮಂತ್ರಿ ಆಗುವುದು ದೊಡ್ಡದೇನಲ್ಲ. ಸಿಎಂ ಬಸವರಾಜ ಬೊಮ್ಮಾಯಿ ಅವರೇ ಮಂತ್ರಿ ಮಾಡಬೇಕೆಂದು ಹೇಳಿದ್ದಾರೆ. ಆದರೆ ಯತ್ನಾಳ ಗೆದ್ದರೆ ಸೀನಿಯರ್ ಇದ್ದಾನೆ, ಮಂತ್ರಿ ಆಗುತ್ತಾನೆ, ಮುಖ್ಯಮಂತ್ರಿ ಆಗುತ್ತಾನೆ ಎಂದು ಕೆಲವರಿಗೆ ಭಯವಿದೆ. ಈವರೆಗೆ ಐದು ಬಾರಿ ಗೆದ್ದಿದ್ದೇನೆ. ಮುಂದೆಯೂ ಗೆಲುವು ನನ್ನದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಡಿ.ಕೆ. ಶಿವಕುಮಾರ್ ವಿರುದ್ಧ ವಾಗ್ದಾಳಿ: ‘ಕೊತ್ವಾಲ್ ರಾಮಚಂದ್ರನಿಗೆ ಚಹಾ, ಸಿಗರೇಟ್ ತಂದು ಕೊಟ್ಟ ರೌಡಿಗಳಿಂದ ನಾನೇನು ಕಲಿಯಬೇಕಿಲ್ಲ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧ ಯತ್ನಾಳ ವಾಗ್ದಾಳಿ ನಡೆಸಿದರು.

‘ನಿಯಮಾನುಸಾರವೇ ಪ್ರಾಧ್ಯಾಪಕರ ನಿಯೋಜನೆ ರದ್ದು’

ಬೆಂಗಳೂರು: ನಿಯಮಾನುಸಾರವೇ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರ ನಿಯೋಜನೆಯನ್ನು ರದ್ದುಪಡಿಸಲಾಗಿದೆ ಎಂದು ಕಾಲೇಜು ಶಿಕ್ಷಣ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

‘ಕಾಲೇಜು ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ನಿಯಮಗಳು -2021ರ’ ಅನ್ವಯವೇ ಈ ಕ್ರಮ ಕೈಗೊಳ್ಳಲಾಗಿದೆ. ಈ ನಿಯಮಗಳ ಅನ್ವಯ ಒಂದು ಕಾಲೇಜಿನಿಂದ ಇನ್ನೊಂದು ಕಾಲೇಜಿಗೆ ಬೋಧಕರ ನಿಯೋಜನೆಗೆ ಅವಕಾಶ ಇಲ್ಲ ಎಂದು ವಿವರಿಸಿದ್ದಾರೆ.

ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಪ್ರಸ್ತುತ 700ಕ್ಕೂ ಹೆಚ್ಚು ಬೋಧಕರು ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಹೋಬಳಿ ಮಟ್ಟದ ಕಾಲೇಜುಗಳಲ್ಲಿ 150ಕ್ಕೂ ಹೆಚ್ಚು ಕಾಯಂ ಬೋಧಕರು ತಮ್ಮ ಮೂಲ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸದೆಯೇ ಜಿಲ್ಲಾ ಕೇಂದ್ರ ಅಥವಾ ನಗರ ಪ್ರದೇಶದ ಕಾಲೇಜುಗಳಿಗೆ ನಿಯೋಜನೆಗೊಂಡಿದ್ದಾರೆ. ಇದೇ ರೀತಿ, ತಾಲ್ಲೂಕು ಮಟ್ಟದ ಕಾಲೇಜುಗಳ 250ಕ್ಕೂ ಹೆಚ್ಚು ಬೋಧಕರು ತಮ್ಮ ಮೂಲ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸದೆಯೇ ನಗರದ ಪ್ರದೇಶದ ಕಾಲೇಜುಗಳಿಗೆ ನಿಯೋಜನೆಗೊಂಡಿದ್ದಾರೆ. ಇದರಿಂದ, ಹೋಬಳಿ ಮತ್ತು ತಾಲ್ಲೂಕು ಮಟ್ಟದ ಕಾಲೇಜುಗಳಲ್ಲಿನ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗೆ ತೊಂದರೆಯಾಗಿದೆ ಎಂದು ತಿಳಿಸಿದ್ದಾರೆ.

ಪತ್ರಕರ್ತರ ಸಂಘದ ದತ್ತಿನಿಧಿ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಂಗ ಸಂಸ್ಥೆಯಾಗಿರುವ ಗಡಿನಾಡ ಜಿಲ್ಲೆ ಕಾಸರಗೋಡು ಘಟಕದ ವಿವಿಧ ದತ್ತಿನಿಧಿ ಪ್ರಶಸ್ತಿಗಳನ್ನು ಶನಿವಾರ ಪ್ರಕಟಿಸಲಾಗಿದೆ.

ಅವ್ವ ಹಸನ್ ಫೌಂಡೇಶನ್ ಪ್ರಶಸ್ತಿಗೆ ಕಲಬುರಗಿ ಆಕಾಶವಾಣಿಯ ಸದಾನಂದ ಪೆರ್ಲ, ಮೊಗದೋಡಿ ಗೋಪಾಲ ಕೃಷ್ಣ ಮೇಲಾಂಟ ಪ್ರಶಸ್ತಿಗೆ ಪತ್ರಕರ್ತ ಮಹಮ್ಮದ್ ಆರೀಫ್ ಪಡುಬಿದ್ರೆ, ಕೆ.ವಿ.ಆರ್. ಟ್ಯಾಗೋರ್ ಪ್ರಶಸ್ತಿಗೆ ಮಂಗಳೂರಿನ ಎಸ್. ಜಗದೀಶ್ಚಂದ್ರ ಅಂಚನ್, ಸಿ. ಸೋಮಶೇಖರ್ ಪ್ರಶಸ್ತಿಗೆ ಜಯ ಪ್ರಕಾಶ್ ಶೆಟ್ಟಿ ಉಪ್ಪಳ, ಪ್ರಚೋದಯ ಪ್ರಶಸ್ತಿಗೆ ರಾಧಾಕೃಷ್ಣ ಉಳಿಯತ್ತಡ್ಕ, ಎಡನೀರು ಕೇಶವಾನಂದ ಭಾರತೀ ಸ್ವಾಮೀಜಿ ಸ್ಮರಣಾರ್ಥ ಪ್ರಶಸ್ತಿಗೆ ಡಾ. ವಾಣಿಶ್ರೀ ಉಚ್ಚಿಲ್ಕರ್, ಪ್ರಭಾಕರ್ ಕಲ್ಲೂರಾಯ ಬನದಗದ್ದೆ ಪ್ರಶಸ್ತಿಗೆ ಕೊಡಗಿನ ಆರ್. ಸವಿತಾ ರೈ ಆಯ್ಕೆಯಾಗಿದ್ದಾರೆ.

‘ಪ್ರಶಸ್ತಿಯು ₹25 ಸಾವಿರ ನಗದು, ಫಲಕ, ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ. ಕಾಸರಗೋಡಿನಲ್ಲಿ ಇದೇ ಮೇ 22ರಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು’ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಿವಾನಂದ ತಗಡೂರು ಮತ್ತು ಕಾಸರಗೋಡು ಘಟಕದ ಅಧ್ಯಕ್ಷ ಎ.ಆರ್.ಸುಬ್ಬಯ್ಯಕಟ್ಟೆ ತಿಳಿಸಿದ್ದಾರೆ.

ಡಾ.ಟಿ. ವಿ. ವೆಂಕಟಾಚಲಶಾಸ್ತ್ರೀ ಪ್ರಧಾನ ಸಂಪಾದಕತ್ವ: ಕೆಜಿಪಿಯಿಂದ ಪ್ರಕಟ

‘ಕೃಷಿಕರ ಮಹತ್ವ ಸಾರಿದ್ದ ಕುಮಾರವ್ಯಾಸ’

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕುಮಾರವ್ಯಾಸ ಭಾರತ ಎಂಬ ಕರ್ಣಾಟ ಭಾರತ ಕಥಾಮಂಜರಿ' ಕೃತಿಯ ಪರಿಷ್ಕೃತ ಸಂಪುಟ ಹಲವು ಹೊಸ ವಿಚಾರಗಳ ಕಣಜ. ಕನ್ನಡದಲ್ಲಿ ಇದುವರೆಗೆ ಯಾವ ಕವಿಯ ಬಗ್ಗೆಯೂ ಇಷ್ಟೊಂದು ವಿಸ್ತೃತವಾದ ಮಾಹಿತಿ ಪ್ರಕಟವಾಗಿಲ್ಲ' ಎಂದು ಕೃತಿಯ ಸಂಪಾದಕ ಮಂಡಳಿಯ ಸದಸ್ಯ ಡಾ.ಎ.ವಿ. ಪ್ರಸನ್ನ ವಿವರಿಸಿದರು.

ವಿದ್ವಾಂಸ ಡಾ.ಟಿ.ವಿ. ವೆಂಕಟಾಚಲಶಾಸ್ತ್ರೀ ಪ್ರಧಾನ ಸಂಪಾದಕತ್ವದಲ್ಲಿ ಕನ್ನಡ ಗಣಕ ಪರಿಷತ್ ಪ್ರಕಟಿಸಿರುವ 'ಕುಮಾರವ್ಯಾಸ ಭಾರತ ಎಂಬ ಕರ್ಣಾಟ ಭಾರತ ಕಥಾಮಂಜರಿ' ಕೃತಿಯ ಪರಿಷ್ಕೃತ ಸಂಪುಟಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘2012ರಲ್ಲಿ ಪರಿಷ್ಕೃತ ಸಂಪುಟಗಳ ಪ್ರಕಟಣೆಯನ್ನು ಆರಂಭಿಸಲಾಗಿದ್ದು, ಎರಡು ವರ್ಷಗಳಲ್ಲಿ ಪೂರ್ಣಗೊಳ್ಳಬೇಕಿತ್ತು. ಆದರೆ, 10 ವರ್ಷ ತೆಗೆದುಕೊಂಡಿತು. ಸಂಪಾದಕ ಮಂಡಳಿಯು ಸುಮಾರು 300 ಸಭೆಗಳನ್ನು ನಡೆಸಿ ಪ್ರತಿಯೊಂದು ಪದ್ಯ, ಶಬ್ದ, ಅಕ್ಷರಗಳ ಬಗ್ಗೆಯೂ ಆಳವಾಗಿ ಚರ್ಚಿಸಿದೆ’ ಎಂದು ಪ್ರಸನ್ನ ವಿವರಿಸಿದರು.

‘ಕುಮಾರವ್ಯಾಸ ಭಾರತ ಎಂಬ ಕರ್ಣಾಟ ಭಾರತ ಕಥಾ ಮಂಜರಿ’ ಕೃತಿಗಳನ್ನು ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ (ಎಡದಿಂದ ನಾಲ್ಕನೆಯವರು) ಬಿಡುಗಡೆಗೊಳಿಸಿದರು. ಪುಣೆಯ ನಿವೃತ್ತ ರಸಾಯನವಿಜ್ಞಾನ ಪ್ರಾಧ್ಯಾಪಕ ಪ್ರೊ. ಜಿ.ಸಿ.ಕುಲಕರ್ಣಿ, ಕೃತಿಯ ಪ್ರಧಾನ ಸಂಪಾದಕ ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿ, ಪ್ರೊ. ಅ.ರಾ. ಮಿತ್ರ, ನಿವೃತ್ತ ಕನ್ನಡ ಪ್ರಾಧ್ಯಾಪಕ ಪಿ.ವಿ. ನಾರಾಯಣ ಮತ್ತು ಸಂಪಾದಕ ಮಂಡಳಿ ಸದಸ್ಯ ಎ.ವಿ. ಪ್ರಸನ್ನ ಇದ್ದಾರೆ — ಪ್ರಜಾವಾಣಿ ಚಿತ್ರ

ವಿದ್ವಾಂಸ ಡಾ.ಟಿ.ವಿ. ವೆಂಕಟಾಚಲಶಾಸ್ತ್ರೀ, ‘ಕುವೆಂಪು ಮತ್ತು ಮಾಸ್ತಿ ಅವರು 1958ರಲ್ಲಿ ಕುಮಾರವ್ಯಾಸ ಮಹಾಕವಿಯ ಕರ್ಣಾಟ ಭಾರತ ಕಥಾಮಂಜರಿ ಸಂಪಾದಿಸಿದ್ದರು. ಆಗಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರು ಈ ಸಂಪುಟಗಳ 40 ಸಾವಿರ ಪ್ರತಿಗಳ ಮುದ್ರಣಕ್ಕೆ ಒಪ್ಪಿಗೆ ನೀಡಿದ್ದರು. ಆಗ ಕೇವಲ ₹2 ದರ ನಿಗದಿಪಡಿಸಲಾಗಿತ್ತು. ಮುದ್ರಣದೋಷ, ಪದವಿಭಾಗದ ತಪ್ಪುಗಳನ್ನು ಸರಿಪಡಿಸಲಾಗಿದೆ. ಪ್ರತಿಪದ್ಯಕ್ಕೂ ಅಲ್ಲಲ್ಲೇ ಹೊಸಗನ್ನಡದಲ್ಲಿ ಗದ್ಯಾನುವಾದ ನೀಡಲಾಗಿದೆ. ಕ್ಷಿಪ್ತಪದಗಳ ಅರ್ಥವನ್ನೂ ವಿವರಿಸಲಾಗಿದೆ’ ಎಂದರು.

ಗಣಕ ಪರಿಷತ್ತಿನ ಕಾರ್ಯದರ್ಶಿ ಜಿ.ಎನ್.ನರಸಿಂಹಮೂರ್ತಿ ಇದ್ದರು.

ಅನುದಾನದಲ್ಲಿ ರಾಜಕೀಯ ಸಾಹಿತ್ಯಕ್ಕೆ ₹ 50 ಲಕ್ಷ ಮೀಸಲು: ಎಚ್‌. ವಿಶ್ವನಾಥ್

ಮೈಸೂರು: 'ಎಂಎಲ್‌ಸಿ ಅನುದಾನದಲ್ಲಿ ಸಿಗುವ ₹ 2 ಕೋಟಿ ಮೊತ್ತದಲ್ಲಿ ₹ 50 ಲಕ್ಷವನ್ನು ರಾಜಕೀಯ ಸಾಹಿತ್ಯ ಪ್ರೋತ್ಸಾಹಿಸಲು ಕನ್ನಡ ಸಾಹಿತ್ಯ ಪರಿಷತ್ತಿಗೆ ನೀಡಲಾಗುವುದು' ಎಂದು ವಿಧಾನ ಪರಿಷತ್ ಸದಸ್ಯ ಎಚ್‌.ವಿಶ್ವನಾಥ್ ಹೇಳಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಭಾನುವಾರ ಇಲ್ಲಿ ಆಯೋಜಿಸಿದ್ದ 'ವಿಶ್ವನಾಥ್ 75ರ ಸಂಭ್ರಮ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಗ್ರಾಮ ಪಂಚಾಯಿತಿ ಸದಸ್ಯರಿಂದ ಹಿಡಿದು ಶಾಸಕರು, ಸಂಸದರು, ಸಚಿವರು ಸೇರಿದಂತೆ ಎಲ್ಲರೂ ತಮ್ಮ ಅನುಭವಗಳನ್ನು ಒಳಗೊಂಡ ಪುಸ್ತಕಗಳನ್ನು ಬರೆಯಲಿ. ಅವರು ಬರೆಯುವ ಪುಸ್ತಕಗಳನ್ನು ಈ ಹಣದಲ್ಲಿ ಮುದ್ರಿಸಿ ಜನರಿಗೆ ಹಂಚುತ್ತೇವೆ. ಇದನ್ನು ಸಾಹಿತ್ಯ ಪರಿಷತ್ತು ಗಂಭೀರವಾಗಿ ಪರಿಗಣಿಸಬೇಕು' ಎಂದರು.

'ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ರಾಜಕೀಯ ಸಾಹಿತ್ಯದ ಗೋಷ್ಠಿಗೂ ಅವಕಾಶ ಕಲ್ಪಿಸಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವು ರಾಜಕಾರಣವನ್ನೇ ಉಸಿರಾಡುತ್ತೇವೆ. ಆದರೆ, ಇಲ್ಲಿ ರಾಜಕಾರಣದಬಗ್ಗೆ ಪುಸ್ತಕ, ಸಾಹಿತ್ಯ ಇಲ್ಲ. ರಾಜಕೀಯವನ್ನು ಮೈಲಿಗೆಯಾಗಿ ನೋಡುವ ಪರಂಪರೆ ಬೆಳೆದುಬಂದಿದೆ. ಸಾಹಿತ್ಯದ ಮೂಲಕವಾದರೂ ಅದನ್ನು ಹೋಗಲಾಡಿಸಬೇಕು' ಎಂದು ಅಭಿಪ್ರಾಯಪಟ್ಟರು.

ವಿದೇಶಗಳಲ್ಲೂ ಕಸಾಪ ಘಟಕ: ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ ಮಾತನಾಡಿ, 'ವಿದೇಶಗಳಲ್ಲೂ ಕನ್ನಡ ಸಾಹಿತ್ಯ ಪರಿಷತ್ತಿನ ಘಟಕ ಆರಂಭಿಸಲು ನಿರ್ಧರಿಸಲಾಗಿದೆ' ಎಂದರು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗೆ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರುಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಚೇರಿ (ಪೂರ್ವ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009.

ಕ್ರ ಸಂ	ವಿಭಾಗ	ಐಎಫ್‌ಟಿ ಸಂಖ್ಯೆ		ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1.	ಆಗ್ನೇಯ–1	ಬೆಂಜಮಂ/ಕಾನಿಅ (ಆಗ್ನೇಯ)–1/ಪಿಬಿ/159/2022–23 ದಿನಾಂಕ: 05.05.2022	1.	₹ 43,02,776/- / ₹ 86,100/-	16.05.2022ರ ಸಂಜೆ 5:00 ಗಂಟೆಯವರೆಗೆ	17.05.2022ರ ಸಂಜೆ 5:30 ಗಂಟೆಯ ನಂತರ
2.			2.	₹ 20,62,087/- / ₹ 50,000/-		

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಆಗ್ನೇಯ–1)

ಮುಖ್ಯ ಅಭಿಯಂತರರ ಕಚೇರಿ (ವಿನ್ಯಾಸ), 9ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009.

ಕ್ರ ಸಂ	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
3.	ಡಿಸಿ & ಬಿವಿಎಂ	ಬೆಂಜಮಂ/ಕಾನಿಅ(ಡಿಸಿ&ಬಿವಿಎಂ) ವಿ/ಪಿಬಿ/ಬಿವಿಎಂ/238/2022–23 ದಿನಾಂಕ: 05.05.2022	₹ 15,92,070/- / ₹ 39,802/-	23.05.2022ರ ಸಂಜೆ 4:00 ಗಂಟೆಯವರೆಗೆ	25.05.2022ರ ಮಧ್ಯಾಹ್ನ 12:00 ಗಂಟೆಗೆ
4.		ಬೆಂಜಮಂ/ಕಾನಿಅ(ಡಿಸಿ&ಬಿವಿಎಂ) ವಿ/ಪಿಬಿ/ಬಿವಿಎಂ/136/2022–23 ದಿನಾಂಕ: 26.04.2022	₹ 44,02,064/- / ₹ 88,041/-		
5.		ಬೆಂಜಮಂ/ಕಾನಿಅ(ಡಿಸಿ&ಬಿವಿಎಂ) ವಿ/ಪಿಬಿ/ಬಿವಿಎಂ/236/2022–23 ದಿನಾಂಕ: 05.05.2022	₹ 18,93,023/- / ₹ 47,326/-		

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಡಿಸಿ & ಬಿವಿಎಂ)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://eproc.karnataka.gov.in ಗೆ ಲಾಗಿನ್‌ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಾ.ಸಾ.ಸಂ.ಇ/421/2022–23

ಬಂಧನ ಅವಧಿಯಲ್ಲಿ 17 ದಿನ ವೈದ್ಯಕೀಯ ರಜೆ ಪಡೆದಿದ್ದ ಮೇಳಕುಂದಿ

ಹಿಂದೆಯೂ ಅಕ್ರಮ ನಡೆಸಿ ಸಿಕ್ಕಿಬಿದ್ದಿದ್ದ ಆರೋಪಿ

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್‌ಐ ಅಕ್ರಮ ನೇಮಕಾತಿ ಹಗರಣದ ಪ್ರಮುಖ ಆರೋಪಿ ಮಂಜುನಾಥ ಮೇಳಕುಂದಿ ಕಳೆದ ಡಿಸೆಂಬರ್‌ನಲ್ಲಿ ನಡೆದ ಲೋಕೋಪಯೋಗಿ ಇಲಾಖೆಯ ಎಇ, ಜೆಇ ಪರೀಕ್ಷೆಯಲ್ಲಿ ಅಕ್ರಮ ನಡೆಸುವಾಗ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದ. ಬಂಧನದ ಬಗ್ಗೆ ಇಲಾಖೆಗೆ ಮಾಹಿತಿ ನೀಡದೇ ವೈದ್ಯಕೀಯ ರಜೆಗೆ ಅರ್ಜಿ ಸಲ್ಲಿಸಿ, ರಜೆ ಮಂಜೂರು ಮಾಡಿಸಿಕೊಂಡಿದ್ದು ತಿಳಿದು ಬಂದಿದೆ.

ಪಿಎಸ್‌ಐ ಅಕ್ರಮ ನೇಮಕಾತಿ ಪ್ರಕರಣದ ಆರೋಪಿ ದಿವ್ಯಾ ಹಾಗರಗಿ ಅವರನ್ನು (ಮಾಸ್ಕ್ ಹಾಕಿಕೊಂಡವರು) ಮಹಜರು ಮಾಡಲು ಕಲಬುರಗಿಯ ಅವರ ಮನೆಗೆ ಭಾನುವಾರ ಕರೆತರಲಾಯಿತು

ಲೋಕೋಪಯೋಗಿ ಇಲಾಖೆಯು 2021ರ ಡಿಸೆಂಬರ್ 13 ಮತ್ತು 14ರಂದು ರಾಜ್ಯದ ಹಲವು ಜಿಲ್ಲೆಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿತ್ತು. ಅಕ್ರಮ ನಡೆಸುವ ಕೃತ್ಯದಲ್ಲಿ ಅದಾಗಲೇ ಪಳಗಿದ್ದ ಮಂಜುನಾಥ ಬೆಂಗಳೂರಿನ ಪರೀಕ್ಷಾ ಕೇಂದ್ರವೊಂದರಲ್ಲಿ ಅಭ್ಯರ್ಥಿಗಳಿಗೆ ಬ್ಲೂಟೂತ್ ನೀಡಿ ಪರೀಕ್ಷೆ ಬರೆಸಲು ಪ್ರಯತ್ನಿಸಿ ಸಿಕ್ಕಿ ಬಿದ್ದಿದ್ದ. ಈ ಸಂಬಂಧ ಬೆಂಗಳೂರಿನಲ್ಲಿ ಪ್ರಕರಣ ದಾಖಲಾಗಿತ್ತು. ಕಲಬುರಗಿಯಲ್ಲಿ ಬಂಧಿಸಲಾಗಿತ್ತು. ಬಂಧನವನ್ನು ಮರೆಮಾಚಲು ನೀರಾವರಿ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ವೈದ್ಯಕೀಯ ರಜೆ ನೀಡುವಂತೆ ಮನವಿ ಸಲ್ಲಿಸಿದ್ದ.

'ಜನವರಿ 7ರವರೆಗೆ ನ್ಯಾಯಾಂಗ ಬಂಧನದಲ್ಲಿದ್ದ ಆರೋಪಿ ಜನವರಿ 2ರಿಂದ 18ರವರೆಗೆ ವೈದ್ಯಕೀಯ ರಜೆ ಪಡೆದಿದ್ದ. ಕಲಬುರಗಿಯ ಜಿಮ್ಸ್ ಆಸ್ಪತ್ರೆಯ ಜನರಲ್ ಸರ್ಜರಿ ವಿಭಾಗದ ವೈದ್ಯರು ನೀಡಿದ ಪ್ರಮಾಣಪತ್ರದ ಮೇಲೆ ರಜೆ ಮಂಜೂರಾಗಿತ್ತು' ಎಂದು ತಿಳಿದು ಬಂದಿದೆ.

'ವೈದ್ಯಕೀಯ ರಜೆ ಕೇಳಿದ್ದರಿಂದ ಮಂಜುನಾಥ ಮೇಳಕುಂದಿಗೆ 17 ದಿನ ರಜೆ ನೀಡಲಾಗಿತ್ತು' ಎಂದು ಕರ್ನಾಟಕ ನೀರಾವರಿ ನಿಗಮದ (ಕೆಎನ್‌ಎನ್‌ಎಲ್) ಕಲಬುರಗಿ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಸೂರ್ಯಕಾಂತ ಮಾಲೆ ತಿಳಿಸಿದ್ದಾರೆ.

ಮಂಜುನಾಥ ಮೇಳಕುಂದಿ ಅಮಾನತು

ಪಿಎಸ್‌ಐ ಅಕ್ರಮ ನೇಮಕಾತಿ ಹಗರಣದಲ್ಲಿ ಮೇ 1ರಂದು ಸಿಐಡಿ ಅಧಿಕಾರಿಗಳಿಗೆ ಶರಣಾದ ಮಂಜುನಾಥ ಮೇಳಕುಂದಿಗೆ ನೀರಾವರಿ ಇಲಾಖೆಯ ಮುಖ್ಯ ಎಂಜಿನಿಯರ್ ಶನಿವಾರ ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ನ್ಯಾಯಾಲಯವು ಮೇಳಕುಂದಿಯನ್ನು ಸಿಐಡಿ ವಶಕ್ಕೆ ಒಪ್ಪಿಸುತ್ತಿದ್ದಂತೆಯೇ ಹಿರಿಯ ಅಧಿಕಾರಿಗಳು ಅಮಾನತಿಗೆ ಪ್ರಸ್ತಾವ ಸಲ್ಲಿಸಿದ್ದರು.

ದಿವ್ಯಾ ಮನೆಗೆ ಕರೆದೊಯ್ದು ಮಹಜರು

ಪಿಎಸ್‌ಐ ಅಕ್ರಮ ನೇಮಕಾತಿ ಪ್ರಕರಣದಲ್ಲಿ ಬಂಧಿತ ಬಿಜೆಪಿ ನಾಯಕಿ ಹಾಗೂ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ ಮುಖ್ಯಸ್ಥೆ ದಿವ್ಯಾ ಹಾಗರಗಿಗೆ ಭಾನುವಾರ ಅವರ ಮನೆ ಮತ್ತು ನಗರದ ಹೊರವಲಯದ ಅಫಜಲಪುರ ರಸ್ತೆಯಲ್ಲಿರುವ ಹೊಲ ಮತ್ತು ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಗೆ ಕರೆದೊಯ್ದು ಸಿಐಡಿ ಅಧಿಕಾರಿಗಳು ಮಹಜರು ನಡೆಸಿದರು.

ದಿವ್ಯಾ ಜೊತೆ ಶಾಲೆಯ ಮುಖ್ಯ ಶಿಕ್ಷಕ ಕಾಶಿನಾಥ ಚಿಲ್ಲ, ಅಭ್ಯರ್ಥಿಗಳ ಒಎಂಆರ್ ಶೀಟ್ ತಿದ್ದಿಸಿದ್ದ ಆರೋಪಿ ಮಂಜುನಾಥ ಮೇಳಕುಂದಿಗೂ ಕರೆದೊಯ್ಯಲಾಗಿತ್ತು.

ದಿವ್ಯಾ ಸಿಐಡಿ ಕಸ್ಟಡಿ ಅವಧಿ ಮೇ 9 ರಂದು ಮುಕ್ತಾಯಗೊಳ್ಳಲಿದ್ದು, ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು. ಮತ್ತೊಬ್ಬ ಪ್ರಮುಖ ಆರೋಪಿ-ರುದ್ರಗೌಡ ಡಿ. ಪಾಟೀಲ ಸಿಐಡಿ ಕಸ್ಟಡಿ ಅವಧಿ ಮುಗಿದಿದ್ದು, ಭಾನುವಾರ ಜೈಲಿಗೆ ಕರೆದೊಯ್ಯಲಾಯಿತು.

ಅರ್ಕಾವತಿ ರೀಡೂ ಬಯಲಾದರೆ ಸಿದ್ದರಾಮಯ್ಯ ಜೈಲಿಗೆ: ನಳಿನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅರ್ಕಾವತಿ ಡಿನೋಟಿಫಿಕೇಷನ್ ಮತ್ತು ರೀಡೂ ಕುರಿತ ಕೆಂಪಣ್ಣ ಆಯೋಗದ ವರದಿ ಹೊರಬಂದರೆ ಸಿದ್ದರಾಮಯ್ಯ ಶಾಶ್ವತವಾಗಿ ಜೈಲಿನಲ್ಲಿ ಇರಬೇಕಾಗುತ್ತದೆ. ಅದನ್ನು ಹೊರ ಹಾಕುವ ಕೆಲಸವನ್ನು ನಮ್ಮ ಸರ್ಕಾರ ಮಾಡಲಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದ್ದಾರೆ.

ಬಿಜೆಪಿ ರಾಜ್ಯ ಘಟಕದ ಯುವ ಮೋರ್ಚಾ ಕಾರ್ಯಕಾರಿಣಿಯನ್ನು ಭಾನುವಾರ ಉದ್ಘಾಟಿಸಿ ಮಾತನಾಡಿ 'ಸಿದ್ದರಾಮಯ್ಯ ಅವರಷ್ಟು ಭ್ರಷ್ಟಾಚಾರಿ ಈ ರಾಜ್ಯದಲ್ಲಿ ಬೇರೆ ಯಾರೂ ಇರಲಿಲ್ಲ' ಎಂದು ಕಿಡಿಕಾರಿದರು.

'ಇವರ ಅವಧಿಯಲ್ಲಿ ಅರ್ಕಾವತಿ ಬಡಾವಣೆ ಡಿನೋಟಿಫಿಕೇಷನ್ ಮತ್ತು ರೀಡೂ ಅಲ್ಲದೆ, ಹಾಸಿಗೆ ಹಗರಣ, ದಿಂಬಿನ ಹಗರಣ, ಹಾಸ್ಟೆಲ್ ಹಗರಣ, ಪಿಡಬ್ಲ್ಯುಡಿ ಹಗರಣ, ಬೋರ್‌ವೆಲ್ ಹಗರಣ, ಮೆಡಿಕಲ್ ಹಗರಣ ಹೀಗೆ ಹಗರಣಗಳ ಸರಮಾಲೆಯೇ ನಡೆದಿತ್ತು' ಎಂದು ನಳಿನ್ ಕಟೀಲ್ ಅವರು ದೂರಿದರು.

ರುದ್ರಗೌಡರ ಲಾಕರ್‌ನಲ್ಲಿ ಅರ್ಧ ಕೆ.ಜಿ. ಚಿನ್ನ

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್‌ಐ ಅಕ್ರಮ ನೇಮಕಾತಿ ಹಗರಣದ ಪ್ರಮುಖ ಆರೋಪಿ ರುದ್ರಗೌಡ ಡಿ. ಪಾಟೀಲ ಅವರಿಗೆ ಸೇರಿದ ಲಾಕರ್‌ನಲ್ಲಿ ಅರ್ಧ ಕೆಜಿ ಚಿನ್ನ ಇರುವುದು ಪತ್ತೆಯಾಗಿದೆ. ಸಿಐಡಿ ಅಧಿಕಾರಿಗಳು ನಗರದ ಸೂಪರ್ ಮಾರ್ಕೆಟ್‌ನಲ್ಲಿರುವ ಬ್ಯಾಂಕ್ ಆಫ್ ಬರೋಡ ಶಾಖೆಯಲ್ಲಿನ ಲಾಕರ್ ತೆಗೆಸಿ ನೋಡಿದಾಗ, ಚಿನ್ನ ಇಟ್ಟಿರುವುದು ಗೊತ್ತಾಗಿದೆ.

ರುದ್ರಗೌಡ ಅವರನ್ನು ಬ್ಯಾಂಕ್‌ಗೆ ಕರೆದೊಯ್ದ ಸಿಐಡಿ ಅಧಿಕಾರಿಗಳು ಅವರ ಸಮ್ಮುಖದಲ್ಲಿ ಶನಿವಾರ ಲಾಕರ್ ತೆಗೆಸಿದರು. ಮತ್ತೊಂದು ಲಾಕರ್ ಪರಿಶೀಲಿಸಬೇಕಿದ್ದು, ಸೋಮವಾರ ಪುನಃ ಆರೋಪಿಯನ್ನು ಬ್ಯಾಂಕ್‌ಗೆ ಕರೆದೊಯ್ಯಲು ಅಧಿಕಾರಿಗಳು ಸಿದ್ಧತೆ ನಡೆಸಿದ್ದಾರೆ.

ಬೇರೆಯವರ ಬಳಿ ಹಣ: 'ಐದಾರು ವರ್ಷಗಳಿಂದ ಅಕ್ರಮ ನೇಮಕಾತಿ ವ್ಯವಹಾರದಲ್ಲಿ ಪಳಗಿರುವ ರುದ್ರಗೌಡ ಎಲ್ಲ ಹಣ ಬ್ಯಾಂಕ್‌ನಲ್ಲಿ ಇಟ್ಟರೆ ಐಟಿ ಅಧಿಕಾರಿಗಳಿಗೆ ಲೆಕ್ಕ ತೋರಿಸುವುದು ಕಷ್ಟವಾಗಲಿದೆ ಎಂಬುದನ್ನು ಅರಿತಿದ್ದ. ಅದಕ್ಕೆ ದಂದೆಯಿಂದ ಗಳಿಸಿದ ಹಣವನ್ನು ತನ್ನ ಆಪ್ತರ ಬಳಿ ಕೊಟ್ಟರಬಹುದು ಎಂಬ ಶಂಕೆ ಇದೆ. ಅಂತಹ ಒಬ್ಬ ವ್ಯಕ್ತಿ ರುದ್ರಗೌಡ ಪಾಟೀಲ ಬಂಧನವಾದ ದಿನದಿಂದ ಅಫಜಲಪುರ ತಾಲ್ಲೂಕಿನ ಗ್ರಾಮವೊಂದರ ತನ್ನ ಮನೆಗೆ ಕೀಲಿ ಹಾಕಿ ನಾಪತ್ತೆಯಾಗಿದ್ದಾನೆ' ಎಂಬ ಮಾತುಗಳು ಕೇಳಿ ಬರುತ್ತಿವೆ.

'ಮಹಾರಾಜ ಎಲ್ಲಿದ್ದರೂ ಮಹಾರಾಜನೇ'

ರುದ್ರಗೌಡ ಪಾಟೀಲ ಬೆಂಬಲಿಗರು ನಿರ್ವಹಿಸುತ್ತಿರುವ 'ಅಫಜಲಪುರಕ್ಕಾಗಿ ಆರ್. ಡಿ. ಪಾಟೀಲ' ಫೇಸ್‌ಬುಕ್ ಖಾತೆ ಸಕ್ರಿಯವಾಗಿದೆ. ಸಿಐಡಿ ವಶದಲ್ಲಿದ್ದರೂ ಪಾಟೀಲ ಚಿತ್ರವುಳ್ಳ ಪೋಸ್ಟರ್ ತಯಾರಿಸಿ ಬಸವೇಶ್ವರ ಜಯಂತಿ ಹಾಗೂ ರಂಜಾನ್ ಮಾಸಾಚರಣೆಯ ಶುಭಾಶಯ ಕೋರಲಾಗಿದೆ.

ಮೇ 2ರಂದು ಅವರ ಚಿತ್ರಗಳನ್ನು ಬಳಸಿ ಪ್ರಕಟಿಸಲಾದ ಹಾಡಿನಲ್ಲಿ, 'ದೂರವಿರಲಿ, ಹತ್ತಿರವಿರಲಿ, ದೂರುವವರು ದೂರುತಲಿರಲಿ, ನಿನ್ನ ಹಾಗೆ ನೀ ನಡೆಯೋದೆ ನಿಜರೂಪವೂ... ಮಹಾರಾಜ ಎಲ್ಲಿದ್ದರೂ ಮಹಾರಾಜನೇ... ಎಂಬ ಹಾಡನ್ನು ಅಳವಡಿಸಲಾಗಿದೆ.

ಪ್ರಥಮ ಪತ್ರಿಕೆಯಲ್ಲೂ ಅಕ್ರಮ ಶಂಕೆ

ಒಂದನೇ ಪುಟದಿಂದ

'ಗುಪ್ತಚರ ವಿಭಾಗದ ಅಧಿಕಾರಿಗಳ ತಂಡ ಇವರ ಮೇಲೆ ವಿಶೇಷ ನಿಗಾ ಇಟ್ಟಿದ್ದು, ವಿವಿಧ ಮೂಲಗಳಿಂದ ಸಾಕ್ಷ್ಯಗಳನ್ನು ಕಲೆ ಹಾಕುತ್ತಿದೆ' ಎಂದೂ ಹೇಳಿವೆ.

'ಕೆಲ ಆರೋಪಿಗಳು ಪ್ರಕರಣ ಬಯಲಾದ ನಂತರ ನಾಪತ್ತೆಯಾಗಿದ್ದಾರೆ. 27 ದಿನಗಳಿಂದ ಅವರಿಗಾಗಿ ಹುಡುಕಾಟ ನಡೆಸಲಾಗುತ್ತಿದೆ. ಮೊಬೈಲ್ ಟವರ್‌ಗಳ ಆಧಾರದಲ್ಲಿ ಅವರಿರುವ ಸ್ಥಳ ಪತ್ತೆಮಾಡಲು ಪ್ರಯತ್ನಿಸಲಾಗುತ್ತಿದೆ. ಅಕ್ರಮದಲ್ಲಿ ಭಾಗಿಯಾಗಿರುವವರ ಪೈಕಿ ಕೆಲವರು 'ಫ್ಲ್ಯಾಷ್' ಮಾಡಿಸಿ ಮೊಬೈಲ್‌ನಲ್ಲಿದ್ದ ದತ್ತಾಂಶಗಳನ್ನು ನಾಶಪಡಿಸಿರುವುದಾಗಿ ಗೊತ್ತಾಗಿದೆ. ಅವರ ಮೊಬೈಲ್‌ಗಳನ್ನು ಜಪ್ತಿ ಮಾಡಿ ವಾಟ್ಸ್‌ಆ್ಯಪ್, ಟೆಲಿಗ್ರಾಮ್, ಮೆಸೆಂಜರ್ ಮೂಲಕ ವಿನಿಮಯವಾಗಿರುವ ಮಾಹಿತಿಗಳನ್ನು ಕಲೆ ಹಾಕಲು ಪ್ರಯತ್ನಿಸಲಾಗುತ್ತಿದೆ' ಎಂದೂ ಮೂಲಗಳು ಹೇಳಿವೆ.

ಬೆಂಗಳೂರಿನ ನಾಲ್ಕು ಪರೀಕ್ಷಾ ಕೇಂದ್ರಗಳಲ್ಲಿ ಅಧಿಕಾರಿಗಳು ಮಹಜರು ನಡೆಸಿದ್ದು ಕಂಪ್ಯೂಟರ್ ಸೇರಿದಂತೆ ಕೆಲ ದಾಖಲೆಗಳನ್ನು ಜಪ್ತಿ ಮಾಡಿದ್ದಾರೆ ಎಂದೂ ಗೊತ್ತಾಗಿದೆ.

ಸಂಕ್ಷಿಪ್ತ ಸುದ್ದಿ

'ದುಡ್ಡುಕೊಟ್ಟು ಸಿಎಂ ಆದವರಿಂದ ಅಭಿವೃದ್ಧಿ ಸಾಧ್ಯವಿಲ್ಲ'

ರಾಮದುರ್ಗ (ಬೆಳಗಾವಿ ಜಿಲ್ಲೆ): 'ಬಿಜೆಪಿ ವರಿಷ್ಠರಿಗೆ ದುಡ್ಡು ಕೊಟ್ಟು ಸಿಎಂ ಸ್ಥಾನ ಗಿಟ್ಟಿಸಿಕೊಂಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ ಯಾವುದೇ ಅಭಿವೃದ್ಧಿ ಕೆಲಸ ಸಾಧ್ಯವಿಲ್ಲ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಲೇವಡಿ ಮಾಡಿದರು.

ಭಾನುವಾರ ತಾಲ್ಲೂಕಿನ ಅವರಾದಿ ಗ್ರಾಮದಲ್ಲಿ ಸಂಗೊಳ್ಳಿ ರಾಯಣ್ಣ ಮೂರ್ತಿ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, 'ದುಡ್ಡು ಕೊಟ್ಟು ಮುಖ್ಯಮಂತ್ರಿ ಆದರೆ ಜನ ಸೇವೆಗಿಂತ ಸ್ವಸೇವೆಗೆ ಹೆಚ್ಚಿನ ಒತ್ತು ನೀಡುತ್ತಾರೆ. ಇಂತಹ ಮುಖ್ಯಮಂತ್ರಿಯಿಂದ ಅಭಿವೃದ್ಧಿ ಕಾಮಗಾರಿ, ಪರಿಹಾರ ವಿತರಣೆ ಸಾಧ್ಯವಿಲ್ಲ' ಎಂದು ಟೀಕಿಸಿದರು.

'ರಾಜಕೀಯ ಶಕ್ತಿ ಪ್ರಚೋದನೆಯಿಂದ ಧರ್ಮ ಸಂಘರ್ಷ'

ಧಾರವಾಡ: 'ಧರ್ಮದಲ್ಲಿ ಕೆಲವು ರಾಜಕೀಯ ಶಕ್ತಿಗಳು ಸೇರಿಕೊಂಡಿರುವ ಕಾರಣ ಸಮಾಜದಲ್ಲಿ ಧರ್ಮದ ಗೌರವ, ಘನತೆಗೆ ಧಕ್ಕೆ ತರುವ ಕೆಲಸ ನಡೆಯುತ್ತಿದೆ' ಎಂದು ಬಾಳೆಹೊನ್ನೂರು ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ ಭಾನುವಾರ ಹೇಳಿದರು.

ನಗರದಲ್ಲಿ ಮಾತನಾಡಿದ ಅವರು, 'ಸರ್ವ ಜನಾಂಗದ ಶಾಂತಿಯ ತೋಟವಾದ ನಮ್ಮ ನಾಡಲ್ಲಿ ಈ ಹಿಂದೆ ಧರ್ಮ ಸಂಘರ್ಷಗಳು ನಡೆದಿರಲಿಲ್ಲ. ಧರ್ಮ ಪಾಲನೆಯೊಂದಿಗೆ ಬೇರೆ ಧರ್ಮದ ಬಗ್ಗೆ ಸಹಿಷ್ಣುತಾ ಮನೋಭಾವ ಇತ್ತು. ಈಗ ರಾಜಕೀಯ ಶಕ್ತಿಯ ಪ್ರಚೋದನೆಯಿಂದ ಧರ್ಮ ಸಂಘರ್ಷದ ವಾತಾವರಣ ನಿರ್ಮಾಣವಾಗಿದೆ' ಎಂದರು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಈ ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ಎರಡು ಹಂತದ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕಾಮಗಾರಿಯ ಹೆಸರು	ಟೆಂಡರ್ ಮೊತ್ತ / ಇ.ಎಂ.ಡಿ
ಪ್ರಧಾನ ಮುಖ್ಯ ಅಭಿಯಂತರರ ಕಛೇರಿ, 2ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009.	
ಸಂಖ್ಯೆ.: ಬೆಂಜಮಂ/ಪ್ರಮುಅ/ಮುಅ(ಪೂ)/ಅಮುಅ(ಪೂ)–I/ಉಮುಅ(ನಿ)–II/ತಾಂಸ(ನಿ)–III/441/2022–23 ದಿನಾಂಕ: 05.05.2022	
ಸಕಾನಿಅ(ಆಗ್ನೇಯ–3) ಉಪವಿಭಾಗದ ಹಲಸೂರು ಸೇವಾಠಾಣೆಯಡಿಯಲ್ಲಿ ಬಿಬಿಎಂಪಿ ವೈಟ್ ಟಾಪಿಂಗ್ ಕಾಮಗಾರಿಗಾಗಿ ಗುರುದ್ವಾರ ಜಂಕ್ಷನ್‌ನಿಂದ ಭಾಸ್ಕರನ್ ರಸ್ತೆ ಜಂಕ್ಷನ್ (ಹಳೆ ಮದ್ರಾಸ್ ರಸ್ತೆ) ವರೆಗೆ ಭಾಸ್ಕರನ್ ರಸ್ತೆಯ ಉದ್ದಕ್ಕೂ ಹಾನಿಗೊಳಗಾದ ಮತ್ತು ತುಕ್ಕು ಹಿಡಿದ ಸಿಐ/ಪಿಎಸ್‌ಸಿ ಕೊಳವೆ ಮಾರ್ಗದ ಬದಲಾಗಿ 150 ಮಿಮೀ ವ್ಯಾಸದ ಕೊಳವೆ ಮಾರ್ಗ & 300 ಮಿಮೀ ವ್ಯಾಸದ ಎಂ.ಎಸ್ ನೀರು ಸರಬರಾಜು ಮಾರ್ಗವನ್ನು ಒದಗಿಸಿ ಅಳವಡಿಸುವ ಕಾಮಗಾರಿ	ರೂ. 1,33,85,653/– / ರೂ. 2,00,800/–
ಟೆಂಡರ್‌ದಾಖಲೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 23.05.2022 ರಂದು ಮಧ್ಯಾಹ್ನ 3.00 ಗಂಟೆಯವರೆಗೆ, ಟೆಂಡರ್‌ಗಳನ್ನು ತೆರೆಯುವ ದಿನಾಂಕ: 25.05.2022ರ ಸಂಜೆ 05.00 ಗಂಟೆಯ ನಂತರ. ಸಹಿ/– ಮುಖ್ಯ ಅಭಿಯಂತರರು (ಪೂರ್ವ)	
ಮುಖ್ಯ ಅಭಿಯಂತರರ ಕಛೇರಿ (ಕಾವೇರಿ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009.	
ಸಂಖ್ಯೆ.: ಬೆಂಜಮಂ/ಸಿಇಕೆಟಿಇ/ತಾಂಸ10/86/2019/177/2022–23 ದಿನಾಂಕ: 06.05.2022	
ಕಾವೇರಿ ನೀರು ಸರಬರಾಜು ಯೋಜನೆ ಹಂತ–1 ರಲ್ಲಿ ಅಳವಡಿಸಲಾದ ಕ್ಯಾಸ್ಟ್ ಐರನ್ ಕೊಳವೆ ಮಾರ್ಗದ ಬದಲಾಗಿ ಸಾರಕ್ಕಿಯಿಂದ 1200ಮಿ.ಮೀ ವ್ಯಾಸದ, 900 ಮಿಮೀ ವ್ಯಾಸದ ಮತ್ತು 700ಮಿಮೀ ವ್ಯಾಸದ ಮೈಲ್ಡ್ ಸ್ಟೀಲ್ ನೀರು ಸರಬರಾಜು ಕೊಳವೆ ಮಾರ್ಗವನ್ನು ಒದಗಿಸಿ, ಅಳವಡಿಸುವ ಹಾಗೂ ಸ್ಥಾಪಿಸುವ ಕಾಮಗಾರಿ. (5ನೇ ಕರೆ)	ರೂ. 14,90,90,657/– / ರೂ. 14,91,000/–
ಟೆಂಡರ್‌ದಾಖಲೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 10.06.2022 ರಂದು ಮಧ್ಯಾಹ್ನ 3.00 ಗಂಟೆಯವರೆಗೆ, ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ: 13.06.2022 ರ ಸಂಜೆ 04.00 ಗಂಟೆಗೆ. ಸಹಿ/– ಮುಖ್ಯ ಅಭಿಯಂತರರು (ಕಾವೇರಿ)	

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು https://eproc.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/425/Zenkar/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಅಭಿಯಂತರ ಕಚೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ವಿಭಾಗ, ಹಾವೇರಿ

ನಂ. ಗ್ರಾಕುನೀ&ನೈವಿ/ಹಾವೇರಿ/ಜೆ.ಜೆಮ್/ತಡಸ/ಟೆಂಡರ್/01/2022–23/181 ದಿನಾಂಕ: 05–05–2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ) (ದ್ವಿ–ಲಕೋಟೆ ಪದ್ಧತಿ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ KW-4 ರ ನಿಬಂಧನೆಗೊಳಪಟ್ಟಂತೆ ಕಾರ್ಯನಿರ್ವಾಹಕ ಅಭಿಯಂತರರು ಗ್ರಾ.ಕು.ನೀ.&ನೈ ವಿಭಾಗ ಹಾವೇರಿ ಇವರು ಈ ಕೆಳಕಂಡ DBOT ಯೋಜನೆಗೆ ಟೆಂಡರ್ ಆಹ್ವಾನಿಸಿರುತ್ತಾರೆ ಸದರಿ ಟೆಂಡರ್ ದ್ವಿ–ಲಕೋಟೆ ಟೆಂಡರ್ ಆಗಿದ್ದು Rule 28 of the Karnataka Transparency in Public Procurement Act 1999 and Rules, 2000 ನಿಯಮವನ್ನು ಒಳಗೊಂಡಿರುತ್ತದೆ. ಗುತ್ತಿಗೆದಾರರು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಭರ್ತಿಮಾಡುವದು ಮತ್ತು ಸಲ್ಲಿಸುವುದು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಮುಖಾಂತರ ಮಾತ್ರ (ಯಾವುದೇ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಅಲ್ಲದೆ ಮತ್ತಾವುದೆ ವಿಧದಲ್ಲಿ ವಿಭಾಗ ಕಚೇರಿಗೆ ಸಲ್ಲಿಸಲು ಅವಕಾಶ ಇರುವುದಿಲ್ಲ ಮತ್ತು ಅಂತಹ ಟೆಂಡರ್ ತಿರಸ್ಕರಿಸಲಾಗುವುದು)

TIME SCHEDULE

1) E-portal ಮೂಲಕ ಡೌನ್‌ಲೋಡ ಮಾಡಬಹುದು : ದಿನಾಂಕ: 06–05–2022 ರಿಂದ 27–05–2022 ರ 17:30 ಗಂಟೆವರೆಗೆ.
2) Tender queries/Clarifcations ಗೆ ಕೊನೆಯ ದಿನ ಮತ್ತು ಸಮಯ : ದಿನಾಂಕ: 12–05–2022 ರ 17:30 ಗಂಟೆವರೆಗೆ
3) ಪ್ರೀ ಬಿಡ್ ಮೀಟಿಂಗ್ ಸ್ಥಳ : C.E.R.D.W&S.D. Bangalore ದಿನಾಂಕ 13–05–2022ರ 11:00 ಗಂಟೆಗೆ
4) E-procurement ನಲ್ಲಿ ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನ ಮತ್ತು ಸಮಯ : ದಿನಾಂಕ: 27–05–2022 ರ 17:30 ಗಂಟೆವರೆಗೆ 5) ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) ದಿನ ಮತ್ತು ಸಮಯ: ದಿನಾಂಕ: 30–05–2022ರ 11:00 ಗಂಟೆಗೆ 6) ಇ–ಪ್ರೊಕ್ಯೂರ್‌ಮೆಂಟ್ ಆರ್ಥಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) ದಿನ ಮತ್ತು ಸಮಯ: ದಿನಾಂಕ: 31–05–2022ರ 17:00 ಗಂಟೆಗೆ

Name of work Providing Multi village Drinking water supply facilities to 291 rural habitations in Shiggaon (93 Village of 93 habitations), Savanur (49 Village of 49 habitations), Hangal (106 Village of 112 habitations) & Haveri (34 Village of 37 habitations) taluk of Haveri Dist, Karnataka state, Country - India, from Tungabhadra reservoir near Hammagi (Singatalur Barrage) through Design, Build, Operate and Transfer (DBOT) mode under Jal Jeevan Mission INDENT No.RWSSD/2022-23/WS /WORK_INDENT40355

Part A- Design, Build, Testing and Commissioning:
a. Head works including Intake well, connecting pipeline, inspection chambers, Jack well, foot bridge and pump house. **b.** Raw water pumping main up to water treatment plant. **c.** Water treatment plant and associated buildings / facilities. **d.** Treated water storage tank and Pumping station with pumping machinery. **e.** Treated water pumping mains / Feeder mains / bulk water transmission mains / bulk gravity mains from WTP to MBR / BPT / IPSs / ZBTs. **f.** Construction of Master Balancing Reservoirs, Zonal Balancing Reservoirs **g.** Intermediate pumping stations/ lifting stations wherever required along with sumps **h.** ZBTs for supplying treated water to habitations **i.** Installation of Bulk water meters at all the outlet points in the water supply system to measure the Water produced and supplied. **j.** Installation of required appurtenances to ensure the equitable water supply at all outlets. **k.** Electro mechanical works as per requirement at all the location of pumping stations, IPS etc. **l.** Instrumentation and control, automation, operation management system (SCADA) etc. **m.** Trial Run E.M.D (INR) : **5.74 Crore*** Tender Processing Fee : **as per e-procurement portal,** Period of Completion **24 months.**

Part B - Operation & Maintenance: Operation & maintenance of the facilities created under Part A for a period of 5 years & subsequently transfer the same at the end of tenure in working condition. **Period of Completion 60 months after successful completion of Part A**

*The Tenders must be accompanied by Earnest Money Deposit (EMD) of **Rs.5,74,00,000 (Rupees Five Crore Seventy Four Lakhs only),** shall be paid online through e - Procurement Portal using any of the Payment Modes viz., Credit Card, Direct Debit, National Electronic Fund Transfer (NEFT), Over the Counter (OTC).

ಸೂಚನೆ: ಉಳಿದ ವಿವರಗಳನ್ನು www.eproc.karnataka.gov.in ವೆಬ್‌ಸೈಟ್‌ನಲ್ಲಿ ಸಂಪರ್ಕಿಸಿ ಪಡೆಯಬಹುದು ಹಾಗೂ ಈ ಕಚೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್ (ಪ್ರಭಾರ)
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ

ವಾಸಾಇ/ಹಾವೇರಿ/55/2022–23/ದೇಶಪಾಂಡೆಪಬ್ಲಿಸಿಟಿ

ಒಳನೋಟ
ಬಿಕರಿಯಾಗುತ್ತಿವೆ ಹುದ್ದೆಗಳು

ಬೆಂಗಳೂರು: 'ಕಾಸಿದ್ದರಷ್ಟೇ ಸರ್ಕಾರಿ ಹುದ್ದೆ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಮೇ 8) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಹುದ್ದೆಗಳ ವ್ಯಾಪಾರ

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಕ್ರಮ ನಡೆಯುವ ಅನುಮಾನ ಇತ್ತು. ಇಷ್ಟು ದೊಡ್ಡ ಮಟ್ಟದಲ್ಲಿ ನಡೆಯುತ್ತದೆ ಎಂದು ಊಹಿಸಿರಲಿಲ್ಲ. ನೇಮಕಾತಿ ಪ್ರಕ್ರಿಯೆಯನ್ನು ನೆಪಮಾತ್ರಕ್ಕೆ ಮಾಡುತ್ತಾರೆ. ಉದ್ಯೋಗಕ್ಕಾಗಿ ಹಗಲಿರುಳು ಶ್ರಮಿಸುತ್ತಿದ್ದೇವೆ. 'ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ' ಎಂಬಂತೆ ಕಡಿಮೆ ಉದ್ಯೋಗಗಳನ್ನು ಸರ್ಕಾರ ಸೃಷ್ಟಿಸುತ್ತಿದೆ. ಅವೂ ಬಿಕರಿಯಾಗುತ್ತಿರುವುದು ವಿಪರ್ಯಾಸ.

ಧನಂಜಯ, ತುಮಕೂರು

ಅರ್ಹರಿಗೆ ನ್ಯಾಯ ಸಿಗಲಿ

ಬಡ ಪ್ರತಿಭಾವಂತರಿಗೆ ಸರ್ಕಾರಿ ನೌಕರಿ ಕೈಗೆಟುಕದು ಎಂಬುದನ್ನು ಇಂದಿನ ವರದಿ ಸ್ಪಷ್ಟಪಡಿಸಿದೆ. ಎಲ್ಲ ಅರ್ಹತೆ ಹೊಂದಿದ್ದರೂ ಹಾಗೂ ಏನೂ ತಪ್ಪು ಮಾಡದ ಅಭ್ಯರ್ಥಿಗಳಿಗೆ ಶಿಕ್ಷೆಯಾಗುತ್ತಿದೆ. ನಡೆದಿರುವ ಸಾಲು ಸಾಲು ಪರೀಕ್ಷೆಗಳ ಅಭ್ಯರ್ಥಿಗಳಿಗೆ ನ್ಯಾಯ ಸಿಗಲಿ. ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ನಂಬಿಕೆ ಕಳೆದುಕೊಂಡಿರುವ ಪ್ರಾಮಾಣಿಕ ಅಭ್ಯರ್ಥಿಗಳಿಗೆ ಹಾಗೂ ವಯೋಮಿತಿ ಮೀರುತ್ತಿರುವ ಅಭ್ಯರ್ಥಿಗಳಿಗೆ ಒಳಿತು ಮಾಡುವ ತೀರ್ಮಾನವನ್ನು ಸರ್ಕಾರ ಕೈಗೊಳ್ಳಲಿ.

ಆರ್.ಅರ್ಚನಾ, ಬೆಂಗಳೂರು

ಹುದ್ದೆಗೆ ವಿದ್ಯೆ ಬೇಕಿಲ್ಲ

ಸರ್ಕಾರಿ ಹುದ್ದೆ ಕೇವಲ ಉದ್ಯೋಗಾಕಾಂಕ್ಷಿಯ ಕನಸಲ್ಲ. ಮಕ್ಕಳನ್ನು ಸರ್ಕಾರಿ ಹುದ್ದೆಯಲ್ಲಿ ನೋಡಬೇಕೆನ್ನುವ ಕನಸನ್ನು ಪೋಷಕರೂ ಕಟ್ಟಿಕೊಂಡಿರುತ್ತಾರೆ. ಕೆಲವರು ತಮ್ಮ ಆಸ್ತಿ ಮಾರಿಕೊಂಡು ಹುದ್ದೆ ಗಿಟ್ಟಿಸಿಕೊಳ್ಳುತ್ತಾರೆ. ಬಳಿಕ ಲಂಚಕ್ಕಾಗಿ ಹಾತೊರೆಯುತ್ತಾರೆ. ಭ್ರಷ್ಟಾಚಾರದ ನಿರ್ಮೂಲನೆ ಎಂದು ಲೂಟಿ ಮಾಡುತ್ತಾರೆ. ರಾಜಕೀಯ ನಾಯಕರಿಗೂ ವಿದ್ಯೆಗಿಂತ ಕಾಸೇ ಹೆಚ್ಚಾಗಿದೆ.

ಕುಮಾರಸ್ವಾಮಿ, ಹಂಪಿ

ಕಠಿಣ ಶಿಕ್ಷೆಯೇ ಅಕ್ರಮಕ್ಕೆ ಮದ್ದು

ಸರ್ಕಾರಿ ಹುದ್ದೆಗಳ ನೇಮಕಾತಿ ಅಕ್ರಮದಲ್ಲಿ ಭಾಗಿಯಾದವರಿಗೆ ವಿಧಿಸುವ ಶಿಕ್ಷೆ ಘೋರವಾಗಿರಬೇಕು. ಇದನ್ನು ಕಂಡು ಮುಂದೆ ಅಕ್ರಮ ನಡೆಸಲು ಹೆದರಬೇಕು. ಭ್ರಷ್ಟಾಚಾರ ತಡೆಗೆ ಇದೊಂದೇ ಮಾರ್ಗ. ಆದರೆ, ಸರ್ಕಾರವೇ ಅಕ್ರಮದಲ್ಲಿ ಭಾಗಿಯಾಗಿರುವಾಗ ಅಂತಹ ಶಿಕ್ಷೆಯನ್ನು ನಿರೀಕ್ಷಿಸುವುದುಂಟೇ?

ಯೋಗೇಶ್, ಮೈಸೂರು

ಮಹತ್ವ ಕಳೆದುಕೊಂಡ ಜ್ಞಾನ

ಪೋಷಕರಲ್ಲಿ ಸರ್ಕಾರಿ ನೌಕರಿ ಎಂಬ ಆಶಾಭಾವ ಬಿತ್ತಿ, ಬೆಂಗಳೂರು, ಧಾರವಾಡ, ಮೈಸೂರು ಸೇರಿದಂತೆ ಮಹಾನಗರಗಳಲ್ಲಿ ಬಾಡಿಗೆ ಕೋಣೆಗಳನ್ನು ಪಡೆದು ವರ್ಷಾನುಗಟ್ಟಲೆ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತೇವೆ. ಆದರೆ, ಇಂತಹವರಿಗೆ ಸರ್ಕಾರ ದೊಡ್ಡ ಮೋಸ ಮಾಡುತ್ತಿದೆ. ಉಳ್ಳವನು ಮಾತ್ರ ಸರ್ಕಾರಿ ನೌಕರಿ ಪಡೆಯಬಹುದಾದರೆ ಇಲ್ಲದವನ ಪರಿಸ್ಥಿತಿ ಏನು? ಇದು ಹೀಗೆಯೇ ಮುಂದುವರಿದರೆ ಭವಿಷ್ಯದಲ್ಲಿ ಜ್ಞಾನಕ್ಕೆ ಬೆಲೆಯೇ ಇರುವುದಿಲ್ಲ. ಆ ಜ್ಞಾನ ಬದುಕಿಗೆ ಬೆಳಕು ನೀಡುವುದಿಲ್ಲ.

ಶರತ್ ಕುಮಾರ್, ದೊಡ್ಡಬಳ್ಳಾಪುರ

ಕೆಪಿಎಸ್‌ಸಿ ಭ್ರಷ್ಟಾಚಾರದ ಕೈಗೊಂಬೆ

ಹಣ ಇದ್ದರೆ ಮಾತ್ರ ಸರ್ಕಾರಿ ಹುದ್ದೆ ಸಿಗುವುದು ನಿಜ. ಇತ್ತೀಚಿನ ಬಹುತೇಕ ನೇಮಕಾತಿಗಳಲ್ಲಿ ಭ್ರಷ್ಟಾಚಾರ ಮಿತಿ ಮೀರಿದೆ. ಸರ್ಕಾರಕ್ಕೆ ಕೆಪಿಎಸ್‌ಸಿ ಭ್ರಷ್ಟಾಚಾರದ ಕೈಗೊಂಬೆಯಾಗಿದೆ. ಈ ಅಕ್ರಮದಲ್ಲಿ ತೊಡಗಿರುವ ಅಧಿಕಾರಿಗಳ ಜತೆ ಪಾಲುದಾರರಾದ ರಾಜಕೀಯ ನಾಯಕರನ್ನೂ ಸಹ ಶಿಕ್ಷೆಗೆ ಗುರಿಪಡಿಸಬೇಕು.

ರಾಘವೇಂದ್ರ ಎಸ್., ಯಾದಗಿರಿ

'ಸುಪ್ರೀಂ ಕೋರ್ಟ್ ಆದೇಶ ಎಲ್ಲರಿಗೂ ಅನ್ವಯ'

ಬೆಂಗಳೂರು: 'ಧ್ವನಿವರ್ಧಕ ಬಳಕೆ ನಿರ್ಬಂಧಿಸುವ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಆದೇಶ ದೇವಸ್ಥಾನ, ಮಸೀದಿ ಎಲ್ಲವಕ್ಕೂ ಅನ್ವಯವಾಗುತ್ತದೆ. ಈ ವಿಚಾರದಲ್ಲಿ ಸಮಾಜಘಾತುಕ ಶಕ್ತಿಗಳು ರಾಜಕಾರಣ ಮಾಡಲು ಅವಕಾಶ ನೀಡುವುದಿಲ್ಲ' ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

ಮಸೀದಿಗಳಲ್ಲಿ ಆಜಾನ್ ನಿರ್ಬಂಧಿಸದಿದ್ದರೆ ದೇವಸ್ಥಾನಗಳಲ್ಲಿ ಧ್ವನಿವರ್ಧಕಗಳ ಮೂಲಕ ಭಜನೆ ಮೊಳಗಿಸಬೇಕೆಂಬ ಹಿಂದುತ್ವ ಪರ ಸಂಘಟನೆಗಳ ಹೇಳಿಕೆ ಬಗ್ಗೆ ಸುದ್ದಿಗಾರರಿಗೆ ಭಾನುವಾರ ಪ್ರತಿಕ್ರಿಯಿಸಿದ ಅವರು, 'ಯಾರೇ ತಪ್ಪು ಮಾಡಿದರೂ ಕ್ರಮ ಜರುಗಿಸುತ್ತೇವೆ. ಅವರು ಕಳ್ಳತನ ಮಾಡಿದ್ದಾರೆ, ನಾವೂ ಮಾಡುತ್ತೇವೆ ಎನ್ನುವುದು ಸರಿಯಲ್ಲ. ಸುಪ್ರೀಂ ಕೋರ್ಟ್ ಆದೇಶವನ್ನು ಸರ್ಕಾರ ಪಾಲನೆ ಮಾಡಲಿದೆ' ಎಂದರು.

'ಯಾರಾದರೂ ಸುಪ್ರೀಂ ಕೋರ್ಟ್ ಆದೇಶ ಉಲ್ಲಂಘಿಸಿದರೆ ದೂರು ನೀಡಲಿ. ಅದು ಬಿಟ್ಟು ಪ್ರಚೋದನಕಾರಿ ಹೇಳಿಕೆ ನೀಡುತ್ತಾ ರಾಜಕೀಯ ಮಾಡುವುದು ಸರಿಯಲ್ಲ. ಶಾಂತಿ, ಸೌಹಾರ್ದ ಕದಡುವ ಯಾವುದೇ ವ್ಯಕ್ತಿ, ಸಂಘಟನೆಗಳ ವಿರುದ್ಧ ಸರ್ಕಾರ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಲಿದೆ' ಎಂದು ಹೇಳಿದರು.

ಕರ್ನಾಟಕ ಸರ್ಕಾರ

ಜಿಲ್ಲಾ ಸಮೀಕ್ಷಣಾಧಿಕಾರಿಗಳ ಕಾರ್ಯಾಲಯ, ಕಲಬುರಗಿ

ಕ್ರ.ಸಂ:ಜಿ.ಸ.ಕ/ಮ್ಯಾ.ಪಾ/ 09/2022–23 ದಿನಾಂಕ: 06/05/2022

:: ಟೆಂಡರ್ ಪ್ರಕಟಣೆ ::

1) ಟೆಂಡರ್ ಅಂದಾಜು ಮೊತ್ತ : ರೂ. 68,15,484/–, 2) ಟೆಂಡರ್ ದೊಂದಿಗೆ e-Procurement Cell ಇವರಿಗೆ ಪಾವತಿಸಬೇಕಾದ ಇ.ಎಮ್.ಡಿ ಮೊತ್ತ 2.5% : ರೂ. 1,70,387/–, 3) ಟೆಂಡರ್ ಪ್ರೊಸೆಸ್ಸಿಂಗ್ ಫೀ: ರೂ. 1000/– (ಹಿಂದಿರುಗಿಸಲಾಗುವುದಿಲ್ಲ), 4) ಟೆಂಡರದಾರರು ಆನ್–ಲೈನ್ ಮೇಲೆ ಬಿಡ್'ಗಳನ್ನು ಸಲ್ಲಿಸಲು ಪ್ರಾರಂಭಿಸುವ ದಿನಾಂಕ 10–05–2022, 5) ಟೆಂಡರದಾರರು ಆನ್–ಲೈನ್ ಮೇಲೆ ಬಿಡ್'ಗಳನ್ನು ಸಲ್ಲಿಸುವ ಕೊನೆಯ ದಿನಾಂಕ : 18–05–2022 ಸಂಜೆ 4.00 ಗಂಟೆಯ ವರೆಗೆ, 6) ಟೆಂಡರ ತೆರೆಯುವ ಸ್ಥಳ: ಜಿಲ್ಲಾ ಸಮೀಕ್ಷಣಾಧಿಕಾರಿಗಳ ಕಛೇರಿ ಕಲಬುರಗಿ. 7) ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿ ಮತ್ತು ವಿವರ ಪಡೆಯಬೇಕಾದ ವಿಳಾಸ & ದೂರವಾಣಿ ಸಂಖ್ಯೆ ಜಿಲ್ಲಾ ಸಮೀಕ್ಷಣಾಧಿಕಾರಿಗಳ ಕಛೇರಿ ಕಲಬುರಗಿ 08472–240007, 8) e-Procurement ಟೆಕ್ನಿಕಲ್ ಮಾಹಿತಿಗಾಗಿ ಸಂಪರ್ಕಿಸಬೇಕಾದ ಇ–ಮೇಲ್ ವಿಳಾಸ : http://e-procurement.karnataka.gov.in, 9) ತಾಂತ್ರಿಕ ಟೆಂಡರ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : **19–05–2022 ರಂದು ಬೆಳಗ್ಗೆ 11–30 ಘಂಟೆಗೆ,** 10) ಹಣಕಾಸಿನ ಟೆಂಡರ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **24–05–2022 ರಂದು ಮಧ್ಯಾಹ್ನ 1–00 ಘಂಟೆಗೆ.**

ಸಹಿ/– ಸದಸ್ಯ ಕಾರ್ಯದರ್ಶಿಗಳು
ಜಿಲ್ಲಾ ಸಮೀಕ್ಷಣಾಧಿಕಾರಿಗಳು, ಜಿಲ್ಲಾ ಸಮೀಕ್ಷಣಾ ಘಟಕ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/123/ಎಂ.ಸಿ.&ಎ/2022–23

ಸರ್ಕಾರಿ ಹುದ್ದೆಗಳ 'ಕಾಸ್'ಗೀಕರಣ: ಎಚ್‌.ಡಿ. ಕುಮಾರಸ್ವಾಮಿ ವಾಗ್ದಾಳಿ

ಬೆಂಗಳೂರು: 'ಸರ್ಕಾರಿ ನೇಮಕದ ಅಕ್ರಮವನ್ನು 'ಪ್ರಜಾವಾಣಿ' ವರದಿ ಕಣ್ಣಿಗೆ ಕಟ್ಟುವಂತೆ ತೆರೆದಿಟ್ಟಿದೆ. ರಾಜ್ಯ ಸರ್ಕಾರಕ್ಕೆ ಇದಕ್ಕಿಂತ ಸಾಕ್ಷ್ಯ ಬೇಕೆ? ಸರ್ಕಾರಿ ಕೆಲಸಗಳ 'ಕಾಸ್'ಗೀಕರಣ ಎಗ್ಗಿಲ್ಲದೇ ನಡೆದಿದೆ ಎನ್ನುವುದು ಇದರಿಂದ ವೇದ್ಯವಾಗುತ್ತದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ಈ ಕುರಿತು ಭಾನುವಾರ ಸರಣಿ ಟ್ವೀಟ್ ಮಾಡಿರುವ ಅವರು, 'ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಕ್ರಮ, ಸ್ವಜನ ಪಕ್ಷಪಾತ, ಕಳ್ಳಮಾರ್ಗ, ಭ್ರಷ್ಟಾಚಾರ ತಾಂಡವವಾಡುತ್ತಿವೆ. ಕರ್ನಾಟಕ ಲೋಕ ಸೇವಾ ಆಯೋಗ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಪೊಲೀಸ್ ನೇಮಕಾತಿ ಮಂಡಳಿಗಳು ಲಂಚಗುಳಿತನದ ಕೂಪಗಳಾಗಿವೆ' ಎಂದಿದ್ದಾರೆ.

'ಪ್ರತಿ ಹುದ್ದೆಗೂ ದರ ನಿಗದಿ ಮಾಡಿರುವ ರಾಜ್ಯ ಸರ್ಕಾರವು ಉದ್ಯೋಗ ವ್ಯಾಪಾರೀಕರಣವನ್ನೇ ಅಧಿಕೃತ ಕಸುಬು ಮಾಡಿಕೊಂಡಿದೆ. ಸರ್ಕಾರಿ ಕೆಲಸದ 'ರೇಟ್ ಕಾರ್ಡ್' ಬಗ್ಗೆ ನಾನು ಪದೇ ಪದೇ ಹೇಳುತ್ತಲೇ ಇದ್ದೆ. ಕೆಪಿಎಸ್‌ಸಿ ಹುದ್ದೆಗಳ ಮುಕ್ತ ಮಾರಾಟದ ಬಗ್ಗೆಯೂ ಹೇಳಿದ್ದೆ. ಆದರೆ, ಸರ್ಕಾರ ಮಾತ್ರ ಜಾಣ ನಿದ್ದೆ ಮಾಡಿತ್ತು' ಎಂದು ಕುಮಾರಸ್ವಾಮಿ ವ್ಯಂಗ್ಯವಾಡಿದ್ದಾರೆ.

EXAM DH ಪ್ರಜಾವಾಣಿ MASTERMIND™
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಜೆಇಇ ಪರೀಕ್ಷೆ ಇಲ್ಲದೆ ಐಐಟಿಗೆ ಪ್ರವೇಶ!

ಗುರುರಾಜ್ ಎಸ್. ದಾವಣಗೆರೆ

> ಮದ್ರಾಸ್ ಐಐಟಿಯವರು ರೂಪಿಸಿರುವ ಹೊಸ ಆನ್‌ಲೈನ್ ಪದವಿ ಕೋರ್ಸ್‌ಗೆ ಪ್ರವೇಶ ಪಡೆಯಲು ಜೆಇಇ ಪರೀಕ್ಷೆ ಬರೆಯಬೇಕಿಲ್ಲ. ಆರ್ಟ್ಸ್, ಕಾಮರ್ಸ್, ಸೈನ್ಸ್‌ನಲ್ಲಿ ಪಿಯುಸಿ ಮುಗಿಸಿದ ಯಾವುದೇ ವಿದ್ಯಾರ್ಥಿ ಮದ್ರಾಸ್ ಐಐಟಿ ನಡೆಸುವ ಅರ್ಹತಾ ಪರೀಕ್ಷೆ ಬರೆದು ಡೇಟಾಸೈನ್ಸ್ ಬಿಎಸ್‌ಸಿ ಪದವಿಗೆ ಸೇರಬಹುದು.

ಹೌದು. ಪಿಯುಸಿ ಹಂತದ ವಿದ್ಯಾರ್ಥಿಗಳು ಜೆಇಇ (ಜಾಯಿಂಟ್ ಎಂಟ್ರೆನ್ಸ್ ಎಕ್ಸಾಂ) ಪರೀಕ್ಷೆ ಬರೆಯದೇ ಐಐಟಿ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ) ಸಂಸ್ಥೆಗೆ ಪ್ರವೇಶ ಪಡೆಯುವ ಸುವರ್ಣಾವಕಾಶ ಬಂದಿದೆ! ಈವರೆಗೆ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಮಾತ್ರ ಎರಡು ಹಂತಗಳಲ್ಲಿ ನಡೆಯುವ ರಾಷ್ಟ್ರಮಟ್ಟದ ಕಠಿಣ ಸವಾಲಿನ ಜೆಇಇ ಪರೀಕ್ಷೆ ಬರೆದು, ಉನ್ನತ ಅಂಕಗಳಿಸಿ ಐಐಟಿಯಲ್ಲಿ ಎಂಜಿನಿಯರಿಂಗ್ ಸೀಟ್ ಗಿಟ್ಟಿಸುತ್ತಿದ್ದರು. ಐಐಟಿಯಿಂದ ಎಂಜಿನಿಯರಿಂಗ್ ಪದವಿ ಪಡೆಯುವುದು ದೇಶದ ಪ್ರತಿ ವಿಜ್ಞಾನ ವಿದ್ಯಾರ್ಥಿಯ ಬಹುದೊಡ್ಡ ಕನಸೂ ಹೌದು. ಪ್ರತಿ ಸಾವಿರದಲ್ಲಿ ಒಬ್ಬರಿಗೆ ಮಾತ್ರ ಸೀಟು ಸಿಗುವುದರಿಂದ ಐಐಟಿ ಪ್ರವೇಶ ಸುಲಭದ್ದಲ್ಲ.

ಆದರೆ ಈಗ ಮದ್ರಾಸ್ ಐಐಟಿಯವರು ರೂಪಿಸಿರುವ ಹೊಸ ಆನ್‌ಲೈನ್ ಪದವಿಕೋರ್ಸ್‌ಗೆ ಪ್ರವೇಶ ಪಡೆಯಲು ಜೆಇಇಪರೀಕ್ಷೆ ಬರೆಯಬೇಕಿಲ್ಲ! ನೀವು ವಿಜ್ಞಾನದ ವಿದ್ಯಾರ್ಥಿಯೂ ಆಗಿರಬೇಕಿಲ್ಲ! ಆರ್ಟ್ಸ್, ಕಾಮರ್ಸ್, ಸೈನ್ಸ್‌ನಲ್ಲಿ ಪಿಯುಸಿ ಮುಗಿಸಿದ ಯಾವುದೇ ವಿದ್ಯಾರ್ಥಿ ಮದ್ರಾಸ್ ಐಐಟಿ ನಡೆಸುವ ಅರ್ಹತಾ (qualifier) ಪರೀಕ್ಷೆ ಬರೆದು ಡೇಟಾಸೈನ್ಸ್ ಬಿಎಸ್‌ಸಿ ಪದವಿಗೆ ಸೇರಬಹುದು. ದಾಖಲಾತಿ ನೀಡುವ ಐಐಟಿ, ಅರ್ಹತಾ ಪರೀಕ್ಷೆಗೆ ಒಂದು ತಿಂಗಳ ತರಬೇತಿಯನ್ನೂ ನೀಡುತ್ತದೆ. ವಿಜ್ಞಾನ ಶಿಕ್ಷಣ ಪಡೆಯದಿದ್ದರೂ ಡೇಟಾ ವಿಜ್ಞಾನದಲ್ಲಿ ಡಿಗ್ರಿ ಗಳಿಸುವ ಅವಕಾಶ ದೇಶದ ಅತ್ಯಂತ ಪ್ರತಿಷ್ಠಿತ ಮತ್ತು ಉನ್ನತ ಶಿಕ್ಷಣ ಸಂಸ್ಥೆಯಿಂದ ದೊರೆಯುತ್ತಿರುವುದು ಇದೇ ಮೊದಲು.

ತರಬೇತಿ - ಪರೀಕ್ಷೆ

ಅರ್ಹತಾ ಪರೀಕ್ಷೆಗೆ ಬೇಕಾದ ಒಂದು ತಿಂಗಳ ಆನ್‌ಲೈನ್ ತರಬೇತಿ ನೀಡಿದ ನಂತರ ಪರೀಕ್ಷೆ ಇರುತ್ತದೆ. ಹತ್ತನೆಯ ತರಗತಿಯಲ್ಲಿ ಗಣಿತ ಓದಿರುವ ಹಾಗೂ 12ನೆಯ ತರಗತಿ ಪೂರೈಸಿರುವ ಯಾವುದೇ ವಿದ್ಯಾರ್ಥಿ ಅರ್ಹತಾ ಪರೀಕ್ಷೆ ಬರೆಯಬಹುದು. ವಯೋಮಿತಿಯ ನಿರ್ಬಂಧ ಇಲ್ಲ. ಡೇಟಾ ಸೈನ್ಸ್‌ನಲ್ಲಿ ಆನ್‌ಲೈನ್ ಪದವಿ ನೀಡುತ್ತಿರುವ ವಿಶ್ವದ ಏಕೈಕ ಕೋರ್ಸ್ ಇದಾಗಿದ್ದು ಹನ್ನೆರಡನೆ ತರಗತಿ ಮುಗಿಸಿರುವ ವಿದ್ಯಾರ್ಥಿಗಳಿಗೆ ಮುಕ್ತ ಅವಕಾಶ ಕಲ್ಪಿಸುತ್ತದೆ. ಅರ್ಹತಾ ಪರೀಕ್ಷೆ ಪಾಸಾಗುವ ವಿದ್ಯಾರ್ಥಿಗಳಿಗೆ ಕೋರ್ಸ್‌ನ ಮೊದಲ ಹಂತದ ಫೌಂಡೇಶನ್ ಪ್ರೋಗ್ರಾಂಗೆ ಪ್ರವೇಶ ದೊರೆಯುತ್ತದೆ.

ವಿವಿಧ ಹಂತದ ಕೋರ್ಸ್

ಕೋರ್ಸ್‌ನಲ್ಲಿ ಫೌಂಡೇಶನ್, ಡಿಪ್ಲೊಮಾ ಮತ್ತು ಪದವಿ ಎಂಬ ಮೂರು ಹಂತಗಳಿವೆ. ವಿದ್ಯಾರ್ಥಿಗಳು ತಮಗೆ ಬೇಕಾದ ಹಂತದಲ್ಲಿ ಶಿಕ್ಷಣದಿಂದ ನಿರ್ಗಮಿಸುವ ಅವಕಾಶವೂ ಇದೆ. ವಿಶ್ವದ ಯಾವುದೇ ಜಾಗದಲ್ಲಿರುವ ಭಾರತೀಯ ಮೂಲದ ವಿದ್ಯಾರ್ಥಿಗಳು ಈ ಕೋರ್ಸ್ ಸೇರಬಹುದು. ಆನ್‌ಲೈನ್ ಪರೀಕ್ಷೆ ಸದ್ಯಕ್ಕೆ ಭಾರತ, ಶ್ರೀಲಂಕಾ ಮತ್ತು ಯುಎಇಗಳ ನಿರ್ಧರಿತ ಪರೀಕ್ಷಾ ಕೇಂದ್ರಗಳಲ್ಲಿ ನಡೆಯುತ್ತದೆ. ವಾರ್ಷಿಕ ಇಂತಿಷ್ಟೇ ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳಬೇಕೆಂಬ ನಿಬಂಧನೆ ಇಲ್ಲವಾದ್ದರಿಂದ 2020ನೇ ಸಾಲಿನಲ್ಲಿ 30 ಸಾವಿರ ವಿದ್ಯಾರ್ಥಿಗಳು ತರಬೇತಿ ಪಡೆದಿದ್ದರು. ಅವರ ಪೈಕಿ 8,154 ವಿದ್ಯಾರ್ಥಿಗಳು ಅರ್ಹತೆ ಗಳಿಸಿ ಮುಂದಿನ ಹಂತದ ಶಿಕ್ಷಣಕ್ಕೆ ದಾಖಲಾಗಿದ್ದರು. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಅನ್ವಯ ರೂಪುಗೊಂಡಿರುವ ಈ ಕೋರ್ಸ್‌ನಲ್ಲಿ ಬಹುಪ್ರವೇಶ (Multiple entry) ಮತ್ತು ಬಹುನಿರ್ಗಮನ (Multiple exit) ಗಳ ಅವಕಾಶವಿದೆ. ಅಲ್ಲದೆ ಬೇರೆ ಪದವಿ ಕಲಿಯುತ್ತಿರುವ ವಿದ್ಯಾರ್ಥಿಗಳೂ ಸಹ ಈ ಕೋರ್ಸ್‌ಗೆ ದಾಖಲಾಗಬಹುದು.

ಶಿಕ್ಷಣಕ್ಕೆ ಪ್ರತ್ಯೇಕ ಪೋರ್ಟಲ್

ಅರ್ಹತಾ ಪರೀಕ್ಷೆಯ ನಂತರ ಕೋರ್ಸ್‌ಗೆ ದಾಖಲಾದ ವಿದ್ಯಾರ್ಥಿಗಳ ತರಬೇತಿ ಮತ್ತು ಕೋರ್ಸ್ ಕಲಿಕೆಗೆ ಪ್ರತ್ಯೇಕ ಆನ್‌ಲೈನ್ ಪೋರ್ಟಲ್ ಇದೆ. ದೇಶದ ವಿವಿಧ ಯಶಸ್ವಿ ಡೇಟಾಸೈನ್ಸ್ ಉದ್ಯಮದ ತಜ್ಞರು, ಐಐಟಿ ಪ್ರೊಫೆಸರ್‌ಗಳು, ನುರಿತ ಎಂಜಿನಿಯರ್‌ಗಳು ಪಾಠ ಮಾಡುತ್ತಾರೆ. ಅರ್ಹತಾ ಪರೀಕ್ಷೆಯಲ್ಲಿ ಉನ್ನತ ಅಂಕ ಗಳಿಸಿದವರಿಗೆ ಶೇ 75 ರಷ್ಟು ಶುಲ್ಕ ವಿನಾಯಿತಿಯೂ ಇದೆ. ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಒಂದು ಲಕ್ಷ ರೂಪಾಯಿಯ ಕೆಳಗಿದ್ದರೆ ಶೇ 50 ರಿಂದ 75 ರವರೆಗೆ ಶುಲ್ಕ ವಿನಾಯಿತಿ ಇದ್ದು ಇಡೀ ಕೋರ್ಸ್ ಅನ್ನು ಕೇವಲ ₹60 ಸಾವಿರದಲ್ಲಿ ಮುಗಿಸಬಹುದು.

ಉದ್ಯೋಗಾವಕಾಶದ ಮಹಾಪೂರ

'ಡೇಟಾ ಡ್ರೈವ್ಸ್ ದ ನ್ಯೂ ವರ್ಲ್ಡ್' ಎಂಬ ಮಾತು ಈಗ ಎಲ್ಲ ಕಡೆ ಕೇಳಿಬರುತ್ತದೆ. ಜಗತ್ತಿನ ಎಲ್ಲರೂ, ಎಲ್ಲ ಬಗೆಯ ವಸ್ತುಗಳೂ ಡೇಟಾ ಉತ್ಪಾದಿಸುತ್ತವೆ. ಅದರ ವಿಶ್ಲೇಷಣೆ, ಕ್ರೋಢೀಕರಣ, ವರ್ಗೀಕರಣ ಮತ್ತು ಬಳಕೆಗೆ ಜನ ಬೇಕು. ಹಾಗಾಗಿ ಲೆಕ್ಕವಿಲ್ಲದಷ್ಟು ಕೆಲಸಗಳು ಡೇಟಾಸೈನ್ಸ್ ಓದಿದವರಿಗೆ ಕಾದು ಕೂತಿವೆ. ಇದನ್ನೇ ದೃಷ್ಟಿಯಲ್ಲಿರಿಸಿಕೊಂಡು ರೂಪಿಸಲಾಗಿರುವ ಈ ಕೋರ್ಸ್‌ಗೆ ಉದ್ಯೋಗ ದೊರಕಿಸಿಕೊಡಲು ವಿವಿಧ ಕಂಪನಿಗಳ ಜೊತೆಗೆ ಒಡಂಬಡಿಕೆ ಮಾಡಿಕೊಂಡಿರುವ ಐಐಟಿ, ವಿದ್ಯಾರ್ಥಿಗಳಿಗೆ ಉದ್ಯೋಗ ಪೂರ್ವ ಇಂಟರ್ನ್‌ಶಿಪ್ ಕೊಡಿಸುವ ಯೋಜನೆ ಹಾಕಿಕೊಂಡಿದೆ.

(ಲೇಖಕರು: ಪ್ರಾಚಾರ್ಯರು, ವಿದಿಯ ಪೂರ್ಣಪ್ರಜ್ಞ ಪದವಿಪೂರ್ವ ಕಾಲೇಜು, ಬೆಂಗಳೂರು)

1. ಅಭ್ಯರ್ಥಿಗಳು ಅರ್ಹತಾ ಪರೀಕ್ಷೆಯ ತರಬೇತಿ ಪಡೆದುಕೊಳ್ಳಲು ₹3000 ಶುಲ್ಕ ಭರಿಸಬೇಕು. ಎಸ್‌ಸಿ, ಎಸ್‌ಟಿ ಮತ್ತು ಅಂಗವಿಕಲರಿಗೆ ತಲಾ ₹1500 ಮತ್ತು ₹750 ಶುಲ್ಕವಿದೆ.
2. JEE ಅಡ್ವಾನ್ಸ್ಡ್ ಮತ್ತು ಒಲಿಂಪಿಯಾಡ್ ಪರೀಕ್ಷೆ ಬರೆದವರು ಅರ್ಹತಾ ಪರೀಕ್ಷೆ ಬರೆಯದೆ ನೇರವಾಗಿ ಕೋರ್ಸಿಗೆ ದಾಖಲಾಗಬಹುದು .
3. ಮೇ 6 ,2022 ರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪ್ರಾರಂಭವಾಗಿದೆ.
4. https://onlinedegree.iitm.ac.in

ಬಾಡಿಗೆ ತಾಯಿಯಾಗಿರುವ ಉಲಿಯಕ್ಕಿ ತನಗಿಂತ ದೊಡ್ಡದಾದ ಕುಕೂ ಮರಿಗೆ ಉಣಿಸುತ್ತಿರುವುದು
(ಚಿತ್ರ ಕೃಪೆ: ನ್ಯಾಷನಲ್ ಜಿಯೋಗ್ರಫಿ)

ಜೀವಾನ್ವೇಷಣೆ

ಕುಕೂ ಹಕ್ಕಿಗಳ ಬಾಡಿಗೆ ಬಾಣಂತನ

ಡಾ ಎಸ್. ಶಿಶುಪಾಲ

ಕೃಷ್ಣನ ನಿಜವಾದ ತಾಯಿ ದೇವಕಿಯಾದರೂ ಅವನ ಪಾಲನೆ-ಪೋಷಣೆ ಮಾಡಿದ್ದು ಯಶೋದೆಯೆಂದು ನಮ್ಮ ಪುರಾಣಗಳಲ್ಲಿರುವ ಸಂಗತಿ. ಆದರೆ ಕೋಗಿಲೆ ಜಾತಿಗೆ ಸೇರಿದ ಹಕ್ಕಿಗಳು ಈ ಕ್ರಮವನ್ನೇ ಪಾಲಿಸುತ್ತವೆ. ಈ ರೀತಿಯ ಬಾಡಿಗೆ ಬಾಣಂತನಕ್ಕೆ ಬೇಕಾದ ಜೀವನಶೈಲಿಯ ಹೊಂದಾಣಿಕೆ ಮಾಡಿಕೊಂಡಿರುವುದು ಜೀವಿಗಳ ವಿಕಾಸದಲ್ಲಿ ಆಶ್ಚರ್ಯಕರವಾದ ವಿಚಾರ.

ಬಹುತೇಕ ಹಕ್ಕಿಗಳು ತಮ್ಮ ಕೌಶಲದಿಂದ ಗೂಡು ಕಟ್ಟಿ, ಮೊಟ್ಟೆಗಳನ್ನಿಟ್ಟು, ಮರಿಗಳನ್ನು ಸ್ವತಂತ್ರವಾಗುವ ತನಕ ಪೋಷಣೆ ಮಾಡುತ್ತವೆ. ಆದರೆ ಕುಕಿಲಿಡೇ ಕುಟುಂಬಕ್ಕೆ ಸೇರಿದ ಕುಕೂ ಜಾತಿಯ ಹಕ್ಕಿಗಳು ಇದಾವುದರ ತಾಪತ್ರಯಗಳೇ ಬೇಡವೆಂದು ಸಂತಾನಾಭಿವೃದ್ಧಿಗೋಸ್ಕರ ಪರಾವಲಂಬಿಗಳಾಗುವ (Brood parasitism) ಉಪಾಯವನ್ನು ಬೆಳೆಸಿಕೊಂಡಿವೆ. ಮೂಲತಃ ಗೂಡು ಕಟ್ಟಲು ಬಾರದ ಈ ಹಕ್ಕಿಗಳು ಮರಿಗಳ ಪೋಷಣೆಯನ್ನು ಮಾಡಲಾರವು. ಹಾಗಾಗಿ ತನ್ನ ಸಂತತಿಯ ಉಳಿವಿಗಾಗಿ ಇವು ತನ್ನ ಮರಿಗಳಿಗೆ ಬೇರೆ ಬೇರೆ ಹಕ್ಕಿಗಳನ್ನು ಬಾಡಿಗೆ ತಂದೆ-ತಾಯಿಯರನ್ನಾಗಿ ಪಡೆಯುತ್ತವೆ. ಇಂತಹ ಹಕ್ಕಿಗಳೆಂದರೆ ಕೋಗಿಲೆ, ಕೋಗಿಲೆಚಾಣ, ಕುಕೂಟ ಮುಂತಾದವುಗಳು. ಇವು ಬೇರೆಲ್ಲಾ ವಿಷಯಗಳಲ್ಲಿ ಇತರೆ ಹಕ್ಕಿಗಳನ್ನು ಹೋಲುತ್ತಿದ್ದರೂ ಸಂತಾನಾಭಿವೃದ್ಧಿ ವಿಷಯದಲ್ಲಿ ಮಾತ್ರ ಸೋಮಾರಿಗಳು. ಆದರೆ ಸಂತತಿಯ ಉಳಿವಿಗಾಗಿ ಜಾಣತನ ತೋರುತ್ತವೆ. ಕಾಗೆ, ಉಲಿಯಕ್ಕಿ, ಹರಟೆಮಲ್ಲ ಮುಂತಾದ ಹಕ್ಕಿಗಳನ್ನು ಈ ಕುಕೂ ಹಕ್ಕಿಗಳು ಬಾಡಿಗೆ ತಾಯಿಯರನ್ನಾಗಿ ಮಾಡಿಕೊಳ್ಳುತ್ತವೆ. ಬಾಡಿಗೆ ತಾಯಿಯಾಗುವ ಹಕ್ಕಿ ಪ್ರಭೇದದ ಸಂತಾನೋತ್ಪತ್ತಿ ಕಾಲವನ್ನು ಸಹ ಈ ಕುಕೂ ಜಾತಿಯ ಹಕ್ಕಿಗಳು ಅನುಸರಿಸುತ್ತವೆ.

ಮಿಲನದ ನಂತರ ಮೊಟ್ಟೆ ಇಡುವ ಮೊದಲು ಕುಕೂ ಹಕ್ಕಿಗಳು ತನ್ನ ಮರಿಗಳಿಗೆ ಬೇಕಾದ ಅತಿಥೇಯ ಹಕ್ಕಿಗಳ ಗೂಡುಗಳನ್ನು ಹುಡುಕುತ್ತವೆ. ಕುಕೂ ತಂದೆ ಹಕ್ಕಿಯು ಅತಿಥೇಯ ಹಕ್ಕಿಗಳ ಗೂಡಿನತ್ತ ಹೋಗಿ ಅಲ್ಲಿರುವ ಮೊಟ್ಟೆಗಳಿನ್ನಿಟ್ಟು ಕಾವು ಕೊಡುವಂತಹ ಹಕ್ಕಿಗಳಿಗೆ ಕಿರಿಕಿರಿ ಉಂಟುಮಾಡುತ್ತದೆ. ಆಗ ಗೂಡಿನಲ್ಲಿರುವ ಹಕ್ಕಿಯು ಈ ಗಂಡು ಹಕ್ಕಿಯನ್ನು ಅಟ್ಟಿಸಿಕೊಂಡು ಹೋಗುತ್ತದೆ. ಆ ಸಮಯವನ್ನೇ ಕಾಯುತ್ತಿದ್ದ ಹೆಣ್ಣು ಕುಕೂ ಹಕ್ಕಿಯೂ ತನ್ನದಲ್ಲದ ಗೂಡಿನಲ್ಲಿ ಮೊಟ್ಟೆಯನ್ನಿಡುತ್ತದೆ. ಇದೇ ರೀತಿ ವಿವಿಧ ಹಕ್ಕಿಗಳ ಗೂಡಿನಲ್ಲಿ ಮೊಟ್ಟೆಗಳನ್ನಿಟ್ಟು ಬಿಟ್ಟರೆ ತನ್ನ ತಾಯ್ತನದ ಕೆಲಸ ಮುಗಿಯಿತು.

ಇವುಗಳ ಮೊಟ್ಟೆಗಳು ಗಾತ್ರ ಮತ್ತು ಬಣ್ಣದಲ್ಲಿ ತಾನು ಆಯ್ಕೆ ಮಾಡಿಕೊಂಡ ಅತಿಥೇಯ ಹಕ್ಕಿಯ ಮೊಟ್ಟೆಯಂತೆ ಇರುವುದರಿಂದ ಅವು ಗೂಡಿಗೆ ಹಿಂದಿರುಗಿದಾಗ ತನ್ನ ಗೂಡಿನಲ್ಲಿರುವ ಬೇರೆ ಹಕ್ಕಿಯ ಮೊಟ್ಟೆಯನ್ನು ಗುರುತಿಸದೇ ಕಾವು ಕೊಡಲಾರಂಭಿಸುತ್ತವೆ. ಅತಿಥೇಯ ಹಕ್ಕಿಯ ಮೊಟ್ಟೆಗಳಿಂದ ಮರಿಗಳು ಹೊರಬರುವ ಒಂದೆರಡು ದಿನ ಮೊದಲೇ ಕುಕೂ ಹಕ್ಕಿಗಳ ಮರಿಗಳು ಹೊರಬರುತ್ತವೆ. ಕುಕೂ ಮರಿಗಳು ತಮ್ಮ ಪ್ರಕೃತಿದತ್ತವಾದ ಸ್ವಭಾವದಿಂದ ತನ್ನ ಸುತ್ತ ಇರುವ ಅತಿಥೇಯ ಹಕ್ಕಿಗಳ ಮೊಟ್ಟೆ/ಮರಿಗಳನ್ನು ಗೂಡಿನಿಂದ ಹೊರದೂಡುತ್ತವೆ. ಅತಿಥೇಯ ತಂದೆ-ತಾಯಿಯರು ತರುವ ಆಹಾರವನ್ನು ಮೊದಲು ಪಡೆದು ಶೀಘ್ರದಲ್ಲಿ ಬೆಳೆಯುತ್ತಾ ಹೋಗುತ್ತವೆ. ಮರಿಗಳನ್ನು ತನ್ನದು ಮತ್ತು ಪರರದ್ದು ಎಂಬುದನ್ನು ಪರಿಗಣಿಸದೆ ಪೋಷಕರು ಆಹಾರವನ್ನು ತಂದು ಎಲ್ಲಾ ಮರಿಗಳನ್ನು ಪೋಷಣೆ ಮಾಡುತ್ತವೆ.

ಮರಿಗಳು ಬೆಳೆದಂತೆ ಮರಿ ಕುಕೂ ಹಕ್ಕಿಯೂ ಬಾಡಿಗೆ ತಾಯಿ-ತಂದೆಯರಿಗಿಂತ ದೊಡ್ಡದಾಗಿ ಬೆಳೆದರೂ ಇವುಗಳ ಪೋಷಣೆ ನಿಲ್ಲುವುದಿಲ್ಲ. ಒಂದು ಸಾರಿ ಸ್ವತಂತ್ರವಾಗಿ ಜೀವಿಸುವುದನ್ನು ಕಲಿತ ಕುಕೂ ಹಕ್ಕಿಗಳು ಬಾಡಿಗೆ ತಂದೆ-ತಾಯಿಯರನ್ನು ಮರೆತು ಸ್ವತಃ ಜೀವನ ನಿರ್ವಹಣೆ ಮಾಡುತ್ತವೆ. ಸೂಕ್ತ ಕಾಲದಲ್ಲಿ ಸಂಗಾತಿಯನ್ನು ಕೂಡಿ ತನ್ನ ವಂಶಾವಳಿಗಳಲ್ಲಿ ಬಂದಿರುವ ಗುಣದಂತೆ ಸಂತಾನಾಭಿವೃದ್ಧಿಗೋಸ್ಕರ ಪರಾವಲಂಬಿ ಜೀವನ ನಡೆಸುತ್ತವೆ.

ಈ ಎಲ್ಲಾ ವಿಷಯಗಳನ್ನು ನ್ಯಾಷನಲ್ ಜಿಯೋಗ್ರಾಫಿಕ್ ಸಂಸ್ಥೆಗೆ ಸೇರಿದ ವಿಜ್ಞಾನಿಗಳು ನಿಸ್ತಂತು ತಂತ್ರಜ್ಞಾನ ಬಳಸಿ ಸಣ್ಣ ಕ್ಯಾಮೆರಾಗಳನ್ನು ಅತಿಥೇಯ ಹಕ್ಕಿಗಳ ಗೂಡಿನಲ್ಲಿರಿಸಿ ಅಧ್ಯಯನ ಮಾಡಿದ್ದಾರೆ. ಜೀವಿಗಳ ವಿಕಾಸದಲ್ಲಿ ಅತಿಥಿ ಮತ್ತು ಅತಿಥೇಯ ಹಕ್ಕಿಗಳು ತಮ್ಮ ಪ್ರಭೇಧಗಳನ್ನು ಉಳಿಸಿಕೊಳ್ಳುವಲ್ಲಿ ಸಫಲವಾಗಿವೆ. ಕೆಲವು ಅತಿಥೇಯ ಹಕ್ಕಿಗಳ ಪ್ರಭೇಧಗಳು ಈ ರೀತಿಯ ಪರಾವಲಂಬಿ ಹಕ್ಕಿಗಳಿಂದ ತಪ್ಪಿಸಿಕೊಳ್ಳಲು ತಮ್ಮ ಸಂತಾನೋತ್ಪತ್ತಿ ಕಾಲವನ್ನು ಮತ್ತು ಮೊಟ್ಟೆಗಳ ಆಕಾರ, ಗಾತ್ರ, ಬಣ್ಣಗಳನ್ನು ಮಾರ್ಪಾಡು ಮಾಡಲು ಆರಂಭಿಸಿವೆ. ಅದರೂ ಕುಕೂ ಹಕ್ಕಿಗಳ ಸಂತಾನ ಯಾವುದೇ ಶ್ರಮವಿಲ್ಲದೆ ಪರವಾಲಂಬಿಗಳಾಗಿ ಬೆಳೆಯುತ್ತವೆ. ಪ್ರಕೃತಿಯ ಮೂಸೆಯಲ್ಲಿ ಅರಳಿದ ಸೋಜಿಗವಲ್ಲವೇ ಇದು?

(ಲೇಖಕರು: ಪ್ರಾಧ್ಯಾಪಕರು, ಸೂಕ್ಷ್ಮಜೀವಿಶಾಸ್ತ್ರ ವಿಭಾಗ, ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ)

ಇಂಟಗ್ರೇಟೆಡ್ ಪದವಿ ಪ್ರವೇಶಕ್ಕೆ ಅರ್ಜಿ

ಬೇದ್ರೆ ಮಂಜುನಾಥ



ದೇಶದ ವಿವಿಧ ಭಾಗಗಳಲ್ಲಿರುವ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಶನ್ ಸಂಸ್ಥೆಗಳಲ್ಲಿನ ವಿವಿಧ ಇಂಟಗ್ರೇಟೆಡ್ ಪದವಿ ಕೋರ್ಸ್‌ಗಳ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಿದೆ.

ಆನ್‌ಲೈನ್‌ನಲ್ಲೇ ಅರ್ಜಿಗಳನ್ನು ಭರ್ತಿ ಮಾಡಬೇಕು. ಅರ್ಜಿ ಸಲ್ಲಿಸಲು ಕೊನೆ ದಿನ ಜೂನ್ 30, 2022

ಈ ಶಿಕ್ಷಣ ಸಂಸ್ಥೆಗಳಲ್ಲಿ ನಾಲ್ಕು ವರ್ಷಗಳ ಇಂಟಗ್ರೇಟೆಡ್ ಬಿ.ಎಸ್ಸಿ, ಬಿ.ಇಡಿ / ಬಿ.ಎ, ಬಿ.ಇಡಿ, ಎರಡು ವರ್ಷಗಳ ಬಿ.ಇಡಿ / ಎಂ.ಇಡಿ, ಶಿಕ್ಷಣದಲ್ಲಿ ಎಂ.ಫಿಲ್, ಆರು ವರ್ಷಗಳ ಇಂಟಗ್ರೇಟೆಡ್ ಎಂ.ಎಸ್ಸಿ.ಇಡಿ., ಒಂದು ವರ್ಷದ ಮಾರ್ಗದರ್ಶನ ಮತ್ತು ಆಪ್ತ ಸಲಹೆ ಡಿಪ್ಲೊಮಾ ಕೋರ್ಸ್‌ಗಳ ಅಧ್ಯಯನಕ್ಕೆ ಅವಕಾಶವಿದೆ.

ವಿದ್ಯಾರ್ಹತೆ : ದ್ವಿತೀಯ ಪಿಯುಸಿ/12ನೇ ತರಗತಿಯಲ್ಲಿ ಶೇ 50 ರಷ್ಟು ಅಂಕಗಳನ್ನು ಗಳಿಸಿದ ಅಭ್ಯರ್ಥಿಗಳು 4 ವರ್ಷಗಳ ಇಂಟಗ್ರೇಟೆಡ್ ಶಿಕ್ಷಣ ಪದವಿಗೆ ಅರ್ಜಿಸಲ್ಲಿಸಬಹುದು. ಬಿ.ಇಡಿ. ಕೋರ್ಸ್ ಪ್ರವೇಶಕ್ಕೆ ಅಭ್ಯರ್ಥಿಗಳು ಪದವಿ ಪರೀಕ್ಷೆಗಳಲ್ಲಿ ಶೇ 50 ರಷ್ಟು ಅಂಕಗಳಿಸಿರಬೇಕು.

ಪಠ್ಯಕ್ರಮ : ಪ್ರವೇಶ ಪರೀಕ್ಷೆಯಲ್ಲಿ, ಅಭ್ಯರ್ಥಿಗಳ ಶೈಕ್ಷಣಿಕ ಹಿನ್ನೆಲೆಯಲ್ಲಿ ಅವರು ಈಗಾಗಲೇ ಓದಿರುವ ಪಠ್ಯಕ್ರಮಕ್ಕೆ ಅನುಗುಣವಾದ ಪ್ರಶ್ನೆಗಳಿರುತ್ತವೆ. ಜೊತೆಗೆ ಇಂಗ್ಲಿಷ್ ಭಾಷಾ ನೈಪುಣ್ಯ (Language Proficiency) - 20 ಪ್ರಶ್ನೆಗಳು, ಬೋಧನಾ ಮನೋಭಾವ/ಅಭಿರುಚಿ (Teaching Aptitude/Attitude) - 30 ಪ್ರಶ್ನೆಗಳು ಮತ್ತು ತಾರ್ಕಿಕ ಸಾಮರ್ಥ್ಯ (Reasoning Ability) ಕುರಿತ 30 ಪ್ರಶ್ನೆಗಳಿರುತ್ತವೆ.

ಒಟ್ಟು 120 ನಿಮಿಷಗಳಲ್ಲಿ 80 ಪ್ರಶ್ನೆಗಳಿಗೆ ಅಭ್ಯರ್ಥಿಗಳು ಉತ್ತರಿಸಬೇಕಿದ್ದು ಪ್ರತಿ ಸರಿ ಉತ್ತರಕ್ಕೆ 2 ಅಂಕಗಳಿರುತ್ತವೆ. ಪ್ರತಿ ತಪ್ಪು ಉತ್ತರಕ್ಕೆ 0.5 ಅಂಕಗಳನ್ನು ಕಳೆಯಲಾಗುತ್ತದೆ. ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಈ ಹಿಂದಿನ ವರ್ಷಗಳ ಪ್ರವೇಶ ಪರೀಕ್ಷೆಯ ಪ್ರಶ್ನೆಪತ್ರಿಕೆಗಳು ಲಭ್ಯವಿದ್ದು ಅಭ್ಯರ್ಥಿಗಳನ್ನು ಅವುಗಳನ್ನು ಪರಾಮರ್ಶಿಸಬಹುದು.

ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು, ಉತ್ತಮ ಶಿಕ್ಷಕರನ್ನು ತರಬೇತಿಗೊಳಿಸಲು, ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯ (NCERT) ಅಂಗಸಂಸ್ಥೆಯಾಗಿ 1963ರಲ್ಲಿ ರೀಜನಲ್ ಕಾಲೇಜ್ ಆಫ್ ಎಜುಕೇಶನ್ ಅಸ್ತಿತ್ವಕ್ಕೆ ಬಂತು. ಅಜ್ಮೀರ್, ಜಮ್ಮು-ಕಾಶ್ಮೀರ, ಭೋಪಾಲ್, ಭುವನೇಶ್ವರ್, ಮೈಸೂರು, ಶಿಲ್ಲಾಂಗ್‌ಗಳಲ್ಲಿ ಈ ಕೇಂದ್ರಗಳಿವೆ. ಈಗ ಅವುಗಳನ್ನು ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಶನ್ ಎಂದು ಮರು ನಾಮಕರಣ ಮಾಡಲಾಗಿದೆ.

ಮೈಸೂರಿನಲ್ಲಿ ಸೀಟುಗಳ ಲಭ್ಯತೆ

ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ಕೇರಳ, ಲಕ್ಷದ್ವೀಪ, ಪುದುಚೆರಿ ಮತ್ತು ತಮಿಳುನಾಡುಗಳ ಅಭ್ಯರ್ಥಿಗಳಿಗೆ ಮೈಸೂರಿನಲ್ಲಿರುವ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್‌ನಲ್ಲಿ ಬಿ.ಎಸ್ಸಿ, ಬಿ.ಇಡಿ ಕೋರ್ಸ್‌ನ ಭೌತವಿಜ್ಞಾನ ಗುಂಪು ಮತ್ತು ಜೀವವಿಜ್ಞಾನ ಗುಂಪಿಗೆ ತಲಾ 44 ಸೀಟುಗಳಿವೆ. ಬಿ.ಎ, ಬಿ.ಇಡಿ, ಕೋರ್ಸ್‌ಗೆ 44 ಸೀಟುಗಳಿವೆ. ಎಂ.ಎಸ್ಸಿ, ಎಂ.ಇಡಿ (Mathematics, Chemistry, Physics)) ಕೋರ್ಸಿನ ಪ್ರತಿಯೊಂದು ವಿಷಯಕ್ಕೆ 18 ಸೀಟುಗಳಿವೆ. ಬಿ.ಇಡಿ ಕೋರ್ಸಿನ ವಿಜ್ಞಾನ ಹಾಗೂ ಗಣಿತ ಗುಂಪಿಗೆ 28 ಮತ್ತು ಸಮಾಜವಿಜ್ಞಾನ ಹಾಗೂ ಭಾಷೆಗಳ ಗುಂಪಿಗೆ 27 ಸೀಟುಗಳಿವೆ. ಎಂ.ಇಡಿ ಕೋರ್ಸಿಗೆ 35 ಸೀಟುಗಳಿವೆ.

ಆಯ್ಕೆ ವಿಧಾನ

ಅಭ್ಯರ್ಥಿಗಳ ಆಯ್ಕೆಯಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಗಳಿಸುವ ಅಂಕಗಳಿಗೆ ಶೇ 60 ಮತ್ತು ಅಭ್ಯರ್ಥಿಗಳ ಶೈಕ್ಷಣಿಕ ಪರೀಕ್ಷೆಯ ಅಂಕಗಳಿಗೆ ಶೇ 40 ಪ್ರಾಶಸ್ತ್ಯ ನೀಡಲಾಗುವುದು. ಕೌನ್ಸೆಲಿಂಗ್ ಮೂಲಕ ಸೀಟುಗಳ ಹಂಚಿಕೆ ನಡೆಯುತ್ತದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಸ್ಕಾಲರ್‌ಶಿಪ್ ಮತ್ತು ಹಾಸ್ಟೆಲ್ ಸೌಲಭ್ಯವಿದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿರಿ: www.riemysore.ac.in
https://cee.ncert.gov.in

ವಿದ್ಯಾರ್ಥಿ ವೇತನ ಕೈಪಿಡಿ

ನರ್ಸಿಂಗ್ ಸ್ಕಾಲರ್‌ಶಿಪ್, ಸಸಾಕಾವಾ ಇಂಡಿಯಾ ಲೆಪ್ರಸಿ ಫೌಂಡೇಶನ್ 2022-23

ವಿವರ: ನರ್ಸಿಂಗ್ ಸ್ಕಾಲರ್‌ಶಿಪ್, ಸಸಾಕಾವಾ ಇಂಡಿಯಾ ಲೆಪ್ರಸಿ ಫೌಂಡೇಶನ್ 2022-23, ಸೆಲ್ಫ್-ಸೆಟಲ್ಡ್ ಕುಷ್ಠರೋಗದ ಕಾಲೊನಿಗಳಲ್ಲಿ ವಾಸಿಸುವ ಉನ್ನತ ಅಧ್ಯಯನವನ್ನು ಮುಂದುವರಿಸಲು ಬಯಸುವ ವಿದ್ಯಾರ್ಥಿಗಳಿಗಾಗಿ ನೀಡುವ ವಿದ್ಯಾರ್ಥಿವೇತನವಾಗಿದೆ.

ಅರ್ಹತೆ: ಸೆಲ್ಫ್-ಸೆಟಲ್ಡ್ ಕುಷ್ಠರೋಗ ಕಾಲೊನಿಯಲ್ಲಿ ವಾಸಿಸುವ ಮತ್ತು ಬಿ.ಎಸ್‌ಸಿ ನರ್ಸಿಂಗ್ (ಬೇಸಿಕ್) ಮತ್ತು ಜಿಎನ್‌ಎಮ್ ಪದವಿಯನ್ನು ಮುಂದುವರಿಸಲು ಬಯಸುವ 17 ವರ್ಷಕ್ಕಿಂತ ಕಡಿಮೆ ವಯಸ್ಸಿನ ಅಭ್ಯರ್ಥಿಗಳಿಗೆ ಮುಕ್ತವಾಗಿದೆ.

ಆರ್ಥಿಕ ನೆರವು: ಬದಲಾಗಬಹುದಾದ ಬಹುಮಾನಗಳು
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಜೂನ್ 5, 2022
ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ
ಹೆಚ್ಚಿನ ಮಾಹಿತಿಗೆ: www.b4s.in/praja/FNS7

ಪರಿಸರ ವಿಜ್ಞಾನದಲ್ಲಿ ಎಂಎಸ್‌ಸಿ: ಉದ್ಯೋಗಾವಕಾಶಗಳೇನು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿ. ಪ್ರದೀಪ್ ಕುಮಾರ್

1. ನಾನು ಪರಿಸರ ವಿಜ್ಞಾನದಲ್ಲಿ ಎಂಎಸ್‌ಸಿ ಮಾಡುತ್ತಿದ್ದೇನೆ. ನನಗೆ ನನ್ನ ಮುಂದಿನ ನಡೆಯ ಬಗ್ಗೆ ಗೊಂದಲವಿದೆ. ನಾನು ಪಿಎಚ್‌ಡಿ ಮಾಡುವುದೋ ಅಥವಾ ಕೆಲಸಕ್ಕೆ ಸೇರುವುದೋ? ಕೆಲಸಕ್ಕೆ ಸೇರುವುದಾದರೆ, ಯಾವ ರೀತಿಯ ಕೆಲಸ ಆಯ್ಕೆ ಮಾಡಿಕೊಳ್ಳಲಿ? ಎಂಸ್‌ಸಿ ಪರಿಸರ ವಿಜ್ಞಾನದಲ್ಲಿ ಇರುವ ಉದ್ಯೋಗಾವಕಾಶಗಳ ಬಗ್ಗೆ ತಿಳಿಸಿ.

ಹೆಸರು, ಊರು ತಿಳಿಸಿಲ್ಲ.

ಸ್ನಾತಕೋತ್ತರ ಪದವಿಯ ನಂತರ ಪರಿಸರ ವಿಜ್ಞಾನಿ, ಪರಿಸರ ಎಂಜಿನಿಯರ್, ಪರಿಸರ ಜೀವಶಾಸ್ತ್ರಜ್ಞ, ಪರಿಸರ ಪತ್ರಕರ್ತ ಇತ್ಯಾದಿ ವೃತ್ತಿಗಳ ಅವಕಾಶಗಳಿವೆ. ಸರ್ಕಾರಿ ಮತ್ತು ಖಾಸಗಿ ಕ್ಷೇತ್ರದ ಗಣಿಗಳು, ಪರಮಾಣು ಘಟಕಗಳು, ರಸಗೊಬ್ಬರ ಸ್ಥಾವರಗಳು, ಡಿಸ್ಟಿಲರೀಸ್, ಜವಳಿ ಮತ್ತು ವರ್ಣದ್ರವ್ಯ ಉದ್ದಿಮೆಗಳು, ಆಹಾರ ಸಂಸ್ಕರಣಾ ಘಟಕಗಳು, ಜಲ ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿಗಳು, ಸರೋವರ ಸಂರಕ್ಷಣಾ ಇಲಾಖೆಗಳು, ನಗರ ಪ್ರಾಧಿಕಾರಗಳು ಇತ್ಯಾದಿ ವಲಯಗಳಲ್ಲಿ ನಿಮ್ಮ ಆಸಕಿ, ಅಭಿರುಚಿಯಂತೆ ವೃತ್ತಿಯನ್ನು ಅರಸಬಹುದು ಹಾಗೂ ಹೆಚ್ಚಿನ ತಜ್ಞತೆಗಾಗಿ, ಪಿಎಚ್‌ಡಿ ಮಾಡಬಹುದು.

2. ನಾನು ಪಿಯುಸಿಗೆ ಕಲಾ ವಿಭಾಗವನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಆದರೆ, ಕಾಲೇಜಿನ ಆಯ್ಕೆಯಲ್ಲಿ ಗೊಂದಲವಿದೆ. ದಯವಿಟ್ಟು, ಬೆಂಗಳೂರಿನ ಉತ್ತಮ ಕಲಾ ಕಾಲೇಜುಗಳ ಕುರಿತು ಮಾಹಿತಿ ನೀಡಿ.

ಹೆಸರು, ಊರು ತಿಳಿಸಿಲ್ಲ

ಉತ್ತಮ ಕಾಲೇಜುಗಳ ಆಯ್ಕೆಗೆ ಅಂತರ್ಜಾಲದಲ್ಲಿ ನ್ಯಾಷನಲ್ ಇನ್‌ಫರ್ಮೇಷನ್ ರ್‍ಯಾಂಕಿಂಗ್ ಫ್ರೇಮ್‌ವರ್ಕ್ ಮತ್ತು ಇನ್ನಿತರ ಸಂಸ್ಥೆಗಳ ರ್‍ಯಾಂಕಿಂಗ್ ಮಾಹಿತಿಯನ್ನು ಪರಾಮರ್ಶಿಸಿ ಹಾಗೂ ಕಾಲೇಜು ಆಯ್ಕೆ ಪ್ರಕ್ರಿಯೆ ಕುರಿತ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ. https://www.youtube.com/c/EducationalExpertManagementCareerConsultant

3. ನಾನು ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಬರೆದಿದ್ದೇನೆ. ಉತ್ತಮ ಅಂಕ ಗಳಿಸುವ ಭರವಸೆ ಇದೆ. ಪಿಯುಸಿ (ಪಿಸಿಎಂಬಿ) ಓದುತ್ತೇನೆ. ನನಗೆ ಎಂಬಿಬಿಎಸ್, ಎಂಜಿನಿಯರಿಂಗ್ ಓದುವುದರಲ್ಲಿ ಆಸಕ್ತಿ ಇಲ್ಲ. ಪದವಿಯ ನಂತರ ಕೋಚಿಂಗ್ ಪಡೆಯುವ ಮೂಲಕ ಕೆಎಎಸ್, ಐಎಎಸ್ ಮಾಡುವ ಗುರಿ ಹೊಂದಿದ್ದೇನೆ. ಹಾಗಾಗಿ, ಪಿಯುಸಿ ನಂತರ ನನ್ನ ಆಯ್ಕೆ ಯಾವುದಿರಬೇಕು?

ನಿಖಿತಾ ಎಂ ನಾಯ್ಕ್, ಹರಪನಹಳ್ಳಿ

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಯಾಗಿರುವಾಗಲೇ ಕೆಎಎಸ್, ಐಎಎಸ್ ಮಾಡಬೇಕೆನ್ನುವ ನಿಮ್ಮ ಗುರಿ ಶ್ಲಾಘನೀಯ. ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ ಸಂಸ್ಥೆಗಳು ನಡೆಸುವ ಈ ಪರೀಕ್ಷೆಗಳ ನಂತರ ಅಖಿಲ ಭಾರತ, ಗ್ರೂಪ್ ಎ, ಗ್ರೂಪ್ ಬಿ ಸೇರಿದಂತೆ ಸರ್ಕಾರದ ವಿವಿಧ ಸಂಸ್ಥೆಗಳಲ್ಲಿನ ಹುದ್ದೆಗಳ ವರ್ಗೀಕರಣವಿದೆ. ಆದ್ದರಿಂದ, ಈ ಎರಡೂ ಪರೀಕ್ಷೆಗಳ ಮೂಲಕ ಲಭ್ಯವಿರುವ ಹುದ್ದೆಗಳ ಅವಕಾಶಗಳನ್ನು ಗಮನಿಸಿ, ನಿಮಗೆ ಯಾವುದು ಸೂಕ್ತ ಎಂದು ಗುರುತಿಸಿ, ಅದಕ್ಕೆ ಅನುಗುಣವಾಗಿ ಪದವಿ ಕೋರ್ಸ್ ಮಾಡುವುದು ಒಳ್ಳೆಯದು. ಪದವಿಯಲ್ಲಿ ಓದುವ ವಿಷಯಕ್ಕೂ ಐಎಎಸ್ ಪರೀಕ್ಷೆಯ ಐಚ್ಛಿಕ ವಿಷಯಕ್ಕೂ ಸಾಮ್ಯತೆಯಿದ್ದರೆ, ನಿಮ್ಮ ಗುರಿಯ ಸಾಧನೆಗೆ ಸಹಾಯವಾಗುತ್ತದೆ. ಈ ಪರೀಕ್ಷೆಗಳ ಮಾದರಿ, ಐಚ್ಛಿಕ ವಿಷಯಗಳು, ಪಠ್ಯಕ್ರಮ ಇತ್ಯಾದಿಗಳಲ್ಲಿ ಆಗಿಂದಾಗ್ಗೆ ತಿದ್ದುಪಡಿಗಳಾಗುವ ಸಾಧ್ಯತೆಯಿರುತ್ತದೆ. ನೀವು ಪಿಯುಸಿ ಮಾಡಿದ ನಂತರ, ಈ ಬದಲಾವಣೆಗಳನ್ನು ಗಮನಿಸಿ, ಪದವಿಯ ಕೋರ್ಸ್ ಆಯ್ಕೆ ಮಾಡುವುದು ಸೂಕ್ತ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಯಾರೊಬ್ಬರ ಜೀವನೋಪಾಯವನ್ನೂ ಕಸಿದುಕೊಳ್ಳಬೇಡಿ. ಅದು ಪಾಪದ ಪ್ರವೃತ್ತಿ. –ಮಹಾವೀರ

ಸಿಜೆಐ ಮಾತು ಸಕಾಲಿಕ ಬೇಕಿದೆ ಸರ್ಕಾರಗಳ ಸ್ಪಂದನ

ದೆಹಲಿಯಲ್ಲಿ ಶನಿವಾರ ನಡೆದ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳ ಸಮ್ಮೇಳನದಲ್ಲಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಎನ್‌.ವಿ. ರಮಣ ಅವರು ಕೆಲವು ಪ್ರಮುಖ ವಿಷಯಗಳ ಬಗ್ಗೆ ಮಾತನಾಡಿದರು. ನ್ಯಾಯಾಂಗದ ಚಟುವಟಿಕೆಗಳು, ಶಾಸಕಾಂಗ ಮತ್ತು ಕಾರ್ಯಾಂಗದ ಕೆಲವು ಕೆಲಸಗಳಿಗೆ ಸಂಬಂಧಿಸಿದ ಮಾತುಗಳು ಅವು. ಈ ಮಾತುಗಳ ಮೂಲಕ ನ್ಯಾಯಮೂರ್ತಿ ರಮಣ ಅವರು, ದೇಶದ ಜನರ ಜೀವನದ ಮೇಲೆ ಹಲವು ಬಗೆಗಳಲ್ಲಿ ಪರಿಣಾಮ ಬೀರುತ್ತಿರುವ, ಆಡಳಿತಕ್ಕೆ ಸಂಬಂಧಿಸಿದ ವಿಚಾರಗಳ ಬಗ್ಗೆ ಬೆಳಕು ಚೆಲ್ಲಿದರು. ಪ್ರಧಾನಿ ನರೇಂದ್ರ ಮೋದಿ ಅವರ ಸಮ್ಮುಖದಲ್ಲಿ ಸಿಜೆಐ ಈ ಮಾತುಗಳನ್ನು ಆಡಿದರು ಎಂಬ ಕಾರಣ, ಅವು ಬಹಳ ಪ್ರಮುಖವಾಗುತ್ತವೆ, ಪ್ರಸ್ತುತವಾಗುತ್ತವೆ. ನ್ಯಾಯಾಲಯಗಳಲ್ಲಿ ವಿಚಾರಣೆಯ ಹಂತದಲ್ಲಿ ಇರುವ ಪ್ರಕರಣಗಳ ಸಂಖ್ಯೆ ಬಹಳ ದೊಡ್ಡದಿರುವುದು, ಸಕಾಲದಲ್ಲಿ ನ್ಯಾಯಾಂಗಕ್ಕೆ ನೇಮಕಾತಿ ನಡೆಸಲು ಆಗದಿರುವುದು, ನ್ಯಾಯಾಲಯಗಳಲ್ಲಿ ಮೂಲಸೌಕರ್ಯಗಳ ಕೊರತೆ ಇರುವುದು... ಇವೆಲ್ಲ ಬಹುತೇಕರಿಗೆ ಗೊತ್ತಿರುವ ವಿಷಯಗಳು. ನ್ಯಾಯಮೂರ್ತಿ ರಮಣ ಅವರು ಹೆಚ್ಚಿನ ಗಮನ ನೀಡಬೇಕಾದ ಅಗತ್ಯವಿರುವ ಇತರ ಕೆಲವು ವಿಷಯಗಳನ್ನೂ ಪ್ರಸ್ತಾಪಿಸಿದರು.

ತ್ವರಿತ ನ್ಯಾಯ ವಿತರಣೆ ಮತ್ತು ಪ್ರಜಾತಂತ್ರ ವ್ಯವಸ್ಥೆಗೆ ಬಲ ತುಂಬುವ ಸಲುವಾಗಿ, ಸಿಜೆಐ ಪ್ರಸ್ತಾಪಿಸಿರುವ ವಿಷಯಗಳನ್ನು ಅಧಿಕಾರಸ್ಥರು ಗಂಭೀರವಾಗಿ ಪರಿಗಣಿಸಬೇಕು

ನ್ಯಾಯಾಲಯಗಳಲ್ಲಿ ವಿಚಾರಣೆಯ ಹಂತದಲ್ಲಿ ಬಾಕಿ ಇರುವ ಒಟ್ಟು ಪ್ರಕರಣಗಳ ಪೈಕಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಾದಿ ಅಥವಾ ಪ್ರತಿವಾದಿ ಆಗಿರುವ ಪ್ರಕರಣಗಳ ಪಾಲು ಶೇಕಡ 50ರಷ್ಟು ಇದೆ ಎಂದು ಸಿಜೆಐ ಹೇಳಿದ್ದಾರೆ. ಸರ್ಕಾರದ ಎಲ್ಲ ಅಂಗಗಳು ತಮ್ಮ ಪಾಲಿನ ಕೆಲಸವನ್ನು ಸರಿಯಾಗಿ ಮಾಡುತ್ತಿದ್ದರೆ ನ್ಯಾಯಾಲಯಗಳು ವಿಚಾರಣೆ ನಡೆಸಬೇಕಾದ ಪ್ರಕರಣಗಳ ಸಂಖ್ಯೆ ಕಡಿಮೆ ಇರುತ್ತಿತ್ತು, ಅಲ್ಲದೆ, ನೀತಿ ನಿರೂಪಣೆಗೆ ಸಂಬಂಧಿಸಿದ ವಿಚಾರಗಳಲ್ಲಿ ತೀರ್ಮಾನ ನೀಡಬೇಕಾದ ಪ್ರಮೇಯ ಎದುರಾಗುತ್ತಿರಲಿಲ್ಲ. ಅಂದರೆ, ಶಾಸಕಾಂಗ ಮತ್ತು ಕಾರ್ಯಾಂಗಕ್ಕೆ ಸಂಬಂಧಿಸಿದ ವ್ಯವಹಾರಗಳಲ್ಲಿ ಮಧ್ಯಪ್ರವೇಶ ಮಾಡದೇ ಇರುವುದಕ್ಕೆ ನ್ಯಾಯಾಂಗಕ್ಕೆ ಸಾಧ್ಯವಾಗುತ್ತದೆ. ಜಮೀನು ಮತ್ತು ಕಂದಾಯಕ್ಕೆ ಸಂಬಂಧಿಸಿದ ವ್ಯಾಜ್ಯಗಳು ಹೆಚ್ಚಿನ ಸಂಖ್ಯೆಯಲ್ಲಿ ಇರುವುದನ್ನು ಸಿಜೆಐ ರಮಣ ಉಲ್ಲೇಖಿಸಿದರು. ಸರ್ಕಾರದ ವಿವಿಧ ಇಲಾಖೆಗಳ ನಡುವೆ, ಸರ್ಕಾರದ ಅಧೀನದ ಕಂಪನಿಗಳ ನಡುವಿನ ವ್ಯಾಜ್ಯಗಳು ಕೋರ್ಟ್ ಮೆಟ್ಟಿಲೇರುತ್ತಿರುವುದನ್ನೂ ಕೂಡ ಅವರು ಪ್ರಸ್ತಾಪಿಸಿದರು. ಇದು ಕಾಯಿಲೆಯೊಂದು ಉಲ್ಬಣಗೊಳ್ಳುತ್ತಿರುವುದರ ಸೂಚನೆ ಎಂದರು. ಇಂತಹ ಪ್ರಕರಣಗಳು ಆಡಳಿತ ಹಾಗೂ ವ್ಯವಸ್ಥೆಯಲ್ಲಿ ಎಲ್ಲ ಹಂತಗಳಲ್ಲಿ ಇರುವ ಲೋಪಗಳನ್ನು ತೋರಿಸುತ್ತವೆ. 'ಅಕ್ರಮ' ಬಂಧನಗಳು, ಪೊಲೀಸರ ವಶದಲ್ಲಿ ಇದ್ದಾಗ ಆರೋಪಿಗಳಿಗೆ ಹಿಂಸೆ ನೀಡುವುದು, ಪೊಲೀಸರು ಪಕ್ಷಪಾತವಾಗಿ ತನಿಖೆ ನಡೆಸುವುದರ ಬಗ್ಗೆಯೂ ಸಿಜೆಐ ಮಾತನಾಡಿದರು. ಇಂತಹ ಪ್ರಕರಣಗಳಲ್ಲಿ ಕೂಡ ಸಂತ್ರಸ್ತರು ನ್ಯಾಯಾಲಯದ ಬಾಗಿಲು ತಟ್ಟುತ್ತಾರೆ. ಸೇವಾ ಹಿರಿತನ, ಪಿಂಚಣಿ ನೀಡುವುದಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಸೇವಾ ನಿಯಮಗಳನ್ನು ಸರಿಯಾಗಿ ಅನ್ವಯ ಮಾಡಿದರೆ ಯಾರೂ ಕೋರ್ಟ್ ಮೆಟ್ಟಿಲೇರಬೇಕಾದ ಪರಿಸ್ಥಿತಿ ಸೃಷ್ಟಿಯಾಗುವುದಿಲ್ಲ ಎಂದು ಅವರು ಹೇಳಿರುವುದು ಸರಿಯಾಗಿದೆ.

ಶಾಸನಗಳನ್ನು ರೂಪಿಸುವಾಗ ಸಂಸತ್ತಿನ ಒಳಗೆ ಮತ್ತು ಹೊರಗೆ ಸಾರ್ವಜನಿಕರ ಜೊತೆ ಚರ್ಚಿಸುವ ಪದ್ಧತಿ ಇಲ್ಲವಾಗುತ್ತಿರುವುದರ ಬಗ್ಗೆಯೂ ಸಿಜೆಐ ಪ್ರಸ್ತಾಪಿಸಿದರು. ಈ ಸಮಾಲೋಚನೆ ಇಲ್ಲವಾಗುತ್ತಿರುವುದು ಕೂಡ ಜನ ನ್ಯಾಯಾಲಯದ ಮೊರೆ ಹೋಗಬೇಕಾದ ಸ್ಥಿತಿಯನ್ನು ನಿರ್ಮಿಸುತ್ತಿದೆ. ಇದನ್ನು ಸಿಜೆಐ ಅವರು ಒತ್ತಿ ಹೇಳಿದ್ದಾರೆ. ಹಲವು ಮಸೂದೆಗಳಿಗೆ ಉದ್ದೇಶಪೂರ್ವಕವಾಗಿಯೇ ಹೆಚ್ಚಿನ ಚರ್ಚೆ ಇಲ್ಲದೆ ಶಾಸನಸಭೆಗಳ ಅನುಮೋದನೆ ಪಡೆದುಕೊಳ್ಳಲಾಗುತ್ತಿದೆ. ಅಂತಹ ಮಸೂದೆಗಳು ಕಾಯ್ದೆಗಳಾಗಿ ಜಾರಿಗೆ ಬಂದಾಗ, ಅವುಗಳಲ್ಲಿ ಒಂದಿಷ್ಟು ಲೋಪಗಳು ಉಳಿದುಕೊಳ್ಳುತ್ತವೆ. ಅವುಗಳನ್ನು ನ್ಯಾಯಾಲಯಗಳು ವಿಚಾರಣೆಗೆ ಎತ್ತಿಕೊಳ್ಳಬೇಕಾಗುತ್ತದೆ. ಇದನ್ನು ಕಾರ್ಯಾಂಗವು ಸಂಸತ್ತಿನ ಮೇಲೆ ನಡೆಸುವ ಸವಾರಿಯ ರೂಪದಲ್ಲಿಯೂ ಗ್ರಹಿಸಬಹುದು. ಕೋರ್ಟ್ ನೀಡಿದ ತೀರ್ಮಾನಗಳನ್ನು ಅನುಷ್ಠಾನಕ್ಕೆ ತರದೆ (ಕೆಲವೊಮ್ಮೆ ಉದ್ದೇಶಪೂರ್ವಕವಾಗಿ ಅನುಷ್ಠಾನಕ್ಕೆ ತರದೆ), ಅದು ನ್ಯಾಯಾಂಗ ನಿಂದನೆಯ ಪ್ರಕರಣವಾಗಿ ಮತ್ತೆ ಕೋರ್ಟ್ ಮೆಟ್ಟಿಲೇರುವುದು ಕೂಡ ಇದೆ. ಇದು ಹೆಚ್ಚು ಗಂಭೀರವಾದ ವಿಚಾರ. ಸಿಜೆಐ ಪ್ರಸ್ತಾಪಿಸಿರುವ ವಿಷಯಗಳನ್ನು ಅಧಿಕಾರಸ್ಥರು ಗಂಭೀರವಾಗಿ ಪರಿಗಣಿಸಬೇಕು. ನ್ಯಾಯಾಲಯಗಳು ಜನರಿಗೆ ತ್ವರಿತವಾಗಿ ನ್ಯಾಯ ಒದಗಿಸುವಂತೆ ಆಗಬೇಕು ಎಂಬ ದೃಷ್ಟಿಯಿಂದ ಮಾತ್ರವೇ ಅಲ್ಲದೆ, ದೇಶದ ಪ್ರಜಾತಂತ್ರ ವ್ಯವಸ್ಥೆಯನ್ನು ಇನ್ನಷ್ಟು ಗಟ್ಟಿಗೊಳಿಸಬೇಕಾದ ಅಗತ್ಯದ ಕಾರಣಕ್ಕಾಗಿಯೂ ಇದು ಆಗಬೇಕು.

ದಿನದ ಟ್ವೀಟ್

ಬಲವಾದ ಸಂದೇಶ ರವಾನೆಯಾಗಲಿ

ತಮಿಳುನಾಡಿನಲ್ಲಿ ಪೊಲೀಸರ ವಶದಲ್ಲಿದ್ದ ವ್ಯಕ್ತಿಗಳು ಮೃತಪಟ್ಟ ಪ್ರಕರಣದ ತನಿಖೆಯ ಬಳಿಕ ಇಬ್ಬರು ಪೊಲೀಸರನ್ನು ಹತ್ಯೆ ಆರೋಪದ ಮೇಲೆ ಬಂಧಿಸಲಾಗಿದೆ. ಇನ್ನೂ ಕೆಲವರನ್ನು ಬಂಧಿಸುವ ಸಾಧ್ಯತೆ ಇದೆ ಎಂದು ವರದಿಗಳು ಹೇಳಿವೆ. ಪೊಲೀಸ್ ವಶದಲ್ಲಿದ್ದ ವ್ಯಕ್ತಿಯ ಸಾವು ಸಂಭವಿಸಿದ ಎಲ್ಲ ಪ್ರಕರಣಗಳಲ್ಲೂ ಎಸ್‌.ಪಿ/ ಡಿವೈಎಸ್‌ಪಿ ಅವರು ತಕ್ಷಣ ಅಮಾನತುಗೊಳ್ಳುವಂತಾದರೆ (ತನಿಖೆ ಬಾಕಿ ಇರಿಸಿ) ಬಲವಾದ ಸಂದೇಶವನ್ನು ರವಾನಿಸಿದಂತೆ ಆಗುತ್ತದೆ.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

ಕಿಡಿನುಡಿ

ಬೊಮ್ಮಾಯಿ ಅವರನ್ನು ಎಲೆಕ್ಟೆಡ್ ಅಲ್ಲ, ಅಪಾಯಿಂಟೆಡ್ ಸಿ.ಎಂ. ಎನ್ನುತ್ತಿದ್ದೀರಲ್ಲ ಸಿದ್ದರಾಮಯ್ಯನವರೇ, 2013ರಲ್ಲಿ ಕಾಂಗ್ರೆಸ್ ನಿಮ್ಮನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಣೆ ಮಾಡಿ ಚುನಾವಣೆಗೆ ಇಳಿದಿತ್ತಾ?

ಪ್ರತಾಪ್ ಸಿಂಹ, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಶುಕ್ರವಾರ, 9-5-1997

• **ದೇವೇಗೌಡರ ಮಾನಹಾನಿ ಯತ್ನ: ಪ್ರೊ. ಗೌಡ ಆರೋಪಿ**

ನವದೆಹಲಿ, ಮೇ 8 (ಪಿಟಿಐ): ದೆಹಲಿ ನ್ಯಾಯಾಲಯವು ಮಾಜಿ ಪ್ರಧಾನಿ ಎಚ್‌.ಡಿ. ದೇವೇಗೌಡ ಅವರ ಬಗ್ಗೆ ಎರಡು ವಿವಾದಾತ್ಮಕ ಪುಸ್ತಕಗಳನ್ನು ಬರೆದ ಮಾಜಿ ಲೋಕಸಭಾ ಸದಸ್ಯ ಪ್ರೊ. ವೆಂಕಟಗಿರಿ ಗೌಡ ಹಾಗೂ ಪ್ರಕಾಶಕ ಗೋಪಾಲಕೃಷ್ಣನ್ ಅವರನ್ನು ಮಾನಹಾನಿಗೆ ಸಂಬಂಧಿಸಿದ ಪ್ರಕರಣದಲ್ಲಿ ಆರೋಪಿಗಳೆಂದು ಪರಿಗಣಿಸಿದೆ.

ಸೆಷನ್ಸ್ ನ್ಯಾಯಾಧೀಶರಾದ ಇಂದ್ರಮಿತ್ ಕೌರ್ ಇಂದು ನೀಡಿರುವ ತೀರ್ಪಿನಲ್ಲಿ, ಮೇಲುನೋಟಕ್ಕೆ ಅವರನ್ನು ಆರೋಪಿಗಳೆಂದು ಪರಿಗಣಿಸಲು ಸಾಕಷ್ಟು ಸಾಕ್ಷ್ಯಾಧಾರಗಳಿದ್ದು ವಿಚಾರಣೆಗೆ ಒಳಪಡಿಸಬಹುದೆಂದು ತೀರ್ಪು ನೀಡಿದ್ದಾರೆ.

ಇದಕ್ಕೆ ಮೊದಲು ದೇವೇಗೌಡರ ಪರ ವಕೀಲ ಮಾನ್, ಪುಸ್ತಕಗಳಲ್ಲಿ ದೇವೇಗೌಡರಿಗೆ ಮಾನಹಾನಿಯಾಗುವಂತಹ ಹಲವಾರು ಅಂಶಗಳು ಇವೆ ಎಂದು ನ್ಯಾಯಾಲಯಕ್ಕೆ ತಿಳಿಸಿದರು. ಗೃಹ ಸಚಿವಾಲಯವು ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲು ಅನುಮತಿ ನೀಡಿದೆ ಎಂದರು.

• **ಸೋನಿಯಾ ಈಗ ಕಾಂಗ್ರೆಸ್ ಸದಸ್ಯೆ**

ನವದೆಹಲಿ, ಮೇ 8 (ಪಿಟಿಐ)– ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಪತ್ನಿ ಸೋನಿಯಾ ಗಾಂಧಿ ಈಗ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಸದಸ್ಯರು.

ಈ ಬಗ್ಗೆ ಅಧಿಕೃತ ಪ್ರಕಟಣೆ ಸದ್ಯದಲ್ಲೇ ಹೊರಬೀಳಲಿದೆ. ಈಗತಾನೆ ಅಂತ್ಯಗೊಂಡ ಪಕ್ಷದ ಪ್ರಾಥಮಿಕ ಸದಸ್ಯತ್ವ ನೋಂದಣಿ ಕಾರ್ಯಕ್ರಮದಲ್ಲಿ ಸೋನಿಯಾ ಅವರು ಸದಸ್ಯರಾಗಿ ಪಕ್ಷ ಸೇರಿದ್ದಾರೆ. ರಾಜೀವ್ ಗಾಂಧಿ ಅವರು 1991ರಲ್ಲಿ ಹತ್ಯೆಯಾದ ನಂತರ ಅವರನ್ನು ಪಕ್ಷದ ಅಧ್ಯಕ್ಷ ಸ್ಥಾನ ವಹಿಸಿಕೊಳ್ಳುವಂತೆ ಆಹ್ವಾನಿಸಲಾಯಿತು. ಆದರೆ ಸೋನಿಯಾ, ಸಕ್ರಿಯ ರಾಜಕಾರಣದಿಂದ ದೂರವಿರುವುದಾಗಿ ಹೇಳಿ ಆಹ್ವಾನವನ್ನು ನಿರಾಕರಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 9-5-1972

• **'ಕರ್ನಾಟಕ' ಅಥವಾ 'ಕನ್ನಡನಾಡು' ಎಂದಾಗಲಿ: ವರಕವಿ ದ.ರಾ. ಬೇಂದ್ರೆ ಅವರ ಸಮ್ಮತಿ**

ಧಾರವಾಡ, ಮೇ 8– ರಾಜ್ಯದ ಹೆಸರನ್ನು ಬದಲಾಯಿಸಲು ರಾಜ್ಯ ಸಂಪುಟವು ಕೈಗೊಂಡ ನಿರ್ಧಾರವನ್ನು ಉತ್ತರ ಕರ್ನಾಟಕದ ಸಮಗ್ರ ಜನತೆ ಮನಸಾರೆ ಸ್ವಾಗತಿಸಿ, ಬಹುಕಾಲದಿಂದ ಬಯಸಿದ ಬೇಡಿಕೆಯನ್ನು ಈಡೇರಿಸಿದ್ದಕ್ಕಾಗಿ ರಾಜ್ಯ ಸರ್ಕಾರವನ್ನು ಹೃತ್ಪೂರ್ವಕವಾಗಿ ಅಭಿನಂದಿಸಿದೆ.

ರಾಜ್ಯದ ಹೆಸರು 'ಕರ್ನಾಟಕ' ಅಥವಾ 'ಕನ್ನಡನಾಡು' ಎಂದಿರಬೇಕೆ ಎಂಬ ಬಗೆಗೆ ಅಲ್ಪಸ್ವಲ್ಪ ಭಿನ್ನಾಭಿಪ್ರಾಯವಿದ್ದರೂ ಬಹುಮತದ ಬೆಂಬಲ 'ಕರ್ನಾಟಕ' ಎಂಬ ಹೆಸರಿಗೆ ಇದ್ದಂತೆ ಕಂಡುಬರುತ್ತದೆ.

'ಪ್ರಜಾವಾಣಿ'ಗೆ ನೀಡಿದ ಸಂದರ್ಶನದಲ್ಲಿ ಹಿರಿಯ ಸಾಹಿತಿಗಳು, ಪ್ರಮುಖರು ತಮ್ಮ ಅಭಿಪ್ರಾಯವನ್ನು ವಿವಿಧ ರೀತಿಯಲ್ಲಿ ವ್ಯಕ್ತಪಡಿಸಿದ್ದಾರೆ.

'ರಾಜ್ಯದ ಹೆಸರು 'ಕರ್ನಾಟಕ' ಎಂದಾಗಲಿ ಅಥವಾ 'ಕನ್ನಡನಾಡು' ಎಂದಾಗಲಿ ಒಟ್ಟಾರೆ ಎರಡಕ್ಕೂ ನನ್ನ ಸಮ್ಮತಿ ಇದೆ' ಎಂದು ವರಕವಿ ಡಾ. ದ.ರಾ.ಬೇಂದ್ರೆ ಅವರು ತಿಳಿಸಿದರೂ 'ಕನ್ನಡನಾಡು' ಎಂದು ಕರೆದರೆ ಹೆಚ್ಚು ಹೊಂದಿಕೆ ಆಗುತ್ತದೆ' ಎಂದರು.

ಸಾಟಿಯಿಲ್ಲದ ಕಲಿಕೆಯ ಕ್ರಮವೊಂದನ್ನು ಫಿನ್‌ಲ್ಯಾಂಡ್ ಕಟ್ಟಿಕೊಂಡಿದ್ದಾದರೂ ಹೇಗೆ?

ಪುಟ್ಟ ದೇಶ: ಜಗತ್ಪ್ರಸಿದ್ಧ ಪಾಠ

ವಿಶ್ಲೇಷಣೆ

ವಸಂತ ಶೆಟ್ಟಿ

ಇಪ್ಪತ್ತನೆಯ ಶತಮಾನದ ಈಚೆಗೆ ಒಂದು ದೇಶ ಮುಂದುವರಿಯಲು ಬಹಳ ಮುಖ್ಯವಾಗಿ ಬೇಕಾದ ಏರ್ಪಾಡು ಏನು ಅನ್ನುವ ಪ್ರಶ್ನೆಯನ್ನು ಯಾರೇ ಕೇಳಿಕೊಂಡರೂ ಸಿಗುವ ಉತ್ತರ 'ಶಿಕ್ಷಣ'. ಯಾವ ದೇಶ ಶಿಕ್ಷಣಕ್ಕೆ ಒತ್ತು ಕೊಟ್ಟಿದೆಯೋ ತನ್ನ ಜಿಡಿಪಿಯಲ್ಲಿ ಕಡಿಮೆಯೆಂದರೂ ಶೇ 5ರಷ್ಟು ಪಾಲನ್ನು ಶಿಕ್ಷಣಕ್ಕಾಗಿ ಮುಡಿಪಿಟ್ಟಿದೆಯೋ ಅಲ್ಲಿ ಶಿಕ್ಷಣದಲ್ಲಿ ದೊಡ್ಡ ಮಟ್ಟದ ಪ್ರಗತಿ ಮತ್ತು ಆ ಪ್ರಗತಿಯ ಬಲದಿಂದ ದೇಶದ ಅರ್ಥ ವ್ಯವಸ್ಥೆಯನ್ನೂ ಜನರ ಜೀವನಮಟ್ಟವನ್ನೂ ಮೇಲಕ್ಕೆತ್ತುವ ಕೆಲಸಗಳಾಗಿವೆ ಎಂಬುದನ್ನು ಕಾಣಬಹುದು.

ಬರೀ ಹಣವೊಂದಿದ್ದರೆ ಸಾಲದು, ಕಲಿಕೆಯ ಕುರಿತು ದೇಶವೊಂದರ ನೋಟ ಹೇಗಿದೆ ಅನ್ನುವುದೂ ಅಷ್ಟೇ ಮುಖ್ಯ. ಶಿಕ್ಷಣದಲ್ಲಿ ಅಪಾರ ಪ್ರಗತಿ ಸಾಧಿಸಿರುವ ನಾಡುಗಳ ನಡುವಿನ ಹೋಲಿಕೆಯಲ್ಲಿ ಯಾವತ್ತಿಗೂ ಮುಂಚೂಣಿಯಲ್ಲಿ ಬರುವ ಫಿನ್‌ಲ್ಯಾಂಡ್ ಅನ್ನುವ ಪುಟಾಣಿ ದೇಶದಿಂದ ಭಾರತವೂ ಸೇರಿದಂತೆ ವಿಶ್ವದ ಎಲ್ಲ ದೇಶಗಳೂ ಕಲಿಯುವುದು ಬಹಳಷ್ಟಿದೆ.

ಭೂಮಿಯ ಉತ್ತರ ಧ್ರುವದ ಹತ್ತಿರಕ್ಕೆ ಇರುವ, ವರ್ಷದ ಅರ್ಧಕ್ಕೂ ಹೆಚ್ಚು ಕಾಲ ಹಿಮದಿಂದ ಮುಚ್ಚಿರುವ ಫಿನ್‌ಲ್ಯಾಂಡಿನಲ್ಲಿ 55 ಲಕ್ಷ ಜನಸಂಖ್ಯೆಯಿದೆ. ದೊಡ್ಡ ಪ್ರಮಾಣದ ಕಾಡಿನಿಂದ ಮರಮುಟ್ಟು ರಫ್ತು ಮಾಡುವುದೇ ಶತಮಾನಗಳ ಕಾಲ ಅದರ ವರಮಾನದ ಮುಖ್ಯ ಮೂಲವಾಗಿತ್ತು. ನಾನೂರು ವರ್ಷ ಸ್ವೀಡನ್ ಮತ್ತು ರಷ್ಯಾದ ದಾಳಿಕೋರರ ಹಾವಳಿಯಲ್ಲಿ ಕಾಲ್ಚೆಂಡಿನಂತೆ ಬಳಲಿದ್ದ ನಾಡೊಂದು ಇಂದು ಶಿಕ್ಷಣ, ಹೊಸತನ್ನು ಕಂಡುಹಿಡಿಯುವುದು, ವ್ಯಾಪಾರ, ತಂತ್ರಜ್ಞಾನ, ಆರೋಗ್ಯ, ಲಿಂಗ ಸಮಾನತೆಯಿಂದ ಹಿಡಿದು ಕೊನೆಗೆ ಅತ್ಯಂತ ಸಂತಸದಿಂದಿರುವ ನಾಡು ಅನ್ನುವವರೆಗೆ ಹಲವು ಸಾಧನೆಯ ಗರಿಗಳನ್ನು ತನ್ನ ಮುಡಿಗೇರಿಸಿಕೊಂಡಿದೆ. ಅದರ ಎಲ್ಲ ಸಾಧನೆಗಳ ಮೂಲದಲ್ಲಿ ಇರುವುದು ಒಂದು ಗಟ್ಟಿಯಾದ, ಎಲ್ಲರಿಗೂ ತಲುಪುವಂತಹ, ಅದ್ಭುತ ಗುಣಮಟ್ಟದ, ಉಚಿತವಾದ, ಫಿನ್ನಿಶ್ ನುಡಿಯಲ್ಲಿನ ಕಲಿಕೆಯ ವ್ಯವಸ್ಥೆ.

ಇದು ಹೇಗೆ ಸಾಧ್ಯವಾಯಿತು? ಸ್ಪರ್ಧೆಯೇ ಶಿಕ್ಷಣದ ಉದ್ದೇಶ ಅಂತಾಗಿರುವ ಇಂದಿನ ಜಗತ್ತಿನಲ್ಲಿ, ಸ್ಪರ್ಧೆ ಅನ್ನುವ ಪದವನ್ನೇ ತನ್ನ ಶಿಕ್ಷಣದ ಕುರಿತ ನೋಟದಿಂದ ಹೊರಗಿರಿಸಿರುವ ಫಿನ್‌ಲ್ಯಾಂಡ್ ಹೇಗೆ ಜಗತ್ತಿನ ಸಾಟಿಯಿಲ್ಲದ ಕಲಿಕೆಯ ಏರ್ಪಾಡೊಂದನ್ನು ಕಟ್ಟಿಕೊಂಡಿತು?- ಈ ಪ್ರಶ್ನೆಗಳಿಗೆ ಉತ್ತರ ಅರಸಿ ಇಂದು ಜಗತ್ತಿನ ಹಲವು ದೇಶಗಳ ಶಿಕ್ಷಣ ತಜ್ಞರು ಫಿನ್‌ಲ್ಯಾಂಡಿಗೆ ಅಧ್ಯಯನಕ್ಕೆ ಹೋಗುತ್ತಿದ್ದಾರೆ.

ಈ ಬದಲಾವಣೆ ಹೇಗೆ ಸಾಧ್ಯವಾಯಿತು ಎಂದು ವಿವರಿಸಲು ಫಿನ್‌ಲ್ಯಾಂಡಿನ ಶಿಕ್ಷಣ ತಜ್ಞ ಡಾ. ಪಾಸಿ ಸ್ಯಾಲ್‌ಬರ್ಗ್ 'ಫಿನ್ನಿಶ್ ಲೆಸನ್ಸ್' ಅನ್ನುವ ಮೂರು ಭಾಗಗಳ ಪುಸ್ತಕವನ್ನು ಬರೆದಿದ್ದಾರೆ. ಅಲ್ಲಿ ಜಗತ್ತಿನ ಬಹುತೇಕ ದೇಶಗಳು ಪಾಲಿಸುತ್ತಿರುವ, ಸ್ಪರ್ಧೆಯನ್ನೇ ಕೇಂದ್ರವಾಗಿ ಇಟ್ಟುಕೊಂಡಿರುವ 'ಗ್ಲೋಬಲ್ ಎಜುಕೇಶನ್ ರಿಫಾರ್ಮ್ಸ್ ಮೂವ್‌ಮೆಂಟ್' (GERM) ಎದುರು ಫಿನ್ನಿಶ್ ಮಾದರಿ ಹೇಗೆ ಬೇರೆಯಾಗಿದೆ, ಯಶಸ್ವಿಯಾಗಿದೆ ಅನ್ನುವುದನ್ನು ತೆರೆದಿಟ್ಟಿದ್ದಾರೆ. ಅವರ ವಾದ ಸರಣಿ ಏನು?

●ಸ್ಪರ್ಧೆಯ ಬದಲು ಸಹಕಾರ: ಜಗತ್ತಿನ ಯಾವುದೇ ದೇಶದ ಶಿಕ್ಷಣ ಸಚಿವರನ್ನು 'ನಿಮ್ಮ ಗುರಿ ಏನು' ಎಂದು ಕೇಳಿದರೆ, 'ಶಿಕ್ಷಣದಲ್ಲಿ ಜಗತ್ತಿಗೆ ನಂಬರ್ ಒನ್' ಆಗುವುದು ಅನ್ನಬಹುದು. ಆದರೆ ಫಿನ್‌ಲ್ಯಾಂಡ್ ಎಂದಿಗೂ ಇದಕ್ಕೆ ಈಡಾಗಿಲ್ಲ. ಒಬ್ಬರಿಗಿಂತ ಒಬ್ಬರು ಮುಂದೆ ಹೋಗುವ ಸ್ಪರ್ಧೆ ಶಿಕ್ಷಣದ ಉದ್ದೇಶವಲ್ಲ, ಬದಲಿಗೆ ಎಲ್ಲ ತರಹದ ಹಿನ್ನೆಲೆಯಿಂದ ಬಂದ ಮಕ್ಕಳಿಗೂ ಸಮಾನವಾದ ಅವಕಾಶವನ್ನು ಕಲ್ಪಿಸುವ, ಅವರೆಲ್ಲರೂ ಜೊತೆಗೂಡಿ, ಒತ್ತಡವಿಲ್ಲದೆ ಕಲಿಯುವಂತಹ ಉಚಿತವಾದ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಫಿನ್ನಿಶ್ ನುಡಿಯಲ್ಲಿ ಕಟ್ಟಿಕೊಂಡಿದ್ದು ಫಿನ್‌ಲ್ಯಾಂಡಿನ ಹೆಗ್ಗಳಿಕೆ. ಇಲ್ಲಿ ಯಾವುದೇ ಶಾಲೆ, ಶಿಕ್ಷಕರು ಮತ್ತು ಮಕ್ಕಳ ನಡುವೆ ಹೋಲಿಕೆ ಮಾಡಲು ಅವಕಾಶವಿಲ್ಲ.

●ಸರಿಪಡಿಸುವುದಕ್ಕಿಂತ ತಡೆಗಟ್ಟುವುದೇ ಮೇಲು: ಜಗತ್ತಿನಾದ್ಯಂತ ಸರ್ಕಾರಗಳು ಶಿಕ್ಷಣಕ್ಕೆ ಮೀಸಲಿಡುವ ಹಣದ ಹೆಚ್ಚಿನ ಪಾಲು ಹಿರಿಯ ಪ್ರಾಥಮಿಕ ಮತ್ತು ಅದಕ್ಕಿಂತ ಮೇಲಿನ ಮಟ್ಟದ ಕಲಿಕೆಯತ್ತ ಹರಿಯುತ್ತದೆ. ಆದರೆ ಫಿನ್‌ಲ್ಯಾಂಡಿನಲ್ಲಿ ಮಕ್ಕಳು ಶಾಲೆಗೆ ಕಾಲಿರಿಸುವ ಮೊದಲಿನ 2-7 ವಯಸ್ಸಿನ ಅವಧಿಯ ಕಲಿಕೆಗೆ ಹೆಚ್ಚಿನ ಸಂಪನ್ಮೂಲ ಕೊಡಲಾಗುತ್ತದೆ. ಪ್ರೀ-ನರ್ಸರಿ ಹಂತದಲ್ಲಿ ಆಟವಾಡುತ್ತ ಕಲಿಯುವ ಮಕ್ಕಳಲ್ಲಿ ಯಾವ ಮಗುವಿಗೆ ವಿಶೇಷ ಗಮನ ಬೇಕು ಅನ್ನುವುದನ್ನು ಆರಂಭಿಕ ಹಂತದಲ್ಲೇ ಕಂಡುಕೊಂಡು, ಮಕ್ಕಳ ಕಲಿಕೆಯ ಸವಾಲುಗಳನ್ನು ಬಗೆಹರಿಸುವ ಮೂಲಕ ಹಿರಿಯ ಪ್ರಾಥಮಿಕ ಹಂತಕ್ಕೆ ಬರುವ ಹೊತ್ತಿಗೆ ಹೆಚ್ಚಿನ ಮಕ್ಕಳು ಕಲಿಕೆಯ ಒಂದೇ ಮಟ್ಟದಲ್ಲಿ ಇರುವಂತೆ ನೋಡಿಕೊಳ್ಳುವ ಏರ್ಪಾಡು ಅಲ್ಲಿದೆ. ಆಮೇಲೆ ಸರಿಪಡಿಸುವುದಕ್ಕಿಂತ ಮೊದಲೇ ತಡೆಗಟ್ಟುವುದು ಮೇಲು ಅನ್ನುವ ನಂಬಿಕೆ ಇದರ ಹಿಂದಿದೆ.

●ಶಾಲೆಗೆ ಮಕ್ಕಳು ಸಜ್ಜಾಗುವುದಲ್ಲ, ಮಕ್ಕಳಿಗಾಗಿ ಶಾಲೆ ಸಜ್ಜಾಗಬೇಕು: ಒಂದು ಶಿಷ್ಟ ವ್ಯವಸ್ಥೆಯನ್ನು ಕಟ್ಟಿ, ಎಲ್ಲ ಮಕ್ಕಳು ಒಂದೇ ರೀತಿ, ಒಂದೇ ಬಗೆಯ ವಿಷಯಗಳನ್ನು ಕಲಿಯಬೇಕು ಅನ್ನುವ ವ್ಯವಸ್ಥೆಯ ಬದಲಿಗೆ ದೇಶದ ಮಟ್ಟದಲ್ಲಿ ಒಂದು ಕಲಿಕೆಯ ಚೌಕಟ್ಟನ್ನು ಕಂಡುಕೊಂಡು, ಅದರಡಿ ಪ್ರತಿಯೊಂದು ಮಗುವಿನ ಅಗತ್ಯಕ್ಕೂ ತಕ್ಕಂತೆ ತಮ್ಮದೇ ಪಠ್ಯಕ್ರಮ ರೂಪಿಸಿಕೊಳ್ಳುವಷ್ಟು ಸ್ವಾಯತ್ತೆಯನ್ನು ಶಿಕ್ಷಕರಿಗೆ ನೀಡುವ ವಿಕೇಂದ್ರೀಕೃತ ವ್ಯವಸ್ಥೆ ಇಲ್ಲಿದೆ. ಪರೀಕ್ಷೆಗಳಲ್ಲಿ ಶಾಲೆಯ ಸಾಧನೆ ಆಧರಿಸಿದ ಹೊಣೆಗಾರಿಕೆಯ ಬದಲು, ಶಿಕ್ಷಕರ ಮೇಲೆ ನಂಬಿಕೆಯನ್ನಿರಿಸುವ ಹೊಣೆಗಾರಿಕೆಯ ವ್ಯವಸ್ಥೆ ಇಲ್ಲಿದೆ. ಮಕ್ಕಳನ್ನು ಪರೀಕ್ಷೆಯ ಕುಲುಮೆಯಲ್ಲಿ ಸದಾ ಬೇಯಿಸುವ ಬದಲಿಗೆ ಶಿಕ್ಷಕರ ಆಯ್ಕೆ ಮತ್ತು ತರಬೇತಿಗೆ ಅತ್ಯಂತ ಕಠಿಣ ಕಟ್ಟಲೆಯ ಏರ್ಪಾಡು ಇದೆ. ಪ್ರಪಂಚದಲ್ಲೇ ಅತ್ಯಂತ ಹೆಚ್ಚು ಸಂಬಳ ಇಲ್ಲಿನ ಶಿಕ್ಷಕರಿಗಿದೆ. ಸಹಜವಾಗಿಯೇ ಶಾಲೆ ಮತ್ತು ಮಕ್ಕಳನ್ನು ಅತಿಯಾಗಿ ಪ್ರೀತಿಸುವ ಸಮರ್ಥ ಶಿಕ್ಷಕರ ಪಡೆಯೊಂದನ್ನು ಕಟ್ಟಿಕೊಳ್ಳುವಲ್ಲಿ ಫಿನ್‌ಲ್ಯಾಂಡ್ ಯಶಸ್ವಿಯಾಗಿದೆ. ಶಿಕ್ಷಕರ ಬಗ್ಗೆ ಅಪಾರವಾದ ಗೌರವ ಮತ್ತು ನಂಬಿಕೆ ಫಿನ್ನಿಶ್ ಸಮಾಜದಲ್ಲಿದೆ.

●ಆಯ್ಕೆಯ ಬದಲು ಸಮಾನ ಅವಕಾಶ: ಯಾವ ದೇಶ ಶಿಕ್ಷಣವನ್ನು ಸ್ಪರ್ಧೆಯನ್ನಾಗಿ ನೋಡುತ್ತದೋ ಅಲ್ಲೆಲ್ಲ ಸಹಜವಾಗಿಯೇ ಗುಣಮಟ್ಟದ ಹೆಸರಿನಲ್ಲಿ ಶಿಕ್ಷಣ ವ್ಯವಸ್ಥೆಯಲ್ಲಿ ಹಲವು ಪದರಗಳನ್ನು ಕಾಣಬಹುದು. ಭಾರತದಲ್ಲಿ ಸಿಬಿಎಸ್‌ಇ, ಐಸಿಎಸ್‌ಇ, ರಾಜ್ಯ ಪಠ್ಯಕ್ರಮ ಹೀಗೆ ಹಲವು ಪದರಗಳು ಆಯ್ಕೆಯಂತೆ ಕಂಡರೂ ಆಳದಲ್ಲಿ ಅವೆಲ್ಲವೂ ಶಿಕ್ಷಣದಲ್ಲಿ ತಾರತಮ್ಯದ ಬೇರೆ ಬೇರೆ ಪದರಗಳನ್ನು ಕಟ್ಟಿವೆ. ಫಿನ್‌ಲ್ಯಾಂಡಿನಲ್ಲಿ ಪ್ರಾಥಮಿಕ ಹಂತದಲ್ಲಿ ಹೆಚ್ಚಿನ ಆಯ್ಕೆಗಳಿಲ್ಲ. ಬಹುತೇಕ ಮಕ್ಕಳು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಲ್ಲೇ ತಮ್ಮ ಕಲಿಕೆ ಪಡೆಯುತ್ತವೆ. ಆದರೆ ಶಾಲೆಯ ಒಳಗೆ ಏನು ಕಲಿಯಬೇಕು ಅನ್ನುವುದರಲ್ಲಿ ಮಕ್ಕಳಿಗೆ ಹಲವು ಆಯ್ಕೆಗಳಿವೆ! ಕಲಿಕೆಯಲ್ಲಿ ಅಸಮಾನತೆ ಇದ್ದಷ್ಟೂ ಸಮಾಜದಲ್ಲೂ ಅಸಮಾನತೆ ಇರುತ್ತದೆ ಮತ್ತು ಅಂತಹ ಸಮಾಜ ಎಂದಿಗೂ ಒಂದುಗೂಡಿ ಏಳಿಗೆ ಹೊಂದುವುದಿಲ್ಲ ಅನ್ನುವ ನಂಬಿಕೆ ಇಲ್ಲಿದೆ.

●ಲಿಂಗ ಸಮಾನತೆ ಮತ್ತು ಮಕ್ಕಳಸ್ನೇಹಿ ನೀತಿ: ದೇಶದ ಏಳಿಗೆಯಲ್ಲಿ ಹೆಣ್ಣುಮಕ್ಕಳ ಕೊಡುಗೆಯೂ ಸರಿಸಮಾನವಾಗಿ ಬರಬೇಕೆಂದರೆ ಶಿಕ್ಷಣದ ನೀತಿಯಲ್ಲಿ ಲಿಂಗಸಮಾನತೆಗೆ ಬದ್ಧತೆ ಇರಬೇಕು ಮತ್ತು ಇಂತಹ ಬದ್ಧತೆ ಶಾಲೆಯಲ್ಲಿದ್ದರೆ ಅದು ಮುಂದೆ ಸಮಾಜದಲ್ಲೂ ಕಾಣುತ್ತದೆ ಅನ್ನುವ ನಂಬಿಕೆ ಇದೆ. ಶಾಲೆಯ ಎಲ್ಲ ಮಕ್ಕಳಿಗೂ ಉಚಿತ ಬಿಸಿಯೂಟದ ವ್ಯವಸ್ಥೆ ಇದೆ.

ಫಿನ್‌ಲ್ಯಾಂಡಿನಂತಹ ಸಣ್ಣ ದೇಶದಲ್ಲಿ ಇದೆಲ್ಲ ಸಾಧ್ಯವಾಗಬಹುದು, ಇತರೆಡೆ ಕಷ್ಟ ಅನ್ನುವ ಅಭಿಪ್ರಾಯ ಯಾರಲ್ಲಾದರೂ ಇದ್ದರೆ ಅದಕ್ಕೆ ಸ್ಯಾಲ್‌ಬರ್ಗ್ ಅವರಲ್ಲಿ ಉತ್ತರವಿದೆ. ಅವರ ಪ್ರಕಾರ, ಶಿಕ್ಷಕರು, ಶಾಲೆ ಮತ್ತು ಮಕ್ಕಳ ಅಗತ್ಯವನ್ನು ಅರ್ಥ ಮಾಡಿಕೊಳ್ಳುವುದು ಒಂದು ವಿಜ್ಞಾನ. ಅದನ್ನು ಅರಿತು ನೀತಿಗಳನ್ನು ರೂಪಿಸಿಕೊಂಡರೆ ಎಂತಹ ದೊಡ್ಡ ದೇಶದಲ್ಲೂ ಶಿಕ್ಷಣದ ಕ್ರಾಂತಿಯನ್ನು ಮಾಡಬಹುದು. ಅಲ್ಲಿ ನಡೆಸಲಾದ ಸರ್ವೆಯೊಂದರ ಪ್ರಕಾರ, ಸ್ವಾತಂತ್ರ್ಯ ಪಡೆದ ನೂರು ವರ್ಷಗಳಲ್ಲಿ ಶಿಕ್ಷಣದಲ್ಲಿ ಫಿನ್‌ಲ್ಯಾಂಡ್ ಮಾಡಿರುವ ಸಾಧನೆ ಎಲ್ಲಕ್ಕೂ ಮಿಗಿಲಾದದ್ದು ಅನ್ನುವ ಅಭಿಪ್ರಾಯವನ್ನು ಶೇ 75ರಷ್ಟು ಫಿನ್ನಿಶ್ ಜನರು ಹೊಂದಿದ್ದಾರೆ. ನಮ್ಮ ದೇಶದಲ್ಲಿ ಸಾರ್ವಜನಿಕ ಶಿಕ್ಷಣದ ಬಗ್ಗೆ ಜನರಿಗಿರುವ ಅನಿಸಿಕೆ ಇದಕ್ಕೆ ಎಷ್ಟು ತದ್ವಿರುದ್ಧವಾಗಿದೆ!

ಹೊಸ ಶಿಕ್ಷಣ ನೀತಿ ಜಾರಿಗೆ ಬರುತ್ತಿರುವ ಈ ಹೊತ್ತಿನಲ್ಲಿ, ಫಿನ್‌ಲ್ಯಾಂಡಿನ ಅನುಭವಗಳನ್ನು ತಿಳಿಯುವ ಮನಸ್ಸನ್ನು ನಮ್ಮನ್ನಾಳುವವರು ಮಾಡಿಯಾರೇ?

ಚುರುಮುರಿ

'ಓ ಮೈ ಗಾಡ್'

• ಸುಮಂಗಲಾ

'ನಾ ಪೇಮೆಂಟ್ ಸೀಟ್ ತಗೊತೀನಿ, ರೊಕ್ಕ ಹೊಂದಿಸಿ ಇಡು. ಈ ಸಲ ನಾ ಬಿಡಂಗಿಲ್ಲ' ಬೆಕ್ಕಣ್ಣ ಬಲು ಗಂಭೀರವಾಗಿ ಹೇಳಿತು.

'ನೀ ಪೇಮೆಂಟ್ ಸೀಟ್ ಅಂತ ಸುಮ್ನೆ ವರಾತ ಹಚ್ಚಬ್ಯಾಡ. ಸಿಇಟಿ, ನೀಟ್ ಅಂತೆಲ್ಲ ಎಂಟ್ರೆನ್ಸ್ ಎಕ್ಸಾಂ ಇರತಾವಲ್ಲ, ಅವನ್ನು ಓದಿ ಛಲೋ ರ‍್ಯಾಂಕ್ ತಗಂಡು ಗೌರ್ಮೆಂಟ್ ಕಾಲೇಜಿನಾಗೆ ಸೀಟ್ ತಗೊ. ಫೀ ಬೇಕಿದ್ರೆ ತುಂಬತೀನಿ' ಎಂದೆ.

ಬೆಕ್ಕಣ್ಣ ಪಕ್ಕೆ ಹಿಡಿದುಕೊಂಡು ಪಕಪಕನೆ ನಕ್ಕಿತು.

'ಆ ಪೇಮೆಂಟ್ ಸೀಟಲ್ಲ. ಯತ್ನಾಳ ಮಾಮಾ ಹೇಳ್ಯಾನ... 2,500 ಕೋಟಿ ರೊಕ್ಕಕ್ಕೆ ಸಿಎಂ ಸೀಟು, 100 ಕೋಟಿಗೆ ಮಂತ್ರಿ ಸೀಟು ಸಿಗತೈತಿ ಅಂತ' ಮೆತ್ತಗೆ ಉಲಿಯಿತು.

'2500 ಕೋಟಿ ಅಂದರೆ ಇಪ್ಪತ್ತೈದರ ಮುಂದೆ ಎಷ್ಟ್ ಸೊನ್ನೆ ಬರತಾವು ಅಂತ ಮೊದ್ಲು ಲೆಕ್ಕ ಮಾಡೂದು ಕಲಿ' ಎಂದು ನಾನು ಬೈದರೆ ಈ ಕಿವಿಯಲ್ಲಿ ಕೇಳಿ ಆ ಕಿವಿಯಲ್ಲಿ ಬಿಟ್ಟು, 'ಹೋಗ್ಲಿ... ಪಿಎಸ್‌ಐ ಹುದ್ದೆ ಅಥವಾ ಸಹಪ್ರಾಧ್ಯಾಪಕರ ಹುದ್ದೆ, ಹಿಂಗೆ ಯಾವ್ದಾರ ಪೇಮೆಂಟ್ ಸೀಟಾರೂ ತಗತೀನಿ. ಇವಕ್ಕ ಅಷ್ಟು ಕೋಟಿಗಟ್ಟಲೆ ಬ್ಯಾಡ, ಲಕ್ಷಗಟ್ಟಲೆ ರೊಕ್ಕ ಸಾಕು' ಎಂದು ವಿವಿಧ ಸರ್ಕಾರಿ ಹುದ್ದೆಗಳ ಲಂಚದ ದರಪಟ್ಟಿ ತೋರಿಸಿತು.

'ನಿಮ್ಮ ಮೋದಿಮಾಮಾರು ನಾ ಖಾವೂಂಗಾ, ನಾ ಖಾನೆದೂಂಗ ಅಂದಿದ್ದರು. ಇಲ್ಲಿ ನೋಡಿದರೆ ಪೇಮೆಂಟು ಸೀಟು, ನಲ್ವತ್ತು ಪರ್ಸೆಂಟು ಹರಾಜು ಆಟ ನಡದೈತಿ. ಮೋದಿಮಾಮಾಗೆ ಕೇಳೋಗು'.

'ಮೋದಿಮಾಮಾ ಬೆಳಗ್ಗೆ ಯೋಗ ಮುಗಿಸಿ ಬರಾಕೆ ಹತ್ತಿದ್ದರು, ಸಟಕ್ಕನೆ ಅವರ ಗಾರ್ಡುಗಳ ಕಣ್ಣು ತಪ್ಪಿಸಿ, ಎದುರು ನಿಂತು ಕೇಳೇಬಿಟ್ಟೆ'.

'ಏನಂದ್ರು ಮೋದಿಮಾಮಾರು?'

'ನಾ ಹಂಗ ಥಟ್ ಅಂತ ಎದುರು ನಿಂತು, ಕರುನಾಡಿನ ಸರ್ಕಾರಿ ಹುದ್ದೆಗಳ ಹರಾಜು ದರಪಟ್ಟಿ ತೋರಿಸಿ, ಫಟಾಫಟ್ ಪ್ರಶ್ನೆ ಕೇಳಿದ್ದೇ ಮೋದಿಮಾಮಾ ಗಾಬರಿಯಾಗಿ 'ಓ ಮೈ ಗಾಡ್!' ಅಂದ್ರು' ಬೆಕ್ಕಣ್ಣ ಕಿಸಕ್ಕನೆ ನಕ್ಕಿತು.

ಸಂಗತ

ಎರಡನೇ ಬಾಲ್ಯಾವಸ್ಥೆ: ಬೇಕು ಆಸ್ಥೆ

ಇನ್ನೊಬ್ಬರ ಹಂಗಿಲ್ಲದೆ ಜೀವನದ ಕೊನೆಯ ದಿನಗಳನ್ನು ಗೌರವಯುತವಾಗಿ ಹೇಗೆ ಕಳೆಯಬಹುದೆನ್ನುವ ಪೂರ್ವಯೋಜಿತ ಸ್ವಚಿಂತನೆಯನ್ನು ಪ್ರತಿಯೊಬ್ಬರೂ ಮಾಡಬೇಕಿದೆ

• ಡಾ. ಜ್ಯೋತಿ

ವೃದ್ಧಾಪ್ಯವು ಮನುಷ್ಯನ ಸಹಜವಾದ, ಆದರೆ ಸುಲಭವಾಗಿ ಒಪ್ಪಿಕೊಳ್ಳಲಾಗದ ಸ್ಥಿತಿ. ಇದನ್ನು ಸಂತೋಷವಾಗಿ ಸ್ವೀಕರಿಸಲು ಮನಸ್ಸಿಗೆ ಕಷ್ಟ. ಯಾಕೆಂದರೆ, ಅಲ್ಲಿಯವರೆಗೆ, ಆಕಸ್ಮಿಕ ಸಾವನ್ನು ಮೀರಿದವರು ಕೂಡ ಇಲ್ಲಿ ಸಹಜ ಸಾವಿನ ಸಾಮೀಪ್ಯದಲ್ಲಿ ಇರುವುದರಿಂದ, ಮಾನಸಿಕ ತಳಮಳ ಸ್ವಾಭಾವಿಕ. ಈ ಸ್ಥಿತಿಯಲ್ಲಿ ಮನುಷ್ಯ ತನ್ನ ದೈಹಿಕ ಮಾರ್ಪಾಡುಗಳೊಂದಿಗೆ ಮಾನಸಿಕ ಒತ್ತಡವನ್ನೂ ಅನುಭವಿಸುತ್ತಿರುತ್ತಾನೆ.

ಇಲ್ಲಿನ ಸಮಸ್ಯೆಗಳು ಹಲವಾರು. ದುರ್ಬಲವಾಗುತ್ತಿರುವ ದೇಹ, ಕಳೆದುಹೋಗುತ್ತಿರುವ ಅಧಿಕಾರ, ಒಮ್ಮೆಲೇ ಸಿಕ್ಕಿರುವ ಬಹಳಷ್ಟು ಉಚಿತ ಸಮಯ, ಕಾಡುವ ಒಂಟಿತನ, ಸಮವಯಸ್ಕರ ಸಾವು, ಆರ್ಥಿಕ ಅಭದ್ರತೆ, ಸಾವಿನ ಭಯ, ಪ್ರೀತಿಪಾತ್ರರಿಂದಲೇ ಕೇಳಿಸಿಕೊಳ್ಳಬೇಕಾದ ಹಂಗಿನ ಮಾತು, ಜೀವನದಲ್ಲಿ ಸಾಧಿಸಲಾಗದ, ಮಾಡಲಾಗದ ವಿಷಯಗಳ ಕುರಿತು ನಿಟ್ಟುಸಿರು...

'ಏಜ್ ವೆಲ್' ಸಂಸ್ಥೆಯ ಅಧ್ಯಯನ ವರದಿಯೊಂದರ ಪ್ರಕಾರ, ದೇಶದ ವೃದ್ಧರಲ್ಲಿ ಶೇ 65ರಷ್ಟು ಮಂದಿ ಯಾವುದೇ ಆದಾಯವಿಲ್ಲದೆ ಅನ್ಯರ ಮೇಲೆ ಅವಲಂಬಿತರಾಗಿದ್ದಾರೆ. ಉಳಿದವರು, ಆರ್ಥಿಕವಾಗಿ ಸಬಲರಾಗಿದ್ದರೂ ನೆಮ್ಮದಿಯ ಜೀವನ ನಡೆಸುತ್ತಿಲ್ಲ. ವಿಶೇಷವೆಂದರೆ, ಗಂಡಸರಿಗೆ ಹೋಲಿಸಿದರೆ, ಹೆಂಗಸರು ದೀರ್ಘ ಜೀವಿತಾವಧಿ ಮತ್ತು ಆರ್ಥಿಕ ಅಭದ್ರತೆಯಿಂದಾಗಿ ವೃದ್ಧಾಪ್ಯದಲ್ಲಿ ಹೆಚ್ಚು ತೊಂದರೆ ಅನುಭವಿಸುತ್ತಾರೆ. ವಿವಿಧ ಜನಸಂಖ್ಯಾ ಸಮೀಕ್ಷೆಗಳು ಹೇಳುವಂತೆ, ಮುಂದಿನ ವರ್ಷಗಳಲ್ಲಿ ಭಾರತದಲ್ಲಿ ವೃದ್ಧರ ಸಂಖ್ಯೆ ತೀವ್ರವಾಗಿ ಹೆಚ್ಚಲಿದ್ದು, ಇದೊಂದು ಬೃಹತ್ ಸಾಮಾಜಿಕ ಸಮಸ್ಯೆಯಾಗಬಹುದು. ಈ ದಿಸೆಯಲ್ಲಿ, ವೃದ್ಧಾಪ್ಯದ ದಿನಗಳನ್ನು ಸಹನೀಯವಾಗಿಸುವ ಕುರಿತು ನಾಗರಿಕ ಜವಾಬ್ದಾರಿಯಿರುವ ಸಮಾಜ ಗಂಭೀರ ಚಿಂತನೆ ನಡೆಸಬೇಕಾದ ಅನಿವಾರ್ಯ ಇದೆ.

ಇತ್ತೀಚಿನ ವರ್ಷಗಳಲ್ಲಿ, ವೃದ್ಧರು ಹೆಚ್ಚಾಗಿ ಒಂಟಿಯಾಗಿ ಬದುಕುವುದನ್ನು ನೋಡುತ್ತೇವೆ. ಕೆಲವರಲ್ಲಿ, ಇದು ಅವರ ಸ್ವಾಭಿಮಾನದ ಪ್ರಶ್ನೆಯಿರಬಹುದು. 'ನಾವ್ಯಾಕೆ ಮಕ್ಕಳ ಮನೆಯಲ್ಲಿ ಅವರ ಹಂಗಿನಲ್ಲಿ ಇರಬೇಕು? ಬೇಕಿದ್ದರೆ ಅವರೇ ಬಂದು ನಮ್ಮೊಂದಿಗಿದ್ದು ನೋಡಿಕೊಳ್ಳಲಿ' ಎನ್ನುವ ಮನೋಭಾವ ಇರಬಹುದು. ಇನ್ನು ಕೆಲವರು ಜೀವನವಿಡೀ ದುಡಿದದ್ದನ್ನು ಮಕ್ಕಳ ವಿದ್ಯಾಭ್ಯಾಸ ಮತ್ತು ಆಸ್ತಿಪಾಸ್ತಿಗೆಂದು ಖರ್ಚು ಮಾಡಿ, ವೃದ್ಧಾಪ್ಯದಲ್ಲಿ ಕೈ ಖಾಲಿ ಮಾಡಿಕೊಂಡು ಮುದ್ದು ಮಕ್ಕಳ ಕೃಪಾಕಟಾಕ್ಷದಲ್ಲಿ ಬದುಕುವವರು. ಉಳಿದವರು, ತಮ್ಮ ಮಕ್ಕಳಿಗಾಗಿ ಏನೂ ಮಾಡಲಾಗದೆ ಅಸಹಾಯಕರಾಗಿಯೇ ಬದುಕಿ, ಜೀವನದ ಕೊನೆಯ ದಿನಗಳಲ್ಲಿ ನೆಲೆಗಾಗಿ ಹುಡುಕುವವರು. ಇದಕ್ಕೆ ಒಂದು ಪರಿಹಾರವೆಂದರೆ, ಪಾಶ್ಚಾತ್ಯ ಸಂಸ್ಕೃತಿಯ ಬಳುವಳಿಯೆಂದು ಕರೆಯಲಾಗುವ ವೃದ್ಧಾಶ್ರಮ. ಭಾರತದಲ್ಲಿ ಕೂಡ ಈಗ ಬಹಳಷ್ಟು ವೃದ್ಧಾಶ್ರಮಗಳಿದ್ದರೂ ನಮ್ಮಲ್ಲಿ ವೃದ್ಧಾಶ್ರಮ ಸೇರುವುದೆಂದರೆ ಅತ್ಯಂತ ದೌರ್ಭಾಗ್ಯವೆನ್ನುವ ಅಭಿಪ್ರಾಯವಿದೆ. ಹಾಗಾಗಿ, ಹೋಗಬೇಕಾದ ಅನಿವಾರ್ಯ ಇರುವವರಿಗೆ, ಕಳುಹಿಸಲು ಇಚ್ಛಿಸುವ ಸಂಬಂಧಿಕರಿಗೆ ಇದು ಮುಜುಗರದ ಅಥವಾ ಅಸಹಾಯಕ ಸ್ಥಿತಿ ಎನ್ನುವಂತೆ ಬಿಂಬಿತವಾಗಿದೆ.

ಅಧಿಕಾರ ಮತ್ತು ಆರ್ಥಿಕ ಬಲವಿದ್ದ ಮನುಷ್ಯನ ಮಾತನ್ನು ಸಾಮಾನ್ಯವಾಗಿ ಎಲ್ಲರೂ ಅನಿವಾರ್ಯ ಎಂಬಂತೆ ಕೇಳುತ್ತಾರೆ. ಆದರೆ, ವೃದ್ಧಾಪ್ಯದಲ್ಲಿ ಅವೆಲ್ಲವನ್ನೂ ಕಳೆದುಕೊಂಡು ಬಲಹೀನವಾಗಿ ಕಾಣುವಾಗ, ಮನೆಮಂದಿಯ ಚುಚ್ಚುಮಾತುಗಳು ಮನಸ್ಸನ್ನು ಗಾಸಿಗೊಳಿಸುತ್ತವೆ. ಅಲ್ಲದೆ, ಒಂಟಿ ವೃದ್ಧರ ಮರುಮದುವೆಯ ವಿಚಾರದಲ್ಲಿ ನಮ್ಮ ಸಮಾಜ ಇನ್ನೂ ಮುಕ್ತವಾಗಿ ತೆರೆದುಕೊಂಡಿಲ್ಲ. ಬದಲಾಗಿ, ಅಪಹಾಸ್ಯಕ್ಕೆ ಈಡುಮಾಡುತ್ತದೆ. ಇದಕ್ಕಾಗಿ, ಮನುಷ್ಯ ತನ್ನ ವೃದ್ಧಾಪ್ಯವನ್ನು ಸ್ವಾಭಿಮಾನದಿಂದ ಕಳೆಯುವ ಯೋಜನೆಯನ್ನು ಬಹಳಷ್ಟು ಮುಂಚಿತವಾಗಿಯೇ ರೂಪಿಸುವ ಅವಶ್ಯಕತೆಯಿದೆ.



ಮೊದಲನೆಯದಾಗಿ, ವೃದ್ಧಾಶ್ರಮವನ್ನು ಸಂಪ್ರದಾಯಸ್ಥ ಮನಸ್ಸುಗಳು ಒಪ್ಪದಿರಬಹುದು. ಆದರೆ, ಮಕ್ಕಳು ಪಕ್ಕಾ ವ್ಯವಹಾರಸ್ಥರಾಗಿ ಮಾರ್ಪಟ್ಟರೆ, ಬದುಕುವ ಪರ್ಯಾಯ ಮಾರ್ಗ ಬೇಕಲ್ಲವೇ? ವಾಸ್ತವದಲ್ಲಿ, ಎಷ್ಟೊಂದು ವೃದ್ಧ ಮನಸ್ಸುಗಳು ಮನೆಯ ನಾಲ್ಕು ಗೋಡೆಗಳ ಮಧ್ಯೆ ಉಸಿರುಗಟ್ಟಿಸುವ ಮೌನದಲ್ಲಿ ಜೀವ ಸವೆಸುತ್ತಿವೆ ಎನ್ನುವುದನ್ನೂ ಯೋಚಿಸಬೇಕಾಗಿದೆ. ಆದ್ದರಿಂದ, ವೃದ್ಧಾಶ್ರಮಗಳನ್ನು ಒಂದು ಪರ್ಯಾಯ ಆಯ್ಕೆಯನ್ನಾಗಿಸಿ, ಅವುಗಳ ಕಾರ್ಯವೈಖರಿಯ ಕುರಿತು ಸಮಾಜದಲ್ಲಿ ಗುಣಾತ್ಮಕ ಅಭಿಪ್ರಾಯ ಮೂಡಿಸಬೇಕಾಗಿದೆ. ಹೀಗಾದಲ್ಲಿ, ವೃದ್ಧಾಶ್ರಮ ಸೇರುವುದೆಂದರೆ ನಿಕೃಷ್ಟವಾದುದಲ್ಲ, ಬದುಕಿನ ಕೊನೆಯ ದಿನಗಳನ್ನು ಸಮವಯಸ್ಕರೊಂದಿಗೆ ಮಾತುಕತೆಯಾಡುತ್ತಾ, ಸಂತೋಷವಾಗಿ ಕಾಲ ಕಳೆಯುವ ತಾಣವೆನ್ನುವ ಸದಭಿಪ್ರಾಯ ಜನರಲ್ಲಿ ಮೂಡಬಹುದು. ವೃದ್ಧಾಶ್ರಮಗಳಲ್ಲಿಯೂ ಅವ್ಯವಹಾರಗಳು, ಲೋಪದೋಷಗಳು ಇರುವುದನ್ನು ಕಾಣುತ್ತೇವೆ. ಹಾಗಾಗಿ, ಅವುಗಳಿಗೆ ಧನಸಹಾಯ ಮಾಡಿ, ಅವು ಪಾರದರ್ಶಕವಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುವ ಹೊಣೆ ಸಹೃದಯಿಗಳಿಗಿದೆ.

ವೃದ್ಧಾಪ್ಯದಿಂದ ಯಾರೂ ತಪ್ಪಿಸಿಕೊಳ್ಳಲಾಗದು. ಆದ್ದರಿಂದ, ಇದರ ಕುರಿತು ಹೆಚ್ಚು ಸಾರ್ವಜನಿಕ ಚರ್ಚೆಗಳು, ಸಹಾಯಹಸ್ತ ಮತ್ತುವೃದ್ಧರ ಸಮಸ್ಯೆಗಳ ನೈಜ ಅರಿವನ್ನು ಜನಮನದಲ್ಲಿ ಮೂಡಿಸುವ ಅಗತ್ಯವಿದೆ. ಷೇಕ್ಸ್‌ಪಿಯರ್ ಹೇಳಿದಂತೆ, 'ವೃದ್ಧಾಪ್ಯ ಎಂದರೆ ಎರಡನೆಯ ಬಾಲ್ಯಾವಸ್ಥೆ. ಅವು, ಹಲ್ಲು, ದೃಷ್ಟಿ, ಬಾಯಿರುಚಿ ಏನೂ ಇಲ್ಲದ, ಮುಗ್ಧ ಮನಸ್ಸಿನ ದಿನಗಳು'. ಈ ಬಾಲ್ಯಾವಸ್ಥೆಯಲ್ಲಿ ಜನರಿಗೆ ಅವರ ಮೊದಲ ಬಾಲ್ಯಾವಸ್ಥೆಯಂತೆ ಪ್ರೀತಿ ಸಿಗಬೇಕಾದುದು ಸ್ವಸ್ಥ ಸಮಾಜದ ನಾಗರಿಕ ಜವಾಬ್ದಾರಿ.

ವಾಚಕರ ವಾಣಿ

ಎಸ್‌ಎಸ್‌ಎಲ್‌ಸಿ: ಫಲಿತಾಂಶ ಪ್ರಕಟಣೆ ಮುಂದೂಡಿ

ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶವು ಇದೇ 15ನೇ ತಾರೀಖಿನ ಆಸುಪಾಸು ಪ್ರಕಟಗೊಳ್ಳಬಹುದು ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಫಲಿತಾಂಶ ಬಂದ ತಕ್ಷಣ ಪ್ರಥಮ ಪಿಯು ದಾಖಲಾತಿ ಆರಂಭವಾಗಬೇಕು. ಆದರೆ ರಾಜ್ಯದ ಬಹುಪಾಲು ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು 18ರವರೆಗೆ ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆ ನಡೆಸುವುದರಲ್ಲಿ ತೊಡಗಿಕೊಂಡಿರುತ್ತಾರೆ. ಹೀಗಾಗಿ, ಪ್ರಥಮ ಪಿಯು ದಾಖಲಾತಿ ಕೆಲಸಕ್ಕೆ ಅಡ್ಡಿಯಾಗುತ್ತದೆ.

ಅಲ್ಲದೆ, ಪರೀಕ್ಷೆಯ ನಂತರ 15 ದಿನಗಳ ಕಾಲ ಮೌಲ್ಯಮಾಪನ ಕಾರ್ಯ ನಡೆಯುವುದರಿಂದ ಪದವಿಪೂರ್ವ ಕಾಲೇಜುಗಳಲ್ಲಿ ಪ್ರಾಂಶುಪಾಲರಾಗಲಿ, ಉಪನ್ಯಾಸಕರಾಗಲಿ ಇರುವುದಿಲ್ಲ. ಇದು ಎಸ್‌ಎಸ್‌ಎಲ್‌ಸಿ ಪಾಸಾದ ವಿದ್ಯಾರ್ಥಿಗಳು ಮತ್ತು ಪೋಷಕರ ಮೇಲೆ ಅನಗತ್ಯ ಒತ್ತಡ ಸೃಷ್ಟಿಸುತ್ತದೆ. ಆದ್ದರಿಂದ ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟಣೆಯನ್ನು ಪ್ರಥಮ ಪಿಯು ದಾಖಲಾತಿಗೆ ಅನುಕೂಲವಾಗುವಂತೆ ಜೂನ್ ಮೊದಲ ವಾರದಲ್ಲಿ ಪ್ರಕಟಿಸಬೇಕು.

ಗುರುರಾಜ್ ಎಸ್. ದಾವಣಗೆರೆ, ಬೆಂಗಳೂರು

ಬರೀ ಚರ್ಚೆ, ಪರಿಹಾರ ಮರೀಚಿಕೆ

ಇನ್ನೂ ಬೇಸಿಗೆಯೇ ಮುಗಿದಿಲ್ಲ, ಆದರೆ ಬೆಂಗಳೂರಿನಲ್ಲಿ ಈಚೆಗೆ ಸುರಿದ, ಸುರಿಯುತ್ತಿರುವ ಮಳೆಗೆ ಮನೆಗಳೊಳಗೆ ನೀರು ನುಗ್ಗಿ ಅವಾಂತರ ಸೃಷ್ಟಿಯಾಗಿದೆ. ಒಂದೆರಡು ಮಳೆಗೇ ಹೀಗಾದರೆ ಮುಂದಿನ ದಿನಗಳಲ್ಲಿ ಅದೂ ಮಳೆಗಾಲದಲ್ಲಿ ಹೇಗೆ ಎಂಬ ಚಿಂತೆ ಕಾಡದಿರದು. ಈ ಹಿಂದೆ ರಾಜಕೀಯ ಬೆಂಬಲವಿಲ್ಲದ, ಸಾಮಾನ್ಯ ನಾಗರಿಕರ ಮನೆಗಳನ್ನು ರಾಜಕಾಲುವೆಯ ಅತಿಕ್ರಮಣವೆಂದು ಪರಿಗಣಿಸಿ ನಿರ್ದಾಕ್ಷಿಣ್ಯವಾಗಿ ಕೆಡವಿ ಹಾಕಲಾಗಿತ್ತು. ಕೆಲವು ಪ್ರಭಾವಿ ನಾಯಕರು, ಶ್ರೀಮಂತರು, ಚಿತ್ರನಟರ ಮನೆಗಳ ಗೊಡವೆಗೆ ಹೋಗಿರಲಿಲ್ಲ. ಎಂಥದ್ದೇ ಒತ್ತಡ ಬಂದರೂ ಅತಿಕ್ರಮಣವನ್ನು ತೆರವುಗೊಳಿಸಲಾಗುವುದು ಎಂದು ಸಚಿವರು ಹೇಳಿದ್ದರು. ಆದರೆ, ಆಗಿನ ರೋಷಾವೇಶದ ಮಾತುಗಳು ಅಲ್ಲಿಗೇ ನಿಂತು ಹೋದವು. ಮತ್ತೆ ಯಥಾಪ್ರಕಾರ ಅದೇ ಮಳೆ, ಮನೆಗೆ ನೀರು ನುಗ್ಗುವಿಕೆ, ರಾಜಕಾಲುವೆ ಒತ್ತುವರಿ ಕುರಿತ ಚರ್ಚೆ ಮುಂದುವರಿದಿವೆ.

ಅತಿಕ್ರಮಣಕ್ಕೆ ಅವಕಾಶ ಮಾಡಿಕೊಟ್ಟ ಅಧಿಕಾರಿಗಳ ತಪ್ಪೋ ಮನೆ ಕಟ್ಟಿಕೊಂಡಿರುವ ನಿವಾಸಿಗಳ ತಪ್ಪೋ ಸಂಕಷ್ಟವಂತೂ ತಪ್ಪಿಲ್ಲ. ಪರಿಹಾರ ಮಾತ್ರ ಮರೀಚಿಕೆಯಾಗಿದೆ! ಭವಿಷ್ಯದ ಸಮಸ್ಯೆಗಳ ಅರಿವಿರುವವರು ಯಾರೂ ರಾಜಕಾಲುವೆ, ಕೆರೆ ಅಂಗಳ ಇತ್ಯಾದಿಗಳನ್ನು ಅತಿಕ್ರಮಿಸಿ ಮನೆಗಳನ್ನು ಕಟ್ಟಬಾರದು, ಸರ್ಕಾರವೂ ಅದಕ್ಕೆ ಅವಕಾಶ ಕೊಡಬಾರದು.

ಡಾ. ಚನ್ನು ಅ. ಹಿರೇಮಠ, ರಾಣೆಬೆನ್ನೂರು

ಕೋವಿಡ್ ಅಂಕಿ– ಅಂಶ: ಪ್ರತಿಷ್ಠೆಯ ಪ್ರಶ್ನೆಯೇ?

ಕೋವಿಡ್ ಸಾವಿನ ಸಂಖ್ಯೆ ಸಂಬಂಧದಲ್ಲಿ ಭಾರತ ಸರ್ಕಾರವು ವಿಶ್ವ ಆರೋಗ್ಯ ಸಂಸ್ಥೆಯ ವಿಧಾನಗಳನ್ನು ಪ್ರಶ್ನಿಸಿರುವುದು ostrich effect/ problem ಎಂಬ ಮನೋವೈಜ್ಞಾನಿಕ ತತ್ವವನ್ನು ನೆನಪಿಸುತ್ತದೆ. ಉಷ್ಟ್ರಪಕ್ಷಿಗಳು ತಲೆಯನ್ನು ಉಸುಕಿನಲ್ಲಿ ಹುದುಗಿಸುವುದಿಲ್ಲ, ನಿಜ. ಆದರೆ ಗಂಡು ಪಕ್ಷಿಗಳು ತಮ್ಮ ಪ್ರದೇಶವನ್ನು ಆಕ್ರಾಮಕ ಶೈಲಿಯಲ್ಲಿ ರಕ್ಷಿಸಲು ಯತ್ನಿಸುತ್ತವೆ. ನಕಾರಾತ್ಮಕ ಮಾಹಿತಿಯನ್ನು ತಳ್ಳಿಹಾಕುವುದು (ಫೀಡ್‌ಬ್ಯಾಕ್ ಕೂಡಾ ಅಪಥ್ಯ!) ಕೆಲವರ ರೆಗ್ಯುಲರ್ ವರಸೆ.

ಡಬ್ಲ್ಯುಎಚ್‌ಒ ಹೇಳುವಂತೆ, ಭಾರತದಲ್ಲಿ ಅಧಿಕೃತ ಅಂಕಿಸಂಖ್ಯೆಗಿಂತ ಹತ್ತು ಪಟ್ಟು ಹೆಚ್ಚು ಸಾವುಗಳು ಸಂಭವಿಸದಿರಬಹುದು, ಆದರೆ ನಮ್ಮಲ್ಲಿ ಸಾವಿನ ದಾಖಲೀಕರಣವು ಶೇ 99.9ರಷ್ಟು ಇದೆ ಎನ್ನುವುದು ಉತ್ಪ್ರೇಕ್ಷಿತ ವಾದ. ತಾವು ದೇಶಪ್ರೇಮಿಗಳು ಎಂದು ತೋರಿಸಿಕೊಳ್ಳಬಯಸಿರುವ ಇಬ್ಬರು ಸಹ ಶೇ 10- 20 ಹೆಚ್ಚು ಇದ್ದೀತು ಎಂದಿರುವುದು ಗಮನಾರ್ಹ. ಸಂಗ್ರಹ ವಿಧಾನ ಹಾಗೂ ಮಾಡೆಲಿಂಗ್ ಕುರಿತು ಗೊತ್ತಿಲ್ಲದಿರುವವರೂ ಹದಿನಾರು ರಾಜ್ಯಗಳು ಕೋವಿಡ್ ಅವಧಿಯಲ್ಲಿ 'ಎಲ್ಲ ಮಾಹಿತಿ ಸಿಕ್ಕಿಲ್ಲ' ಎಂದು ಒಪ್ಪಿಕೊಂಡಿರುವುದನ್ನು ಪರಿಗಣಿಸಬೇಕಾಗುತ್ತದೆ. ಒಂದು ಸರ್ಕಾರಿ ಮೂಲವೇ (ಎನ್‌ಎಫ್‌ಎಚ್ ಸರ್ವೆ) ಶೇ 71 ನಿಖರ ಎಂದಿದೆ. ಭಾರತ ಇದನ್ನು ಪ್ರತಿಷ್ಠೆಯ ಪ್ರಶ್ನೆ ಮಾಡಬೇಕೇ?

ಕೆಲವು ಅಂಕಿಅಂಶಗಳನ್ನು ಉಲ್ಲೇಖಿಸಿ 'ದೇಶ ಕೋವಿಡ್ ಮಹಾಮಾರಿಯ ದುಷ್ಪರಿಣಾಮಗಳಿಂದ ಚೇತರಿಸಿಕೊಂಡಿದೆ' ಎಂದು ಪ್ರತಿಪಾದಿಸುವುದೂ ಶುರುವಾಗಿದೆ. ಅದೂ ಆತುರದ, ಅಪಕ್ವ ಮಾತು.

ಎಚ್‌.ಎಸ್‌.ಮಂಜುನಾಥ, ಗೌರಿಬಿದನೂರು

ಮಾನಸಿಕ ಆರೋಗ್ಯ ಬಲಿಯಾಗದಿರಲಿ

ಶಬ್ದಮಾಲಿನ್ಯ ಇಂದು ಒಂದು ಗಂಭೀರ ಸಮಸ್ಯೆಯಾಗಿದೆ. ಅಲ್ಲದೆ ಜನರ ಮಾನಸಿಕ ಆರೋಗ್ಯಕ್ಕೆ ಬೆದರಿಕೆಯಾಗಿದೆ. ಶಬ್ದವು ಆರೋಗ್ಯಕ್ಕೆ ಮಾರಕವಾಗಿರುವಂತಿದ್ದರೆ ಯಾವುದೇ ರೂಪದಲ್ಲಿರಲಿ, ಯಾರೇ ಉಂಟು ಮಾಡಲಿ ಅದನ್ನು ನಿಲ್ಲಿಸಲು ಕಾನೂನು ಕ್ರಮ ತೆಗೆದುಕೊಳ್ಳಲಿ. ಬೆಳ್ಳಂಬೆಳಿಗ್ಗೆಯೇ ವಿಪರೀತ ಶಬ್ದ ಕೇಳಿಕೊಂಡು ನಿದ್ರೆಯಿಂದ ಎಚ್ಚರವಾಗುವುದು ಆರೋಗ್ಯಕ್ಕೆ ಹಾನಿಕರ. ಇದು ವೈಜ್ಞಾನಿಕವಾಗಿ ಸಾಬೀತಾಗಿದೆ.

ವೃದ್ಧರ ಆರೋಗ್ಯಕ್ಕೆ ಇನ್ನಷ್ಟು ತೊಂದರೆ ಉಂಟುಮಾಡುತ್ತದೆ. ಅಲ್ಲದೆ ಚಿಕ್ಕ ಮಕ್ಕಳ ಮೆದುಳಿನ ಬೆಳವಣಿಗೆಯ ಮೇಲೆ ಈ ರೀತಿಯ ಶಬ್ದ ತುಂಬಾ ಗಂಭೀರ ಪರಿಣಾಮ ಬೀರುತ್ತದೆ ಎಂಬುದೂ ವೈಜ್ಞಾನಿಕವಾಗಿ ಸಾಬೀತಾಗಿರುವ ವಿಚಾರ.

ಮುಂಜಾನೆ ಐದು ಅಥವಾ ಆರು ಗಂಟೆಗೆ ಮತ್ತು ರಾತ್ರಿ ಜನರು ಮಲಗುವ ಹೊತ್ತಿನಲ್ಲಿ ಮೈಕು ಹಾಕಿಕೊಂಡು ನಿಶ್ಶಬ್ದದ ವಾತಾವರಣ ಹಾಳುಮಾಡುವ ಕೆಲಸವನ್ನು ಯಾರೇ ಮಾಡಿದರೂ ಅದು ಅಕ್ಷಮ್ಯ ಮತ್ತು ಶಿಕ್ಷಾರ್ಹ. ಅದನ್ನು ಬಿಟ್ಟು 'ನೀವು ಮಾಡಿದರೆ ನಾವೂ ಮಾಡುತ್ತೇವೆ' ಎಂದರೆ, ಅದು ಕಾನೂನು ಮತ್ತು ಸಂವಿಧಾನಕ್ಕೆ ತೋರುವ ಅಗೌರವವೇ ವಿನಾ ಮತ್ತೇನೂ ಅಲ್ಲ. ಆದ್ದರಿಂದ ಸರ್ಕಾರ ಶಬ್ದಮಾಲಿನ್ಯ ಉಂಟುಮಾಡುವ ಯಾವುದೇ ರೀತಿಯ ಚಟುವಟಿಕೆಗಳನ್ನು ಕಾನೂನು ಚೌಕಟ್ಟಿನಲ್ಲಿ ನಿವಾರಿಸಲು ತಕ್ಷಣ ಕ್ರಮ ಕೈಗೊಂಡು ಜನರ ಮಾನಸಿಕ ಆರೋಗ್ಯ ಕಾಪಾಡಲಿ.

ರಾಜಶೇಖರ ಮೂರ್ತಿ ಬೆಳಗನಹಳ್ಳಿ, ಎಚ್‌.ಡಿ.ಕೋಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವಿದೇಶಿ ವಿನಿಮಯ ಮೀಸಲು ಇಳಿಕೆ

ಪ್ರಜಾವಾಣಿ ವಾರ್ತೆ

ದೇಶದ ವಿದೇಶಿ ವಿನಿಮಯ ಮೀಸಲು 10 ವಾರಗಳಿಂದ ಸತತವಾಗಿ ಇಳಿಕೆಯಾಗುತ್ತಿದೆ. ಏಳು ತಿಂಗಳ ಅವಧಿಯಲ್ಲಿ ಒಟ್ಟು ವಿದೇಶಿ ವಿನಿಮಯ ಮೀಸಲಿನಲ್ಲಿ ₹2.39 ಲಕ್ಷ ಕೋಟಿಯಷ್ಟು ಕುಸಿದಿದೆ. ಇದು ಶೇ 5ರಷ್ಟು ಕುಸಿತ. ವಿದೇಶಿ ವಿನಿಮಯ ಮೀಸಲನ್ನು ಜಾಗತಿಕ ವಿದ್ಯಮಾನಗಳು ಮತ್ತು ದೇಶದೊಳಗಿನ ಬೆಳವಣಿಗೆಗಳು ಪ್ರಭಾವಿಸುತ್ತವೆ. ಇವೆಲ್ಲವುಗಳ ಒಟ್ಟಾರೆ ಪರಿಣಾಮವಾಗಿ ವಿದೇಶಿ ವಿನಿಮಯ ಮೀಸಲಿನಲ್ಲಿ ಏರಿಳಿತವಾಗುತ್ತದೆ.

2021ರ ಸೆಪ್ಟೆಂಬರ್ ಮತ್ತು ಅಕ್ಟೋಬರ್ ಅವಧಿಯಲ್ಲಿ ಭಾರತದ ವಿದೇಶಿ ವಿನಿಮಯ ಮೀಸಲು ಈವರೆಗಿನ ಅತ್ಯಂತ ಗರಿಷ್ಠಮಟ್ಟಕ್ಕೆ ತಲುಪಿತ್ತು. 2021ರ ಅಕ್ಟೋಬರ್ ಅಂತ್ಯದ ವೇಳೆಗೆ ದೇಶದ ವಿದೇಶಿ ವಿನಿಮಯ ಮೀಸಲು ₹48.07 ಲಕ್ಷ ಕೋಟಿಗೆ ತಲುಪಿತ್ತು. ಆ ಮೂಲಕ ಭಾರತವು ವಿಶ್ವದ ಅತ್ಯಂತ ದೊಡ್ಡ ವಿದೇಶಿ ವಿನಿಮಯ ಮೀಸಲುಗಳಲ್ಲಿ ನಾಲ್ಕನೇ ಸ್ಥಾನಕ್ಕೆ ಏರಿತ್ತು. ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ಆಮದು ಪ್ರಮಾಣ ಕಡಿಮೆಯಾಗಿದ್ದರಿಂದ ರಫ್ತು ಮೌಲ್ಯ ಮತ್ತು ಆಮದು ಮೌಲ್ಯದ ನಡುವಣ ಅಂತರ ಕಡಿಮೆಯಾಗಿತ್ತು. ಈ ಕಾರಣದಿಂದ ಮೀಸಲಿನ ಮೊತ್ತವು ಸಾರ್ವಕಾಲಿಕ ಗರಿಷ್ಠಮಟ್ಟಕ್ಕೆ ಏರಿಕೆಯಾಗಿತ್ತು. ಆದರೆ ನಂತರದ ತಿಂಗಳುಗಳಲ್ಲೇ ಮೀಸಲು ಕುಸಿತದ ಹಾದಿ ಹಿಡಿದಿತ್ತು.

2022ರ ಜನವರಿ ಮತ್ತು ಫೆಬ್ರುವರಿಯಲ್ಲಿ ಮೀಸಲಿನ ಮೊತ್ತ ಸ್ವಲ್ಪ ಏರಿಕೆಯಾಗಿತ್ತು. ಆದರೆ, ಮಾರ್ಚ್‌ನಲ್ಲಿ ಭಾರಿ ಕುಸಿತಕ್ಕೆ ಸಾಕ್ಷಿಯಾಯಿತು. ಮಾರ್ಚ್ ಅಂತ್ಯದ ವೇಳೆಗೆ ₹1.63 ಲಕ್ಷ ಕೋಟಿಯಷ್ಟು ಕುಸಿತ ಕಂಡಿತ್ತು. ಇದು ಒಂದು ವರ್ಷದ ಅವಧಿಯಲ್ಲಿನ ಅತ್ಯಂತ ಗರಿಷ್ಠ ಕುಸಿತ. ವಿಶ್ವದ ಅತ್ಯಂತ ದೊಡ್ಡ ವಿದೇಶಿ ವಿನಿಮಯ ಮೀಸಲು ಪಟ್ಟಿಯಲ್ಲಿ ಭಾರತವು ಈಗ 5ನೇ ಸ್ಥಾನದಲ್ಲಿದೆ.



ಕುಸಿತಕ್ಕೆ ಕಾರಣ

ಈ ವರ್ಷದ ಆರಂಭದಿಂದಲೂ ಭಾರತದ ವಿದೇಶಿ ವಿನಿಮಯ ಮೀಸಲಿನ ಮೊತ್ತದಲ್ಲಿ ಏರಿಳಿತವಾಗುತ್ತಿದೆ. ಇದಕ್ಕೆ ಜಾಗತಿಕ ವಿದ್ಯಮಾನಗಳೇ ಕಾರಣ ಎಂದು ಹೇಳಲಾಗುತ್ತಿದೆ. ಜತೆಗೆ, ಕೆಲವು ಆಂತರಿಕ ವಿದ್ಯಮಾನಗಳು ಇದನ್ನು ಪ್ರಭಾವಿಸಿವೆ. ಕೋವಿಡ್‌ನ ನಂತರ ವಿಶ್ವದ ಎಲ್ಲೆಡೆ ಆರ್ಥಿಕತೆ ಚೇತರಿಕೆಯ ಹಾದಿಗೆ ಮರಳಿದೆ. ಇದರ ಜತೆಯಲ್ಲಿಯೇ ವಿಶ್ವದ ಪ್ರಮುಖ ದೇಶಗಳಲ್ಲಿ ಹಣದುಬ್ಬರ ಏರಿಕೆಯಾಗಿದೆ. ಹಣದುಬ್ಬರ ನಿಯಂತ್ರಣ ಕ್ರಮವಾಗಿ ಹಲವು ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ತಮ್ಮ ಬಡ್ಡಿದರವನ್ನು ಏರಿಕೆ ಮಾಡಿವೆ. ಇದರ ಪರಿಣಾಮವಾಗಿ ಭಾರತದಲ್ಲಿ ಹೂಡಿಕೆಯಾಗಿದ್ದ ವಿದೇಶಿ ಬಂಡವಾಳವನ್ನು ಹಿಂತೆಗೆಯಲಾಗುತ್ತಿದೆ.

ಜನವರಿಯಿಂದ ಏಪ್ರಿಲ್ ಅಂತ್ಯದವರೆಗೆ ಒಟ್ಟು ₹1.32 ಲಕ್ಷ ಕೋಟಿ ಮೊತ್ತದಷ್ಟು ವಿದೇಶಿ ಬಂಡವಾಳ ಹೂಡಿಕೆಯನ್ನು ಹಿಂತೆಗೆಯಲಾಗಿದೆ. ಕಡಿಮೆ ಅವಧಿಯಲ್ಲಿ ಇಷ್ಟು ದೊಡ್ಡ ಮೊತ್ತದ ಬಂಡವಾಳ ಹೊರಹೋದ ಕಾರಣ, ಅಮೆರಿಕದ ಡಾಲರ್ ಎದುರು ರೂಪಾಯಿಯ ಮೌಲ್ಯ ಕುಸಿದಿದೆ. ವಿಶ್ವದ ಬಹುತೇಕ ವಾಣಿಜ್ಯ ಚಟುವಟಿಕೆಗಳು ಅಮೆರಿಕದ ಡಾಲರ್ ಮೂಲಕ ನಡೆಯುವುದರಿಂದ, ಬಹುತೇಕ ದೇಶಗಳು ತಮ್ಮ ವಿದೇಶಿ ವಿನಿಮಯ ಮೀಸಲನ್ನು ಅಮೆರಿಕದ ಡಾಲರ್‌ನಲ್ಲಿ ನಿರ್ವಹಿಸುತ್ತವೆ. ಭಾರತವೂ ಇದಕ್ಕೆ ಹೊರತಲ್ಲ. ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿದ ಕಾರಣ, ವಿದೇಶಿ ವಿನಿಮಯ ಮೀಸಲಿನ ಮೌಲ್ಯ ಮತ್ತು ಮೊತ್ತ ಎರಡೂ ಇಳಿಕೆಯಾಗಿದೆ.

ರಷ್ಯಾ–ಉಕ್ರೇನ್ ಯುದ್ಧವು ವಿಶ್ವದ ಎಲ್ಲಾ ಮಾರುಕಟ್ಟೆಗಳನ್ನು ಪ್ರಭಾವಿಸಿದೆ. ಈ ಯುದ್ಧದ ಪರಿಣಾಮವಾಗಿ ಕಚ್ಚಾತೈಲ ಮತ್ತು ಅಡುಗೆ ಎಣ್ಣೆಯ ದರ ವಿಪರೀತ ಮಟ್ಟದಲ್ಲಿ ಏರಿಕೆಯಾಗಿದೆ. ಭಾರತವು ಎರಡೂ ರೀತಿಯ ತೈಲಗಳಿಗಾಗಿ ಆಮದನ್ನು ಬಹುವಾಗಿ ಅವಲಂಬಿಸಿದೆ. ರೂಪಾಯಿ ಮೌಲ್ಯ ಕುಸಿದಿರುವ ಕಾರಣ, ಆಮದಿಗೆ ಪಾವತಿಸಬೇಕಿರುವ ಮೊತ್ತವು ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಕಚ್ಚಾ ತೈಲ ಮತ್ತು ಅಡುಗೆ ಎಣ್ಣೆಯ ಆಮದಿಗೆ ಹೆಚ್ಚಿನ ಮೊತ್ತ ವೆಚ್ಚ ಮಾಡುವ ಅನಿವಾರ್ಯ ಎದುರಾಗಿದೆ. ಇದರಿಂದಲೂ ದೇಶದ ವಿದೇಶಿ ವಿನಿಮಯ ಮೀಸಲು ಕರಗಿದೆ.

ವಿದೇಶಿ ಬಂಡವಾಳ ಹೊರಹರಿವು

(ಕೋಟಿಗಳಲ್ಲಿ)



ಪರಿಣಾಮಗಳು

ವಿದೇಶಿ ವಿನಿಮಯ ಮೀಸಲು ಮೊತ್ತ ಇಳಿಕೆಯಾಗುವುದು ದೇಶದ ಆರ್ಥಿಕತೆಯನ್ನು ನೇರವಾಗಿ ಪ್ರಭಾವಿಸುತ್ತದೆ. ರೂಪಾಯಿ ಮೌಲ್ಯ ಕುಸಿತ ಮತ್ತು ವಿದೇಶಿ ವಿನಿಮಯ ಮೀಸಲು ಕುಸಿತ ಪರಸ್ಪರ ತಳಕು ಹಾಕಿಕೊಂಡಿರುವ ಕಾರಣ, ದೇಶದ ಆಮದು ಮತ್ತು ರಫ್ತನ್ನು ಈ ವಿದ್ಯಮಾನವು ಪ್ರಭಾವಿಸುತ್ತದೆ.

ರೂಪಾಯಿ ಮೌಲ್ಯ ಕುಸಿದಿರುವ ಕಾರಣ ದೇಶವು ಆಮದು ಮಾಡಿಕೊಳ್ಳುವ ಪ್ರತಿ ಸರಕು ಮತ್ತು ಸೇವೆಗೆ ಹೆಚ್ಚಿನ ಮೊತ್ತವನ್ನು ವೆಚ್ಚ ಮಾಡಬೇಕಾಗುತ್ತದೆ. ಇದರಿಂದ ವಿನಿಮಯ ಮೀಸಲಿನ ಮೊತ್ತ ಮತ್ತಷ್ಟು ಕಡಿಮೆಯಾಗುತ್ತದೆ. ವಿದೇಶಿ ವ್ಯಾಪಾರವನ್ನು ಸರಿದೂಗಿಸಲು ರಫ್ತು ಪ್ರಮಾಣವನ್ನು ಹೆಚ್ಚಿಸುವುದೂ ನಿರೀಕ್ಷಿತ ಪರಿಣಾಮಗಳನ್ನು ಬೀರುವುದಿಲ್ಲ. ಏಕೆಂದರೆ ಡಾಲರ್ ಎದುರು ರೂಪಾಯಿಯ ಮೌಲ್ಯ ಕುಸಿದಿರುವ ಕಾರಣ, ರಫ್ತು ಮಾಡಲಾದ ಸರಕು ಮತ್ತು ಸೇವೆಯಿಂದ ದೊರೆಯುವ ಹಣದ ಮೌಲ್ಯವು ಕಡಿಮೆ ಇರುತ್ತದೆ. ಇದರಿಂದ ದೇಶದ ಒಟ್ಟಾರೆ ವ್ಯಾಪಾರ ಕೊರತೆ (ರಫ್ತಿನಿಂದ ದೊರಕುವ ಮೊತ್ತಕ್ಕಿಂತ ಆಮದಿಗೆ ಹೆಚ್ಚಿನ ಮೊತ್ತ ಪಾವತಿಸಬೇಕಾದ ಸ್ಥಿತಿ) ಹೆಚ್ಚಾಗುತ್ತದೆ. ಇದರಿಂದ ವಿದೇಶಿ ವಿನಿಮಯ ಮೀಸಲು ಮತ್ತಷ್ಟು ಕುಸಿಯುತ್ತದೆ ಎಂದು ತಜ್ಞರು ವಿವರಿಸಿದ್ದಾರೆ.

ವಿದೇಶಿ ವಿನಿಮಯ ಮೀಸಲಿನ ಕುಸಿತದಿಂದ ಆಮದು ಸರಕುಗಳ ಖರೀದಿಗೆ ಲಭ್ಯವಿರುವ ಮೊತ್ತ ಕಡಿಮೆಯಾಗುತ್ತದೆ. ಲಭ್ಯವಿರುವ ಮೊತ್ತವನ್ನೇ ಎಲ್ಲದಕ್ಕೂ ವಿನಿಯೋಗಿಸಬೇಕಿರುವ ಕಾರಣ, ಅಗತ್ಯ ಪ್ರಮಾಣದ ಸರಕುಗಳನ್ನು ಆಮದು ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಇದರಿಂದ ದೇಶೀಯ ಮಾರುಕಟ್ಟೆಯಲ್ಲಿ ಅಂತಹ ಸರಕುಗಳ ಕೊರತೆ ಉಂಟಾಗುತ್ತದೆ. ಪರಿಣಾಮವಾಗಿ ಆ ಸರಕುಗಳ ಬೆಲೆ ಏರಿಕೆಯಾಗುತ್ತದೆ.

ಕರಗುತ್ತಿದೆ ಮೀಸಲು ನಿಧಿ

ಅತಿಹೆಚ್ಚು ವಿದೇಶಿ ವಿನಿಮಯ ಮೀಸಲು ಹೊಂದಿರುವ ಚೀನಾ ಸೇರಿದಂತೆ ಬಹುತೇಕ ದೇಶಗಳ ವಿದೇಶಿ ವಿನಿಮಯ ಮೀಸಲು ಕರಗುತ್ತಿದೆ. ಭಾರತದ ಅಕ್ಕಪಕ್ಕದ ದೇಶಗಳಾದ ನೇಪಾಳ, ಶ್ರೀಲಂಕಾದಲ್ಲಿ ವಿದೇಶಿ ವಿನಿಮಯ ಮೀಸಲು ಬಿಕ್ಕಟ್ಟು ಉಂಟಾಗಿದೆ. 2022ರ ಫೆಬ್ರುವರಿಗೆ ಹೋಲಿಸಿದರೆ, ಮಾರ್ಚ್ ತಿಂಗಳಲ್ಲಿ ಇಳಿಕೆಯಾಗಿರುವುದು ಕಂಡುಬಂದಿದೆ.

ಚೀನಾದ ವಿದೇಶಿ ವಿನಿಮಯ ಮೀಸಲು ಮೊತ್ತವು ₹244 ಲಕ್ಷ ಕೋಟಿಯಿಂದ ₹240 ಲಕ್ಷ ಕೋಟಿಗೆ ಇಳಿಕೆಯಾಗಿದೆ. ನಿಧಾನ ಆರ್ಥಿಕ ಪ್ರಗತಿ, ಕೋವಿಡ್‌ನ ಹೊಸ ಪ್ರಕರಣಗಳು ಏರಿಕೆಯಾಗುತ್ತಿರುವುದರಿಂದ ಚೀನಾದ ಹಲವು ನಗರಗಳಲ್ಲಿ ವಿಧಿಸಲಾಗಿರುವ ಲಾಕ್‌ಡೌನ್ ಕಾರಣಗಳಿಂದ ವಿದೇಶಿ ಹೂಡಿಕೆದಾರರು ಹಿಂದೆ ಸರಿಯುತ್ತಿದ್ದಾರೆ. ಇದರ ಜೊತೆಗೆ ಚೀನಾದ ಕರೆನ್ಸಿ ಯುವಾನ್ ಮೌಲ್ಯವು ಅಮೆರಿಕದ ಡಾಲರ್ ಎದುರು ಶೇ 4ರಷ್ಟು ಕುಸಿತ ಕಂಡಿರುವುದು ಮೀಸಲು ಇಳಿಕೆಗೆ ಕಾರಣ ಎನ್ನಲಾಗಿದೆ.

ಇತಿಹಾಸದಲ್ಲೇ ಅತ್ಯಂತ ಭೀಕರ ಆರ್ಥಿಕ ದುಃಸ್ಥಿತಿ ಎದುರಿಸುತ್ತಿರುವ ಶ್ರೀಲಂಕಾದ ವಿದೇಶಿ ವಿನಿಮಯ ಮೀಸಲು ಅಕ್ಷರಶಃ ಪಾತಾಳಕ್ಕೆ ತಲುಪಿದೆ. ದೇಶದ ಖಜಾನೆಯಲ್ಲಿ ಕೇವಲ ₹375 ಕೋಟಿ (5 ಕೋಟಿ ಡಾಲರ್) ಮೀಸಲು ಮೊತ್ತ ಇದೆ. ಜನರಿಗೆ ತೀರಾ ಅಗತ್ಯವಾಗಿ ಬೇಕಿರುವ ಆಹಾರ, ಇಂಧನ, ಔಷಧಗಳನ್ನು ಇಷ್ಟು ಮೊತ್ತದಲ್ಲಿ ಖರೀದಿಸುವುದು ಅಸಾಧ್ಯ. ಸಾಲ ನೀಡುವಂತೆ ಐಎಂಎಫ್‌ಗೆ ಶ್ರೀಲಂಕಾ ಮನವಿ ಮಾಡಿದೆ. 2021ರಿಂದ ಇಲ್ಲಿಯವರೆಗೆ ಎರಡೂವರೆ ಪಟ್ಟು ವಿದೇಶಿ ವಿನಿಮಯ ಮೀಸಲು ಮೊತ್ತವನ್ನು ಖರ್ಚು ಮಾಡಿದ್ದರಿಂದ, ಶ್ರೀಲಂಕಾ ತೀವ್ರ ಮೀಸಲು ಕೊರತೆ ಎದುರಿಸುತ್ತಿದೆ ಎಂದು ಅಲ್ಲಿನ ಹಣಕಾಸು ಸಚಿವ ಅಲಿ ಸಾಬ್ರೆ ಅವರು ಹೇಳಿದ್ದಾರೆ.

ಪಕ್ಕದ ನೇಪಾಳದಲ್ಲೂ ವಿದೇಶಿ ವಿನಿಮಯ ಮೀಸಲು ಕರಗುತ್ತಿದೆ. ಇಲ್ಲಿ 2021ರ ಜುಲೈನಿಂದ ಇಳಿಕೆ ಶುರುವಾಗಿದೆ. ಆಮದು ಹೆಚ್ಚಳ, ರಫ್ತು ಕುಂಠಿತ ಹಾಗೂ ವಿದೇಶಿ ಗಳಿಕೆಯಲ್ಲಿ ಹಿನ್ನಡೆಯಾಗಿರುವ ಕಾರಣ, ಮೀಸಲು ಅನುಪಾತವು ಕುಸಿಯಲಾರಂಭಿಸಿದೆ. ಮೀಸಲು ಉಳಿತಾಯ ಮಾಡುವ ಉದ್ದೇಶದಿಂದ ಐಷಾರಾಮಿ ಉಪಕರಣಗಳು, ಮದ್ಯ, ತಂಬಾಕು ಮೊದಲಾದ ಉತ್ಪನ್ನಗಳನ್ನು ವಿದೇಶಗಳಿಂದ ತರಿಸಿಕೊಳ್ಳಲು ನಿರ್ಬಂಧ ವಿಧಿಸಲಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಮೀಸಲು ಉಳಿತಾಯಕ್ಕೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದು, ಶ್ರೀಲಂಕಾದ ಪರಿಸ್ಥಿತಿಗೆ ತಲುಪಲು ಅವಕಾಶ ಮಾಡಿಕೊಡುವುದಿಲ್ಲ ಎಂದು ಸರ್ಕಾರ ಭರವಸೆ ನೀಡಿದೆ.

ಹೆಚ್ಚು ವಿದೇಶಿ ಮೀಸಲು ಹೊಂದಿರುವ ದೇಶಗಳು

(₹ಲಕ್ಷ ಕೋಟಿಗಳಲ್ಲಿ)



1991ರ ಮೀಸಲು ಕೊರತೆ ಬಿಕ್ಕಟ್ಟು

ಐತಿಹಾಸಿಕ ವಿದೇಶಿ ವಿನಿಮಯ ಮೀಸಲು ಬಿಕ್ಕಟ್ಟು ಸ್ಥಿತಿಗೆ ಭಾರತವು 1991ರಲ್ಲಿ ಸಾಕ್ಷಿಯಾಗಿತ್ತು. ಆಗ ಭಾರತದ ಬಳಿ ಉಳಿದಿದ್ದು ₹2,728 ಕೋಟಿ ವಿದೇಶಿ ವಿನಿಮಯ ಮೀಸಲು (ಅಮೆರಿಕದ ಡಾಲರ್ ಎದುರು ರೂಪಾಯಿಯ ಆಗಿನ ಮೌಲ್ಯದಲ್ಲಿ) ಮಾತ್ರ. ಇಷ್ಟು ಕಡಿಮೆ ವಿದೇಶಿ ವಿನಿಮಯ ಮೀಸಲು ಮೊತ್ತದಿಂದ ಒಂದು ವಾರದ ಪರಿಸ್ಥಿತಿಯನ್ನು ನಿಭಾಯಿಸಬಹುದಿತ್ತು (ಈಗ ಭಾರತದ ವಿದೇಶಿ ವಿನಿಮಯ ಮೀಸಲು ಮೊತ್ತ ಕುಸಿದಿದ್ದರೂ, ಸುಮಾರು 1 ವರ್ಷ ಯಾವುದೇ ತೊಂದರೆಯಿಲ್ಲದೆ ವಿದೇಶಿ ವಹಿವಾಟು ನಡೆಸಲು ಸಾಧ್ಯವಿದೆ). ಅಂದು ಎದುರಾಗಿದ್ದ ಮೀಸಲು ಕೊರತೆಯಿಂದ ಭಾರತವು ಪಾವತಿಯ ತೀವ್ರ ಒತ್ತಡ ಎದುರಿಸಿತ್ತು.

ಈ ಪರಿಸ್ಥಿತಿಯಿಂದ ತಕ್ಷಣ ಹೊರಬರಲು ಮುಂದಾದ ಸರ್ಕಾರ, 67 ಟನ್ ಮೀಸಲು ಚಿನ್ನವನ್ನು ನೀಡಿ ಐಎಂಎಫ್‌ನಿಂದ ₹5,000 ಕೋಟಿ ಸಾಲ ಪಡೆಯಲು ನಿರ್ಧರಿಸಿತು. ಭಾರತೀಯ ರಿಸರ್ವ್ ಬ್ಯಾಂಕ್‌ನಲ್ಲಿದ್ದ 47 ಟನ್ ಚಿನ್ನವನ್ನು ಬ್ಯಾಂಕ್ ಆಫ್ ಇಂಗ್ಲೆಂಡ್‌ಗೂ, 20 ಟನ್ ಚಿನ್ನವನ್ನು ಯೂನಿಯನ್ ಬ್ಯಾಂಕ್ ಆಫ್ ಸ್ವಿಟ್ಜರ್ಲೆಂಡ್‌ಗೂ ಕಳುಹಿಸಲು ಭಾರತ ಮುಂದಾಯಿತು. ಆದರೆ ಸರ್ಕಾರವು ದೇಶದ ಎಲ್ಲ ಮೀಸಲು ಚಿನ್ನವನ್ನು ಮಾರಾಟ ಮಾಡಲು ಮುಂದಾಗಿದೆ ಎಂಬುದಾಗಿ ದೇಶದಾದ್ಯಂತ ಹುಯಿಲೆದ್ದಿತ್ತು.

ಈ ಸಮಯದಲ್ಲಿ ಚಂದ್ರಶೇಖರ್ ನೇತೃತ್ವದ ಸರ್ಕಾರ ಬದಲಾವಣೆಯಾಗಿ, ಪಿ.ವಿ. ನರಸಿಂಹರಾವ್ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಡಾ. ಮನಮೋಹನ್ ಸಿಂಗ್ ಅವರನ್ನು ಹಣಕಾಸು ಸಚಿವರನ್ನಾಗಿ ನೇಮಿಸಲಾಯಿತು. ರಾವ್ ಹಾಗೂ ಸಿಂಗ್ ಅವರು ತೆಗೆದುಕೊಂಡ ಕೆಲವು ಆರ್ಥಿಕ ಸುಧಾರಣಾ ಕ್ರಮಗಳಿಂದ ವಿದೇಶಿ ವಿನಿಮಯ ಮೀಸಲು ಪ್ರಮಾಣ ಕ್ರಮೇಣ ಹೆಚ್ಚಿತ್ತು. ಉದಾರೀಕರಣ ನೀತಿಯನ್ನು ಸರ್ಕಾರ ಅಳವಡಿಸಿಕೊಂಡಿತು. ವಿದೇಶಿ ಬಂಡವಾಳ ಹೂಡಿಕೆಯನ್ನು ಆಹ್ವಾನಿಸಲಾಯಿತು. ಕೈಗಾರಿಕಾ ಬೆಳವಣಿಗೆಗೆ ಉತ್ತೇಜನ ನೀಡಲಾಯಿತು. ಇಂತಹ ಹಲವು ಕ್ರಮಗಳು ವಿದೇಶಿ ಮೀಸಲು ನಿಧಿಯನ್ನು ಮತ್ತೆ ಸರಿದಾರಿಗೆ ತರಲು ನೆರವಾದವು.

ಆಧಾರ: ಭಾರತೀಯ ರಿಸರ್ವ್ ಬ್ಯಾಂಕ್ ವಿದೇಶಿ ವಿನಿಮಯ ಮೀಸಲು ವರದಿಗಳು, ಪಿಟಿಐ, ರಾಯಿಟರ್ಸ್, ಎಎಫ್‌ಪಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 115

ಕಳಿಂಗರಾಜನಾದ ಗುಣನಿಧಿ

ಮಹಾಪಾಪಿಯಾಗಿದ್ದ ಗುಣನಿಧಿಯನ್ನು ನರಕಕ್ಕೆ ಕರೆದೊಯ್ಯಲು ಯಮನ ಭಟರಿಗೆ ಅವಕಾಶ ನೀಡದೆ, ಕೈಲಾಸಕ್ಕೆ ಕರೆದೊಯ್ದ ಶಿವಗಣಗಳ ವರ್ತನೆ ಸರಿ ಎನ್ನುತ್ತಾನೆ ಯಮಧರ್ಮ. ಯಾವುದೇ ಕಾರಣಕ್ಕೂ ಶಿವನ ಭಕ್ತರನ್ನು ಮುಟ್ಟಬೇಡಿ ಎಂದು ತನ್ನ ಕಿಂಕರರಿಗೆ ಎಚ್ಚರಿಸುವಾಗ, 'ಅವರು ಡಂಭಾಚಾರಕ್ಕಾಗಿಯಾಗಲೀ, ಮತ್ತೊಬ್ಬರನ್ನು ಮೋಸಗೊಳಿಸಲೆಂದಾಗಲೀ, ಶಿವನ ವೇಷವನ್ನು ಧರಿಸಿದ್ದರೂ ಅವರನ್ನು ಬಿಟ್ಟುಬಿಡಿ. ಅಂಥವರನ್ನು ಶಿವಲೋಕವೇ ವಿಚಾರಣೆ ಮಾಡಿ ತೀರ್ಪು ನೀಡುತ್ತದೆ' ಎಂದು ಅಪ್ಪಣೆ ಮಾಡುತ್ತಾನೆ.

ಹೀಗೆ, ಗುಣನಿಧಿ ಎಂಬ ಮಹಾಪಾಪಿಯು ಸಾಯುವ ಕೊನೆ ಘಳಿಗೆಯಲ್ಲಿ ಶಿವದೇಗುಲದಲ್ಲಿ ದೀಪ ಬೆಳಗಿದ್ದರಿಂದ ಯಮದೂತರ ಸೆರೆಯಿಂದ ಪಾರಾದ. ಶುದ್ಧ ಹೃದಯದಿಂದ ಕೈಲಾಸಕ್ಕೆ ತೆರಳಿ, ಶಿವ-ಪಾರ್ವತಿಯರನ್ನು ಸೇವಿಸುತ್ತಿದ್ದ. ಕೊನೆಗೆ ಕಳಿಂಗದೇಶದ ಅರಸನಾದ ಅರಿಂದಮನೆಂಬ ದೊರೆಗೆ 'ದಮ' ಎಂಬ ಮಗನಾಗಿ ಹುಟ್ಟಿದ. ಅವನು ಬಾಲ್ಯದಿಂದಲೇ ತನ್ನ ಜೊತೆಯ ಹುಡುಗರಲ್ಲೆಲ್ಲಾ ಶಿವನಲ್ಲಿ ಭಕ್ತಿಯನ್ನು ಬೆಳೆಸುತ್ತಿದ್ದ. ತಂದೆ ಅರಿಂದಮ ತೀರಿಹೋದಮೇಲೆ ದಮ ರಾಜನಾದ. ದೇಶದ ಆಳ್ವಿಕೆಯನ್ನು ಉತ್ತಮವಾಗಿ ನಡೆಸುತ್ತಾ, ದೇಶದೆಲ್ಲೆಡೆ ಶೈವಧರ್ಮಗಳನ್ನು ಪ್ರಚಾರಗೊಳಿಸಿದ.

ಹಿಂದಿನ ಜನ್ಮದಲ್ಲಿ ಗುಣನಿಧಿ ಎಂಬ ಸಾಮಾನ್ಯನಾಗಿ ಜನಿಸಿದ್ದವ, ಈಗ ಶಿವನ ಕೃಪೆಯಿಂದ ಮತ್ತೊಬ್ಬರಿಂದ ಗೆಲ್ಲಲಸಾಧ್ಯವಾದ ಅರಸನಾಗಿ ಹುಟ್ಟಿದ. ಇಂಥ ಶಿವಭಕ್ತ ರಾಜ ದಮ, ಪ್ರತಿಯೊಂದು ಶಿವದೇವಾಲಯದಲ್ಲೂ ದೀಪ ಹಚ್ಚುವುದೊಂದನ್ನು ಬಿಟ್ಟು ಬೇರೆ ಧರ್ಮಮಾರ್ಗ ಅರಿಯದಾದ. ದೇಶದಲ್ಲಿರುವ ಪ್ರತಿಯೊಂದು ಊರಿನ ಮುಖಂಡರನ್ನೂ ಕರೆಸಿ, 'ಶಿವಾಲಯಗಳಲ್ಲಿ ನಿತ್ಯವೂ ದೀಪಗಳನ್ನು ತಪ್ಪದೆ ಹಚ್ಚಬೇಕು' ಎಂದು ಆಜ್ಞಾಪಿಸಿದ. ರಾಜನ ಆಜ್ಞೆಯಿಂದ ಮತ್ತು ತಪ್ಪಿದರೆ ವಿಧಿಸುವ ಶಿಕ್ಷೆಯಿಂದ ಜನರೆಲ್ಲಾ ಪ್ರತಿ ಶಿವದೇವಸ್ಥಾನದಲ್ಲೂ ಅಂದಿನಿಂದ ದೀಪಗಳನ್ನು ಉರಿಸುತ್ತ ಬಂದರು. ಈ ರೀತಿ ದಮ ತಾನು ಬದುಕಿರುವವರೆಗೂ ಧರ್ಮಕೆಲಸವನ್ನು ಮಾಡುತ್ತಾ, ಪುಣ್ಯವನ್ನು ಸಂಪಾದಿಸಿ ಕೊನೆಗೆ ಮರಣವನ್ನು ಹೊಂದಿದ.

ಪೂರ್ವಜನ್ಮದಲ್ಲಿ ಗುಣನಿಧಿಯಾಗಿ ಹಚ್ಚಿದ ಒಂದು ದೀಪದ ಮಹಿಮೆಯಿಂದ ಕೈಲಾಸ ಸೇರಿದ. ಶಿವನ ಅನುಗ್ರಹದಿಂದ ಮತ್ತೆ ರಾಜನಾಗಿ ಜನಿಸಿ, ಶಿವದೇವಾಲಯಗಳೆಲ್ಲಾ ನಿತ್ಯ ದೀಪಗಳು ಬೆಳಗುವಂತೆ ಮಾಡಿದ. ಈ ಪುಣ್ಯದಿಂದ, ದೊಡ್ಡ ದೊಡ್ಡ ದೀಪ ಶಿಖೆಗಳಿಗೆ ಸದಾ ಆಶ್ರಯನಾಗಿ ಮರುಜನ್ಮದಲ್ಲಿ ಅಲಕಾ ನಗರಿಗೆ ಅಧಿಪತಿಯಾದ – ಎಂದು ನಾರದನಿಗೆ ಗುಣನಿಧಿಕಥೆ ಹೇಳಿದ ಬ್ರಹ್ಮ, ಗುಣನಿಧಿಯ ಶಿವಗುಣವನ್ನು ಈ ರೀತಿ ವರ್ಣಿಸಿತ್ತಾನೆ.

'ವತ್ಸ ನಾರದ, ಗುಣನಿಧಿಯಂತೆ ಶಿವನಿಗೆಂದು ಮಾಡಿದ ಸಣ್ಣ ಪುಣ್ಯದ ಕೆಲಸವೂ ಕಾಲಾಂತರದಲ್ಲಿ ಒಳ್ಳೆಯ ಫಲವನ್ನೀಯುತ್ತದೆ. ಧರ್ಮಕಾರ್ಯಗಳೊಂದರಲ್ಲಿಯೂ ಆಸಕ್ತಿಯಿಲ್ಲದ ಗುಣನಿಧಿ, ದೈವಯೋಗದಿಂದ ಪುನೀತನಾದ. ಅವನು ನೈವೇದ್ಯವನ್ನು ಕದಿಯಬೇಕೆಂದು ಶಿವಾಲಯದೊಳಗೆ ಪ್ರವೇಶಿಸಿದ. ಶಿವನಿಗೆ ಇಟ್ಟ ನೈವೇದ್ಯವು ಚೆನ್ನಾಗಿ ಕಾಣಲೆಂದು ಬಟ್ಟೆಯಂಚಿನಿಂದ ದೀಪವನ್ನು ಹಚ್ಚಿದ, ಆ ಬೆಳಕು ಶಿವಲಿಂಗದ ಮೇಲೆ ಬಿದ್ದು ಮುಸುಕಿದ್ದ ಕತ್ತಲೆ ಮಾಯವಾಯಿತು. ಆ ಪುಣ್ಯದಿಂದ ಅವನು ಕಳಿಂಗದೇಶದ ದೊರೆಯಾಗಿ ಧರ್ಮಕಾರ್ಯಗಳನ್ನು ಮಾಡುತ್ತಾಬಂದ. ಪೂರ್ವಜನ್ಮವಾಸನೆಯಿಂದ ಶಿವದೇವಾಲಯಗಳಲ್ಲಿ ದೀಪಗಳನ್ನು ಸದಾ ಉರಿಯುವಂತೆ ಮಾಡಿದ. ಇದರ ಪುಣ್ಯಫಲದಿಂದ ಅಲಕಾ ನಗರಿ ರಾಜನಾಗಿ ಮುಂದೆ ಕುಬೇರನಾದ. ಈಗ ಅವನು ಕುಬೇರನಾಗಿ ಅನುಭವಿಸುತ್ತಿರುವ ದಿಕ್ಪಾಲಪದವಿಯು ಅವನ ಶಿವಪೂಜಾಫಲದಿಂದ ದೊರೆಯಿತು. ಯಜ್ಞದತ್ತನ ಮಗನಾದ ಗುಣನಿಧಿಯ ಚರಿತ್ರೆಯನ್ನು ಕೇಳಿದವರ ಮನೋರಥಗಳೆಲ್ಲವೂ ಸಿದ್ಧಿಸುವುವು'.

ಗುಣನಿಧಿಯಾಗಿ ಶಿವನ ಮುಂದೆ ಒಂದು ದೀಪ ಬೆಳಗಿದ್ದಕ್ಕೆ ಕಳಿಂಗದೇಶದ ರಾಜನಾದ. ದಮ ರಾಜನಾಗಿ ಶಿವದೇಗುಲಗಳಲ್ಲಿ ಸಾವಿರಾರು ದೀಪ ಬೆಳಗಿದ. ಇದರ ಪುಣ್ಯದಿಂದ ಅಲಕಾ ನಗರಿ ರಾಜನಾಗಿ ಘೋರ ತಪಸ್ಸು ಮಾಡಿ ಕುಬೇರನಾದ. ಇಂಥ ಕುಬೇರನಿಗೆ ಶಿವನೊಂದಿಗೆ ಸಖ್ಯವಾದ ಕಥೆ ಹೇಳುತ್ತೇನೆ, ಕೇಳು – ಎಂದು ನಾರದನಿಗೆ ಬ್ರಹ್ಮ ಹೇಳುವಲ್ಲಿಗೆ ಶ್ರೀಶಿವಮಹಾಪುರಾಣದ ರುದ್ರಸಂಹಿತೆಯ ಸೃಷ್ಟಿಖಂಡದಲ್ಲಿ ಕೈಲಾಸಗಮನೋಪಾಖ್ಯಾನದಲ್ಲಿ ಗುಣನಿಧಿ ಸದ್ಗತಿವರ್ಣನ ಎಂಬ ಹದಿನೆಂಟನೆಯ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

ವ್ಯಕ್ತಿಯೊಬ್ಬನನ್ನು ಗುಂಪೊಂದು ಮನಬಂದಂತೆ ಥಳಿಸುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಥಳಿತಕ್ಕೊಳಗಾದ ವ್ಯಕ್ತಿಯ ದೇಹದ ಹಲವು ಭಾಗಗಳಿಂದ ರಕ್ತ ಸುರಿಯುತ್ತಿದ್ದರೂ ಗುಂಪು ಆತನನ್ನು ಥಳಿಸುವುದನ್ನು ಮುಂದುವರಿಸುತ್ತದೆ. 'ರಾಜಸ್ಥಾನದ ಜೋಧ್‌ಪುರದಲ್ಲಿ ಈದ್ ಹಬ್ಬದ ಸಮಯದಲ್ಲಿ ನಡೆದ ಕೋಮುಗಲಭೆಗೆ ಸಂಬಂಧಿಸಿದ ದೃಶ್ಯ ಇದು. ಹಿಂದೂ ವ್ಯಕ್ತಿಯನ್ನು ಮುಸ್ಲಿಮರು ಹೊಡೆದು ಕೊಂದಿದ್ದಾರೆ. ಮುಸ್ಲಿಮರು ಹಿಂದೂಗಳನ್ನು ಕೊಲ್ಲಲಿ ಎಂದು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಇಂಟರ್‌ನೆಟ್ ಅನ್ನು ಸ್ಥಗಿತಗೊಳಿಸಿದ್ದಾರೆ' ಎಂಬ ವಿವರವನ್ನು ವಿಡಿಯೊಗೆ ನೀಡಲಾಗಿದೆ.

ಈ ವಿಡಿಯೊ ಮತ್ತು ಜೋಧ್‌ಪುರದಲ್ಲಿ ನಡೆದ ಕೋಮುಗಲಭೆಗೆ ಸಂಬಂಧವಿಲ್ಲ ಎಂದು 'ದಿ ಲಾಜಿಕಲ್ ಇಂಡಿಯನ್' ವೇದಿಕೆ ವರದಿ ಮಾಡಿದೆ. ವಿಡಿಯೊದಲ್ಲಿ ಸೆರೆ ಆಗಿರುವ ಘಟನೆ ನಡೆದಿರುವುದು ಹರಿಯಾಣದ ಯಮುನಾನಗರದ ಸಢೌರ ಪ್ರದೇಶದಲ್ಲಿ. ಕೋಮು ದ್ವೇಷದ ಕಾರಣ ಈ ಥಳಿತ ನಡೆದಿಲ್ಲ. 10ರಿಂದ 12 ಜನರ ಗುಂಪೊಂದು ಹಳೆಯ ವೈಷಮ್ಯದ ಕಾರಣಕ್ಕೆ ಲಾರಿ ಚಾಲಕ ಕಮಲ್‌ಜೀತ್ ಎಂಬುವವರನ್ನು ಥಳಿಸಿದೆ. ಈ ಪ್ರಕರಣದ ತನಿಖೆ ನಡೆಯುತ್ತಿದೆ. ಆರೋಪಿಗಳಲ್ಲಿ ಒಬ್ಬ ಮುಸ್ಲಿಂ ವ್ಯಕ್ತಿ ಇದ್ದಾನೆ. ಆದರೆ ಇದು ವೈಯಕ್ತಿಕ ಕಾರಣಕ್ಕೆ ನಡೆದ ಥಳಿತ ಎಂದು ಯಮುನಾನಗರ ಎಸ್‌ಪಿ ತಿಳಿಸಿದ್ದಾರೆ ಎಂದು ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಲಾಗಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಧರ್ಮದ ಸುಂದರ ವ್ಯಾಖ್ಯೆ

ಗೃಹದಿ ರಾಷ್ಟ್ರದಿ ಸಮಾಜದಿ ಲೋಕಸಂಗತದಿ |
ವಿಹಿತದ ಸ್ಥಾನದಿಂ ಸಹಜಗುಣಬಲದಿಂ- ||
ದಿಹಪರಸಮನ್ವಯದೆ ಸರ್ವಹಿತ ಸಂಸ್ಥಿತಿಗೆ |
ಸಹಕರಿಪುದೆಲೆ ಧರ್ಮ – ಮಂಕುತಿಮ್ಮ || 623 ||

ಪದ-ಅರ್ಥ: ಲೋಕಸಂಗತದಿ = ಲೋಕ ವ್ಯವಹಾರದಲ್ಲಿ, ವಿಹಿತದ = ದೊರಕಿದ, ಸಹಜ ಗುಣಬಲದಿಂದಿಹಪರಸಮನ್ವಯದೆ = ಸಹಜ ಗುಣಬಲ ದಿಂದ + ಇಹಪರ + ಸಮನ್ವಯದೆ.

ವಾಚ್ಯಾರ್ಥ: ಮನೆಯಲ್ಲಿ, ದೇಶದಲ್ಲಿ, ಸಮಾಜದಲ್ಲಿ, ಲೋಕವ್ಯವಹಾರದಲ್ಲಿ, ದೊರಕಿದ ಸ್ಥಾನದಿಂದ ನಮಗಿರುವ ಸಹಜವಾದ ಗುಣಗಳ ಶಕ್ತಿಯಿಂದ, ಇಹ ಮತ್ತು ಪರಗಳ ಸಮನ್ವಯದಿಂದ ಎಲ್ಲರ ಅಭ್ಯುದಯಕ್ಕೆ ಸಹಕಾರಿಯಾಗುವುದೇ ಧರ್ಮ.

ವಿವರಣೆ: ಇದೊಂದು ಅದ್ಭುತವಾದ ಚೌಪದಿ. ಬಹುಶಃ ಇದು ಅತ್ಯಂತ ವಿಸ್ತಾರವಾದ, ಎಲ್ಲವನ್ನೂ ಒಳಗೊಂಡ ಧರ್ಮದ ವ್ಯಾಖ್ಯೆ.

ನಮ್ಮೆಲ್ಲ ಶಾಸ್ತ್ರಗಳು ಹೇಳುವುದು ಸರ್ವಾತ್ಮತ್ವ. ಹಾಗೆಂದರೆ, ಯಾವ ಮನುಷ್ಯ ಪ್ರಕೃತಿಯ ಎಲ್ಲ ಜೀವ ಜಂತುಗಳು ತನ್ನೊಳಗೆ, ತನ್ನಂತೆಯೇ ಸೇರಿಕೊಂಡಿವೆ ಎನ್ನುವಂತೆ. ಅಭೇದ ಬುದ್ಧಿಯಿಂದ ನಡೆದುಕೊಳ್ಳುತ್ತಾನೋ ಮತ್ತು ನನ್ನ ಒಳಗಿರುವ ಆತ್ಮವನ್ನೇ ಸಮಸ್ತ ಪ್ರಾಣಿಗಳಲ್ಲಿ ಕಾಣುತ್ತ, ಅವುಗಳ ಅನುಭವಗಳಲ್ಲಿ ಸಹಭಾಗಿಯಾಗುತ್ತಾನೋ ಅವನು ಸರ್ವಾತ್ಮತ್ವವನ್ನು ಸಾಧಿಸಿದವನು. ಇದು ಹೇಳುವುದಕ್ಕೆ ಬಲು ಸುಲಭ. ಆದರೆ ಅನುಭವಕ್ಕೆ ತಂದುಕೊಳ್ಳುವುದು ಬಹಳ ಕಷ್ಟ. ಅದನ್ನು ಒಮ್ಮೆಗೇ ಸಾಧಿಸುವುದು ಸಾಧ್ಯವಿಲ್ಲ. ಬೆಟ್ಟವನ್ನು ಏರುವಾಗ ಒಂದೊಂದೇ ಮೆಟ್ಟಲನ್ನು ಏರಿದಂತೆ ಹಂತಹಂತವಾಗಿ ಏರಬೇಕು.

ಮೊದಲು ತನ್ನಿಂದಲೇ ಪ್ರಾರಂಭವಾಗಬೇಕು. ಅದೇ ಕೇಂದ್ರ. ಹೃದಯವಿಸ್ತಾರದಲ್ಲಿ ಒಂದನೆಯ ಹಂತ, 'ನಾನು' ಎನ್ನುವುದು ಕರಗಿ 'ನಾವು' ಬರಬೇಕು. ನಿಧಾನಕ್ಕೆ ನಾನು ಎನ್ನುವುದು ಪರಿವಾರದ ಎಲ್ಲರನ್ನೂ ಒಳಗೊಳ್ಳತೊಡಗುತ್ತದೆ. ಇತರರ ಕಷ್ಟಗಳೂ, ತನ್ನ ಕಷ್ಟಗಳೇ ಎನ್ನಿಸತೊಡಗುತ್ತದೆ. ಅಲ್ಲಿ ಬರುವ ಕಷ್ಟ-ಸುಖಗಳು, ಜೀವನದ ಸಹಭಾಗಿತೆಗೆ ಒಳ್ಳೆಯ ಸಂಸ್ಕಾರವಾಗುತ್ತವೆ. ಇಲ್ಲಿಂದ ಸ್ವಕೇಂದ್ರಿತ ವೃತ್ತ ಅರಳುತ್ತ ಸಾಗಬೇಕು. ಮನೆಗೆ ಮಾತ್ರ ಸೀಮಿತವಾಗಿದ್ದ ಮಮತೆ, ಸಮಾಜಕ್ಕೆ ಹರಿಯಬೇಕು. ಆಗ ಜಾತಿ, ಮತ, ಕುಲಗಳ ಭೇದ ಅಳಿಸಿಹೋಗಿ, ಎಲ್ಲರೂ ನಮ್ಮವರೇ ಎಂಬ ಭಾವ ಜಾಗ್ರತವಾಗುತ್ತದೆ. ಮುಂದೆ ಬೆಳೆದಂತೆ ಭಾಷೆ, ಸಾಹಿತ್ಯ, ಕಲೆಗಳು, ಸಂಸ್ಕೃತಿಗಳು ಸಮಾಜ ವಿಭಜನೆಗೆ ಕಾರಣವಾಗದೆ, ಅವು ವೈವಿಧ್ಯತೆಯ ಸುಂದರ ಮುಖಗಳಾಗುತ್ತವೆ. ಅಂಥ ವ್ಯಕ್ತಿ, ಯಾವುದೇ ಮಾತಿನಿಂದ, ಕೃತಿಯಿಂದ ಸಮಾಜದಲ್ಲಿ ಭಿನ್ನತೆಯನ್ನು ತರದೆ, ಎಲ್ಲರನ್ನೂ ಒಂದುಗೂಡಿಸಲು ಪ್ರಯತ್ನಿಸುತ್ತಾನೆ.

ಮುಂದಿನ ವೃತ್ತ ರಾಷ್ಟ್ರ. ಭಾರತದ ಯಾವುದೇ ರಾಜ್ಯದ, ಯಾವುದೇ ಭಾಷೆಯ, ಯಾವುದೇ ಮತದ ಜನವಾಗಲಿ, ಅವರು ಭಾರತೀಯರು, ನಮ್ಮವರು ಎಂಬ ಚಿಂತನೆ ಮೂಡಬೇಕು. ರಾಜ್ಯಗಳ ಸೃಷ್ಟಿ ವಿಭಜನೆಗೆ ಅಲ್ಲ, ಆಡಳಿತಕ್ಕೆ ಅನುಕೂಲವಾಗಲಿ ಎಂದು. ರಾಜ್ಯ-ರಾಜ್ಯಗಳ ನಡುವಿನ ಹೊಡೆದಾಟ ಹುಚ್ಚುತನ. ಹೋರಾಡುವುದು ಯಾರೊಂದಿಗೆ? ಭಾರತೀಯತೆಯ ಮಹಾತೀರ್ಥದಲ್ಲಿ ಎಲ್ಲ ಒಳಭೇದಗಳು ಲಯವಾಗಿ ಹೋಗಬೇಕು. ನಮ್ಮ ಭಾರತ ಪ್ರೀತಿ ವಿಸ್ತಾರವಾಗಿ ಹರಿದು ಇಡೀ ಪ್ರಪಂಚವನ್ನು ಆವರಿಸಬೇಕು. ಅದಕ್ಕೇ ನಮ್ಮ ಪೂರ್ವಜರು, 'ವಸುಧೈವ ಕುಟುಂಬಕಂ' ಎಂದರು. ಪ್ರಪಂಚ ಸರ್ವಜನಾಂಗದ ಶಾಂತಿಯ ತೋಟವಾಗಬೇಕು. ನಮಗಿರುವ ಶಕ್ತಿಯಿಂದ, ನಮಗಿರುವ ಅವಕಾಶಗಳಿಂದ, ಸ್ವಂತದ ವ್ಯಕ್ತಿತ್ವ ವಿಕಾಸಕ್ಕೂ, ಆತ್ಮವಿಕಾಸಕ್ಕೂ ಅನುವಾಗುವಂತೆ, ಸರ್ವರ ಹಿತಕ್ಕಾಗಿ ಸಹಕರಿಸುವುದು ಧರ್ಮ. ಇದನ್ನೇ ಸ್ವಾಮಿ ವಿವೇಕಾನಂದರು 'ಆತ್ಮನೋ ಮೋಕ್ಷಾರ್ಥಂ ಜಗದ್ ಹಿತಾಯ ಚ' ಎಂದರು. ಸ್ವಂತದ ಮೋಕ್ಷದೊಡನೆ ಜಗತ್ತಿಗೆ ಹಿತವೂ ಆಗಬೇಕು. ಇದು ಧರ್ಮ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಮೇ 9, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಶುಕ್ಲ ಅಷ್ಟಮಿ ಗಂ. 18-33 ನಕ್ಷತ್ರ: ಆಶ್ಲೇಷ ಗಂ. 17-08 ಯೋಗ: ವೃದ್ಧಿ ಗಂ. 20-43, ಕರಣ: ವಿಷ್ಟಿ ಗಂ. 05-51, ಮೇಷ ಮಾಸದ 25 ನೇ ದಿನ. **ರಾಹುಕಾಲ:** ಬೆಳಿಗ್ಗೆ 07:30 – 09:00
ಸೂರ್ಯೋದಯ: 06-10 ಸೂರ್ಯಾಸ್ತ: 06-44
ಮುಸ್ಲಿಂ ದಿನಾಂಕ: 07 ಶವ್ವಾಲ್
ದಿನ ವಿಶೇಷ: ರವೀಂದ್ರನಾಥ್ ಠಾಗೋರ್‌ರವರ ಜನ್ಮದಿನ
ಅದೃಷ್ಟ ಸಂಖ್ಯೆ: 9, 15

ಮೇಷ: ಅನಾವಶ್ಯಕ ಚಿಂತೆಯಿಂದ ಆರೋಗ್ಯದಲ್ಲಿ ಏರುಪೇರು. ಇಂದು ಬರುವ ನೂತನ ಯೋಚನೆಗಳು ಖರ್ಚಿಗೆ ದಾರಿಯಾದರೂ ಮುಂದಿನ ದಿನಗಳಲ್ಲಿ ಉಪಕಾರಿಯಾಗಿರುತ್ತದೆ. ಅದೃಷ್ಟದಾಯಕ ದಿನವಾಗಿರುತ್ತದೆ.

ವೃಷಭ: ಕರ್ತವ್ಯ ದೃಷ್ಟಿಯಿಂದ ವೃತ್ತಿಕ್ಷೇತ್ರದಲ್ಲಿ ಒಂದೇ ಮನಸ್ಸಿನಲ್ಲಿ ದುಡಿದರೆ ಸಮಾಧಾನ ಹೆಚ್ಚುತ್ತದೆ. ಅವಿವಾಹಿತರಿಗೆ ವಿವಾಹದ ವಿಚಾರದಲ್ಲಿ ಶುಭವಾಗುವ ಲಕ್ಷಣ. ನಾಗದೇವರ ಆರಾಧನೆಯಿಂದ ಶುಭ.

ಮಿಥುನ: ಹಿತಶತ್ರುಗಳ ದ್ವೇಷ ಅಸೂಯೆಯಿಂದ ಬರುತಿದ್ದ ಮನದ ಕ್ಲೇಶವು ದೂರಾಗುತ್ತದೆ. ಕಿಂಚಿತ್ ಕಾರ್ಯಸಿದ್ಧಿಯಿಂದಲೂ ನೆಮ್ಮದಿ. ಅನೇಕ ಬಗೆಯ ಶುಭವಾರ್ತೆಗಳು ನೆಮ್ಮದಿಗೆ ಕಾರಣವಾದೀತು.

ಕರ್ಕಾಟಕ: ಪ್ರಭಾವಿ ವ್ಯಕ್ತಿಗಳೊಂದಿಗೆ ಹೆಚ್ಚಿನ ಸಂಪರ್ಕ ಉಪಕಾರಕ್ಕಿಂತ ತೊಂದರೆಗೆ ಮಾರ್ಗ ಹಾಕಿಕೊಟ್ಟ ಹಾಗೆ ಆಗುವುದು. ಆದ್ದರಿಂದ ಜೋಪಾನವಾಗಿರಿ. ನಿಸ್ವಾರ್ಥ ಸೇವೆಯಿಂದ ಗೌರವಾನ್ವಿತ ಸ್ಥಾನ ಲಭಿಸುತ್ತದೆ.

ಸಿಂಹ: ನೂತನ ಸ್ನೇಹಿತ ಅಥವಾ ಅಪರಿಚಿತ ವ್ಯಕ್ತಿಯ ಸಹಕಾರದಿಂದ ನಿಮ್ಮ ಕಾರ್ಯ ವ್ಯವಸ್ಥಿತವಾಗಿ ಸಮಯಕ್ಕೆ ಸರಿಯಾಗಿ ನಡೆಯಲಿದೆ. ಗೃಹದಲ್ಲಿ ಸಮಾರಂಭ ಅಥವಾ ವೃಥಾ ತಿರುಗಾಟದಿಂದಾಗಿ ಖರ್ಚು ಹೆಚ್ಚಾಗಲಿದೆ.

ಕನ್ಯಾ: ನಿಮ್ಮ ಕೆಲಸಗಳನ್ನು ಸಾಧಿಸಿಕೊಳ್ಳಲೇಬೇಕಿದ್ದರೆ ಅವಿರತ ಶ್ರಮ ಅಗತ್ಯ ಮತ್ತು ಅನಿವಾರ್ಯ. ನಿಮ್ಮ ಹಿತಾಸಕ್ತಿಗಳಿಗೆ ಗಮನ ಕೊಡಿ. ಬಿಳಿಯಾದದ್ದೆಲ್ಲಾ ಹಾಲು ಎಂದು ನಂಬುವ ನಿಮ್ಮ ಮನೋಧರ್ಮದಿಂದ ಮೋಸ ಹೋಗುವಿರಿ.

ತುಲಾ: ಶುಭಮಂಗಲ ಕಾರ್ಯಗಳಿಗೆ ಅಡ್ಡಿ-ಆತಂಕ ಇರುವುದಿಲ್ಲ. ಜಟಿಲ ಸಮಸ್ಯೆಗಳು ಬಗೆಹರಿದು ಮನೆಯವರಿಗೆ ನೆಮ್ಮದಿ ಉಂಟಾಗುವುದು. ನಿಮ್ಮ ಮನೋಭಿಲಾಷೆಗೆ ಕುಟುಂಬದವರು ಅಭಿವೃದ್ಧಿ ದಾರಿಯನ್ನು ಕಲ್ಪಿಸುವರು.

ವೃಶ್ಚಿಕ: ವ್ಯಾಪಾರದ ಬಂಡವಾಳ ಹೆಚ್ಚಿಸಿಕೊಳ್ಳುವ ಬಗ್ಗೆ ಯೋಚಿಸಬಹುದು. ಅಧಿಕ ಜವಾಬ್ದಾರಿ ಅಥವಾ ಒತ್ತಡ ತರುವಂತಹ ಕೆಲಸಗಳಿಂದ ದೂರವಿರಿ. ಈ ದಿನದ ಸಂಜೆಯ ವೇಳೆಯಲ್ಲಿ ವಾಹನ ಚಾಲನೆಯಲ್ಲಿ ಜಾಗರೂಕತೆ ಮಾಡಿ.

ಧನು: ಸಮಸ್ಯೆಗಳು ಮುಂದಿನ ದಿನಗಳಲ್ಲಿ ಸ್ವಲ್ಪ ಸ್ವಲ್ಪವಾಗಿ ದೂರಾಗಲಿದೆ. ಬೇಕರಿ ಪದಾರ್ಥಗಳ ಮಾರಾಟದಿಂದ ಲಾಭ. ಸಂಗತಿಗಳನ್ನು ಹಗುರವಾಗಿ ಪರಿಗಣಿಸುವ ಸ್ವಭಾವ ಬದಲಿಸಿಕೊಳ್ಳಿ. ಹೋರಾಟದಿಂದ ಯಶಸ್ಸು.

ಮಕರ: ನಿಸ್ವಾರ್ಥ, ತ್ಯಾಗದ ಮನೋಭಾವ ಬೆಳೆಸಿಕೊಳ್ಳುವಿರಿ. ಕಾನೂನು ಸಮಸ್ಯೆಗಳೆಲ್ಲಾ ಸುಸೂತ್ರವಾಗಿ ಬಗೆಹರಿಯಲಿದೆ. ಅನಾವಶ್ಯಕ ಚಿಂತೆ ಬೇಡ. ಮನೆಯಲ್ಲಿ ಪತ್ನಿ, ಮಕ್ಕಳ ಆರೋಗ್ಯದ ಬಗ್ಗೆ ಗಮನ ಹರಿಸಬೇಕಾಗುತ್ತದೆ.

ಕುಂಭ: ದಾಂಪತ್ಯದಲ್ಲಿ ಕಲಹ, ಕುಟುಂಬ ವರ್ಗದವರಲ್ಲಿ ಭಿನ್ನಾಭಿಪ್ರಾಯದಂತಹ ಸನ್ನಿವೇಶಗಳು ಕಂಡುಬಂದು ಮನಸ್ಸಿಗೆ ನೋವಾಗಲಿದೆ. ಉದಾಸೀನತೆ ತೋರಿದರೆ ಅನಿವಾರ್ಯವಾಗಿ ಹಿನ್ನಡೆ ದುರಿಸಬೇಕಾಗುವುದು.

ಮೀನ: ಗಣಪತಿಯ ಅನುಗ್ರಹದಿಂದ ಗೊಂದಲಗಳು ಸರಳವಾಗಿ ನಿವಾರಣೆಗೊಂಡು ಮನಸ್ಸು ತಿಳಿಯಾಗುವುದು. ಹತ್ತಾರು ಜನರಿಗೆ ಮಾರ್ಗದರ್ಶಿಕ ವ್ಯಕ್ತಿಯಾಗಿ ನೇಮಕಗೊಳ್ಳುವ ಯೋಗವಿದೆ.

ಪದಬಂಧ 4952

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಈತ ವಿನೋದಗಾರ (4)
3.ಸಸ್ಯಗಳಿಂದ ತೆಗೆದ ಎಣ್ಣೆ (4)
5.ಹದವಾಗಿ ಸುಡುವಿಕೆ (3)
7.ನಡುಗುವುದನ್ನು ನೋಡಿದಾಗ ಮೂಡಿದ ಮಂದಹಾಸ (2)
9.ಮಂಕರಿ ಹೊತ್ತಿರುವವ ದಡ್ಡ! (2)
11.ಕಾವ್ಯಲಕ್ಷಣಗಳನ್ನೆಲ್ಲಾ ಬಲ್ಲವನು (4)
12.ಯೆಂಡ್ಮುಡುಕ ರತ್ನನ ಜಗತ್ತು (4)
13.ಮುನಿದರೆ ಮಾರಿಯಾಗುವ ಸ್ತ್ರೀ (2)
14.ನೆನಪಾದಾಗ ಹೇಳಿರುವ ಕಾರಣ (2)
16.ಅರಸುವಾಗ ಸಿಕ್ಕಿರುವ ದೊರೆ (3)
18.ಕರೆಯಲು ಬಂದವರು ಕೊಟ್ಟ ಆಹ್ವಾನ (4)
19.ಮಾಧ್ಯಮದಿಂದ ಗೊತ್ತಾದ ವಸ್ತುಸ್ಥಿತಿ (4)

ಮೇಲಿಂದ ಕೆಳಕ್ಕೆ

1.ನಿಧಾನಕ್ಕೆ ನೋಡಿ! ರೀತಿ ಹೀಗೆ ಕಾಣುತ್ತದೆ (3)
2.ಕಲಾವಿದನ ಮನೆ ಬಾಗಿಲು (2)
3.ಯೌವ್ವನದಲ್ಲಿ ನೋಡಿರುವ ಅರಣ್ಯ (2)
4.ತಿರುವಿನಲ್ಲಿ ಕಾಣಿಸುತ್ತಿರುವ ಭಿಕ್ಷುಕ (3)
6.ಕರಾವಳಿ ಬ್ರಾಹ್ಮಣರ ಒಂದು ಪಂಗಡ (3)
8.ಮಗುವಾಗಿದ್ದಾಗಿಲಿಂದಲೂ ಪರಾಧೀನತೆ (5)
9.ಮಂತ್ರ ಜಪಿಸುತ್ತ ರಹಸ್ಯವಾಗಿ ಕೂಡಿ ಮಾತಾಡುವುದು (5)
12.ಪತ್ತೇದಾರನಿಗೆ ಗೋಚರಿಸಿದ ಸ್ವರ! (3)
13.ಸಿನಿಕನ ಮೂಗಿದು (3)
15.ವನದಲ್ಲಿ ಬೀಸುತ್ತಿರುವ ಗಾಳಿ (3)
16.ಅಬಲೆ ನೋಡುತ್ತಿರುವ ತರಂಗ (2)
17.ಕಸವಿಸಿಗೊಂಡರೂ ರುಚಿ ಎಂದುಬಿಡಿ! (2)



4951ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿವಾದ 3.ಗುಮಾನಿ
5.ನರ 6.ರಿಪೇರಿ
7.ಯಮ 9.ಶಿಲಾರಸ
10.ಅನುಭಾವಿ 11.ತಟ
13.ಪರಾಗ 15.ಸರ
16.ಉಬ್ಧಕ 17.ದಶಕ

ಮೇಲಿಂದ ಕೆಳಕ್ಕೆ:
1.ವರದಿ 2.ದಳ್ಳುರಿ
3.ಗುಜರಿ 4.ನಿಶ್ಚಿತ
5.ನಖಶಿಖಾಂತ
8.ಮನೋವಿಕಾ ರ12.ಟಪಾಲು
13.ಪದಕ 14.ಗದ್ಗದ 15.ಸರೀಕ

ಸುಡೊಕು 5338

8		2		4		1		5
			8		9		6	
9		6			7	2		4
			1	6			2	
	2			7	3	8		6
				8				
		8		9	2	5		1
1		5	7					
2		3		5	1	9		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5337 ಸುಡೊಕು

2	8	3	5	7	9	1	4	6
5	1	4	6	2	8	7	3	9
7	6	9	4	1	3	8	5	2
3	2	8	1	9	4	6	7	5
6	5	1	7	3	2	9	8	4
4	9	7	8	5	6	3	2	1
9	4	2	3	6	7	5	1	8
1	3	6	2	8	5	4	9	7
8	7	5	9	4	1	2	6	3

ವಿದೇಶಿ ಬಂಡವಾಳ ಇಳಿಕೆ

ಮುಂಬೈ (ಪಿಟಿಐ): ರಾಷ್ಟ್ರೀಯ ಷೇರು ಪೇಟೆಯ ಟಾಪ್‌–500 ಕಂಪನಿಗಳಲ್ಲಿ ವಿದೇಶಿ ಹೂಡಿಕೆದಾರರ ಪಾಲು ಕೋವಿಡ್‌ಗೂ ಹಿಂದಿನ ಮಟ್ಟಕ್ಕೆ ಇಳಿಕೆಯಾಗಿದೆ. ವಿದೇಶಿ ಹೂಡಿಕೆದಾರರು ಈ ವರ್ಷದ ಮಾರ್ಚ್‌ನಲ್ಲಿ ಈ ಕಂಪನಿಗಳಲ್ಲಿ ಒಟ್ಟು ಶೇಕಡ 19.5ರಷ್ಟು ಪಾಲು ಹೊಂದಿದ್ದರು.

2019ರ ಮಾರ್ಚ್‌ನಲ್ಲಿ ವಿದೇಶಿ ಬಂಡವಾಳ ಹೂಡಿಕೆದಾರರು ಎನ್‌ಎಸ್‌ಇ–500 ಕಂಪನಿಗಳಲ್ಲಿ ಶೇಕಡ 19.3ರಷ್ಟು ಪಾಲು ಹೊಂದಿದ್ದರು ಎಂದು ಬ್ಯಾಂಕ್ ಆಫ್ ಅಮೆರಿಕಾ ಸೆಕ್ಯುರಿಟೀಸ್ ಹೇಳಿದೆ.

2017ರ ಡಿಸೆಂಬರ್‌ನಲ್ಲಿ ದೇಶದ ಬಂಡವಾಳ ಮಾರುಕಟ್ಟೆಯ ಷೇರುಗಳಲ್ಲಿ ವಿದೇಶಿ ಹೂಡಿಕೆದಾರರು ಶೇಕಡ 18.6ರಷ್ಟು ಪಾಲು ಹೊಂದಿದ್ದರು. ಇದು ಐದು ವರ್ಷಗಳ ಕನಿಷ್ಠ ಮಟ್ಟವಾಗಿತ್ತು. 2021ರ ಡಿಸೆಂಬರ್‌ನಲ್ಲಿ ಅವರು ಶೇ 21.4ರಷ್ಟು ಪಾಲು ಹೊಂದಿದ್ದು, ಐದು ವರ್ಷಗಳ ಗರಿಷ್ಠ ಮಟ್ಟ.

ವಿದೇಶಿ ಬಂಡವಾಳ ಹೂಡಿಕೆದಾರರು ಹೆಚ್ಚಿನ ಪಾಲನ್ನು ಇಂಧನ, ಮಾಹಿತಿ ತಂತ್ರಜ್ಞಾನ, ಸಂವಹನ ಸೇವೆ ವಲಯದ ಷೇರುಗಳಲ್ಲಿ ತೊಡಗಿಸಿದ್ದಾರೆ.

ವಿದೇಶಿ ಹೂಡಿಕೆದಾರರು ಭಾರತದಿಂದ ಬಂಡವಾಳ ಹಿಂದಕ್ಕೆ ಪಡೆಯುವುದು ನಿರಂತರವಾಗಿ ನಡೆಯುತ್ತಿದ್ದರೂ, ತಮ್ಮ ಒಟ್ಟು ಬಂಡವಾಳದಲ್ಲಿ ಭಾರತದಲ್ಲಿ ಹೂಡಿಕೆ ಮಾಡಲು ಮೀಸಲಿಡುವ ಪ್ರಮಾಣ ಏರಿಕೆ ಕಂಡಿದೆ. ಇದು 2021ರ ಜನವರಿಯಲ್ಲಿ ಶೇ 13.3ರಷ್ಟು ಇದ್ದಿದ್ದು, ಈ ವರ್ಷದ ಮಾರ್ಚ್‌ನಲ್ಲಿ ಶೇ 19ಕ್ಕೆ ಹೆಚ್ಚಾಗಿದೆ.

ಜಿಲ್ಲಾಧಿಕಾರಿಗಳಿಗೆ ಸಿ.ಎಂ. ತಾಕೀತು

ಒಂದನೇ ಪುಟದಿಂದ

ವಿವಿಧ ಜಿಲ್ಲೆಗಳಿಂದ 16,436 ಅರ್ಜಿಗಳು ಮುಖ್ಯಮಂತ್ರಿ ಕಚೇರಿಗೆ ಬಂದಿವೆ. ಅವುಗಳಲ್ಲಿ 10,000 ಅರ್ಜಿಗಳನ್ನು ಈಗಾಗಲೇ ಜಿಲ್ಲಾಧಿಕಾರಿಗಳ ಕಚೇರಿಗೆ ಕಳುಹಿಸಲಾಗಿದೆ. ಮುಖ್ಯಮಂತ್ರಿ ಕಚೇರಿಯಿಂದ ಬಂದ ಪತ್ರಗಳನ್ನು ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಂಡು, ಪ್ರತಿಕ್ರಿಯೆ ಸಲ್ಲಿಸಬೇಕು. ಸಮಸ್ಯೆ ಪರಿಹಾರಕ್ಕೆ ಸ್ಥಳೀಯವಾಗಿಯೇ ಕ್ರಮ ಕೈಗೊಳ್ಳಬೇಕು ಎಂದರು.

ಎಲ್ಲ ಜಿಲ್ಲಾಧಿಕಾರಿಗಳು ವಾರಕ್ಕೊಮ್ಮೆ ತಾಲ್ಲೂಕು ಕಚೇರಿಗಳಿಗೆ ಭೇಟಿ ನೀಡಬೇಕು. 'ಜಿಲ್ಲಾಧಿಕಾರಿಗಳ ನಡೆ– ಹಳ್ಳಿಯ ಕಡೆ' ಕಾರ್ಯಕ್ರಮದ ಭಾಗವಾಗಿ ತಿಂಗಳಿಗೊಮ್ಮೆ ಗ್ರಾಮ ವಾಸ್ತವ್ಯ ನಡೆಸುವುದು ಕಡ್ಡಾಯ ಎಂದು ಹೇಳಿದರು.

'ಗ್ರಾಮ ಒನ್' ಸೇರಿದಂತೆ ವಿವಿಧ ಸೇವಾ ಕೇಂದ್ರಗಳಲ್ಲಿ ಸಲ್ಲಿಕೆಯಾಗುವ ಅರ್ಜಿಗಳ ವಿಲೇವಾರಿ ಮೇಲೆ ನಿಗಾ ಇರಿಸಬೇಕು. 'ಭೂಮಿ' ಯೋಜನೆಯಡಿ ಸಲ್ಲಿಕೆಯಾಗುವ ಅರ್ಜಿಗಳನ್ನು 30 ದಿನಗಳೊಳಗೆ ವಿಲೇವಾರಿ ಮಾಡಬೇಕು ಎಂದರು.

ಟೆಂಡರ್‌ನಲ್ಲಿ ಕಟ್ಟೆಚ್ಚರ: ಅಮೃತ ನಗರೋತ್ಥಾನ ಯೋಜನೆಯಡಿ ಈಗಾಗಲೇ ಆರಂಭಿಸಿರುವ ಟೆಂಡರ್ ಪ್ರಕ್ರಿಯೆಗಳನ್ನುಕಾಲಮಿತಿಯೊಳಗೆಪೂರ್ಣಗೊಳಿಸಬೇಕು. ಬಾಕಿ ಇರುವ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್ ಕರೆಯಬೇಕು. 'ಅಮೃತ ನಿರ್ಮಲ ನಗರ' ಯೋಜನೆಯ ಟೆಂಡರ್ ಪ್ರಕ್ರಿಯೆಯನ್ನೂ ಚುರುಕುಗೊಳಿಸಬೇಕು. ಯಾವುದೇ ಕಾಮಗಾರಿಗೆ ಅತಿ ಕಡಿಮೆ ದರ ನಮೂದಿಸಿದ (ಎಲ್‌–1) ಬಿಡ್‌ದಾರರಿಗೆ ಗುತ್ತಿಗೆ ನೀಡಬೇಕು. ತಪ್ಪಿದರೆ ಟೆಂಡರ್ ರದ್ದುಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಎಚ್ಚರಿಕೆ ನೀಡಿದರು.

ಸಚಿವರಾದ ಗೋವಿಂದ ಕಾರಜೋಳ, ಆರ್. ಅಶೋಕ, ಸಿ.ಸಿ. ಪಾಟೀಲ, ಉಮೇಶ ಕತ್ತಿ, ಕೆ.ಸಿ. ನಾರಾಯಣಗೌಡ, ಕೆ.ಗೋಪಾಲಯ್ಯ, ಬಿ.ಸಿ.ನಾಗೇಶ್, ಬಿ.ಸಿ ಪಾಟೀಲ, ವಿ. ಸುನೀಲ್ ಕುಮಾರ್, ಪ್ರಭು ಚವ್ಹಾಣ್, ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಮತ್ತು ಹಿರಿಯ ಅಧಿಕಾರಿಗಳು ಸಭೆಯಲ್ಲಿದ್ದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಿನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ನಿಫ್ಟಿ ಮಿಡ್ ಕ್ಯಾಪ್ 150: ಹೂಡಿಕೆ ಹೇಗೆ?

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಉತ್ತಮ ಬೆಳವಣಿಗೆ ಸಾಧಿಸಿರುವ ಕಂಪನಿಗಳಲ್ಲಿ ಹೂಡಿಕೆ ಮಾಡಬೇಕೆಂದು ನಾವೆಲ್ಲರೂ ಬಯಸುತ್ತೇವೆ. ಏಕೆಂದರೆ, ಉತ್ತಮ ಕಂಪನಿಯೊಂದು ಲಾಭದಾಯಕವಾಗಿ ಮುನ್ನಡೆದರೆ ಹೂಡಿಕೆ ಮೊತ್ತ ಹಲವು ಪಟ್ಟು ಹೆಚ್ಚಾಗಿ ಸಂಪತ್ತು ಸೃಷ್ಟಿಸಲು ಸಾಧ್ಯವಾಗುತ್ತದೆ ಎನ್ನುವುದು ನಮ್ಮ ಲೆಕ್ಕಾಚಾರವಾಗಿರುತ್ತದೆ. ಹೀಗೆ ಹೆಚ್ಚು ಲಾಭಾಂಶ ತಂದುಕೊಡುವ ಕಂಪನಿಗಳನ್ನು ನಾವು ಷೇರುಪೇಟೆಯ ಮಿಡ್ ಕ್ಯಾಪ್ ಸೂಚ್ಯಂಕದಲ್ಲಿ ನೋಡಬಹುದು. ಮಿಡ್ ಕ್ಯಾಪ್ ಅಂದರೆ ಸರಳವಾಗಿ, ಷೇರುಪೇಟೆಯಲ್ಲಿರುವ ಮಧ್ಯಮ ಗಾತ್ರದ ಕಂಪನಿಗಳು ಎಂದು ಅರ್ಥ.

ಷೇರು ಮಾರುಕಟ್ಟೆಯಲ್ಲಿರುವ ಲಾರ್ಜ್ ಕ್ಯಾಪ್ (ದೊಡ್ಡ ಗಾತ್ರದ) ಕಂಪನಿಗಳು ಬಹಳಷ್ಟು ಬೆಳವಣಿಗೆ ಸಾಧಿಸಿವೆ. ಅವುಗಳಲ್ಲಿ ಹೂಡಿಕೆ ಮಾಡಿದಾಗ ಬಹಳ ದೊಡ್ಡ ಲಾಭ ನಿರೀಕ್ಷೆ ಮಾಡುವುದು ಕಷ್ಟ. ಆದರೆ, ಅವುಗಳಲ್ಲಿನ ಹೂಡಿಕೆಯಲ್ಲಿ ರಿಸ್ಕ್ ಕಡಿಮೆ ಎಂಬುದು ನಿಜ. ಮಧ್ಯಮ ಗಾತ್ರದ (ಮಿಡ್ ಕ್ಯಾಪ್) ಕಂಪನಿಗಳು ಬಂಡವಾಳ ವೃದ್ಧಿಯ ದೃಷ್ಟಿಯಿಂದ ಹೆಚ್ಚು ಆಕರ್ಷಕ. ಹಾಗೆಯೇ, ಇವುಗಳಲ್ಲಿನ ಹೂಡಿಕೆಯಲ್ಲಿ ರಿಸ್ಕ್ ತುಸು ಹೆಚ್ಚಿರುತ್ತದೆ ಎಂಬುದೂ ನಿಜ.

ನಿಫ್ಟಿ ಮಿಡ್ ಕ್ಯಾಪ್ 150 ಏಕೆ ಮುಖ್ಯ?: ನೀವು ನಿಫ್ಟಿ 50 (50 ದೊಡ್ಡ ಕಂಪನಿಗಳ ಗುಚ್ಛ) ಸೂಚ್ಯಂಕ ಮತ್ತು ನಿಫ್ಟಿ ಮಿಡ್ ಕ್ಯಾಪ್ 150 ಸೂಚ್ಯಂಕವನ್ನು ಹೋಲಿಕೆ ಮಾಡಿ ನೋಡಿದಾಗ ಕಳೆದ ಮೂರು ವರ್ಷಗಳಲ್ಲಿ ನಿಫ್ಟಿ ಮಿಡ್ ಕ್ಯಾಪ್ 150 (150 ಮಧ್ಯಮ ಗಾತ್ರದ ಕಂಪನಿಗಳ ಗುಚ್ಛ) ಸೂಚ್ಯಂಕ ವಾರ್ಷಿಕ ಸರಾಸರಿ ಶೇಕಡ 22ರಷ್ಟು ಲಾಭಾಂಶ ಕೊಟ್ಟಿರುವುದು ಕಂಡುಬರುತ್ತದೆ. ಆದರೆ, ನಿಫ್ಟಿ 50 ಸೂಚ್ಯಂಕ ವಾರ್ಷಿಕ ಸರಾಸರಿ ಶೇ 16ರಷ್ಟು ಮಾತ್ರ ಲಾಭಾಂಶ ನೀಡಿದೆ. ದೀರ್ಘಾವಧಿಯಲ್ಲಿ ಎರಡೂ ಸೂಚ್ಯಂಕಗಳ ಬೆಳವಣಿಗೆಯನ್ನು ತುಲನೆ ಮಾಡಿ ನೋಡಿಗದಾಗಲೂ ನಿಫ್ಟಿ ಮಿಡ್ ಕ್ಯಾಪ್ 150 ಸೂಚ್ಯಂಕ ಉತ್ತಮ ರೀತಿಯಲ್ಲಿ ಮುನ್ನಡೆದಿರುವುದು ಕಂಡುಬರುತ್ತದೆ.

ನಿಮ್ಮ ಹೂಡಿಕೆ ತಂತ್ರಗಾರಿಕೆಯಲ್ಲಿ ಮಧ್ಯಮ ಗಾತ್ರದ ಕಂಪನಿಗಳನ್ನು ಪರಿಗಣಿಸಬಹುದು ಎನ್ನುವುದನ್ನು ಮೇಲಿನ ಅಂಶಗಳು ಸ್ಪಷ್ಟವಾಗಿ ಹೇಳುತ್ತವೆ. ಹಾಗೆಂದಮಾತ್ರಕ್ಕೆ ಕಣ್ಣು ಮುಚ್ಚಿ ಮಿಡ್ ಕ್ಯಾಪ್ ಷೇರುಗಳಲ್ಲಿ ಹೂಡಿಕೆ ಮಾಡುವುದಲ್ಲ. ಅದರ ಸಾಧಕ-ಬಾಧಕ ಅರಿತು ಮುನ್ನಡೆಯಬೇಕು.

ಮೌಲ್ಯಮಾಪನ ಹೇಗೆ?: ನಿಫ್ಟಿ 500 ಸೂಚ್ಯಂಕ ಎನ್ನುವುದು ರಾಷ್ಟ್ರೀಯ ಷೇರುಪೇಟೆಯಲ್ಲಿನ (ಎನ್‌ಎಸ್‌ಇ) ಟಾಪ್ 500 ಕಂಪನಿಗಳ ಪಟ್ಟಿ. ಈ ಪಟ್ಟಿಯಲ್ಲಿ ಬರುವ ಮೊದಲ ನೂರು ಕಂಪನಿಗಳು ನಿಫ್ಟಿ 100 ಸೂಚ್ಯಂಕಕ್ಕೆ ಸೇರ್ಪಡೆಗೊಳ್ಳುತ್ತವೆ. ಹಾಗೆಯೇ ನಿಫ್ಟಿ ಪಟ್ಟಿಯಲ್ಲಿರುವ 101ರಿಂದ 250ನೇ ಸಂಖ್ಯೆವರೆಗಿನ ಕಂಪನಿಗಳು ನಿಫ್ಟಿ ಮಿಡ್ ಕ್ಯಾಪ್ 150 ಸೂಚ್ಯಂಕದ ಭಾಗ. ವಿವಿಧ ವಲಯಗಳ ಕಂಪನಿಗಳು ನಿಫ್ಟಿ ಮಿಡ್ ಕ್ಯಾಪ್ 150 ಸೂಚ್ಯಂಕದಲ್ಲಿ ಸ್ಥಾನ ಪಡೆದಿರುತ್ತವೆ. ಕಂಪನಿಯೊಂದರ ಷೇರಿನ ಬೆಲೆಯನ್ನು, ಕಂಪನಿಯ ಎಲ್ಲ ಷೇರುದಾರರ ಬಳಿ ಇರುವ ಒಟ್ಟು ಷೇರುಗಳ ಜೊತೆ ಗುಣಿಸಿದಾಗ ಬರುವ ಸಂಖ್ಯೆಯು ಆ ಕಂಪನಿಯ ಮಾರುಕಟ್ಟೆ ಮೌಲ್ಯ, ಅಂದರೆ ಮಾರ್ಕೆಟ್ ಕ್ಯಾಪ್ ಆಗಿರುತ್ತದೆ. ಉದಾಹರಣೆಗೆ ಕಂಪನಿಯೊಂದರ 1 ಲಕ್ಷ ಷೇರುಗಳು ಇದ್ದು, ಪ್ರತಿ ಷೇರಿನ ಬೆಲೆ ₹ 30 ಎಂದಾದಲ್ಲಿ ಆ ಕಂಪನಿಯ ಮಾರುಕಟ್ಟೆ ಮೌಲ್ಯ ₹ 30 ಲಕ್ಷ ಆಗಿರುತ್ತದೆ. ಹೀಗೆ ಒಂದೊಂದು ವಲಯದ ಕಂಪನಿಯೂ ತನ್ನ ಮಾರುಕಟ್ಟೆ ಮೌಲ್ಯದ ಆಧಾರದಲ್ಲಿ ಸೂಚ್ಯಂಕದಲ್ಲಿ ಸ್ಥಾನ ಪಡೆದುಕೊಳ್ಳುತ್ತದೆ. ಉದಾಹರಣೆಗೆ ಈ ವರ್ಷದ ಮಾರ್ಚ್ 31ರ ಅಂಕಿ-ಅಂಶದಂತೆ ಅದಾನಿ ಟೋಟಲ್ ಗ್ಯಾಸ್ ಲಿಮಿಟೆಡ್ ಮಾರುಕಟ್ಟೆ ಮೌಲ್ಯ ಸುಮಾರು ₹ 2.5 ಲಕ್ಷ ಕೋಟಿ. ಈ ಷೇರಿನ ಮಾರುಕಟ್ಟೆ ಮೌಲ್ಯ ಹೆಚ್ಚಿರುವುದರಿಂದ ಸೂಚ್ಯಂಕದಲ್ಲಿ ಇದಕ್ಕೆ ಪ್ರಾಧಾನ್ಯತೆ ಹೆಚ್ಚು.

ಮಿಡ್ ಕ್ಯಾಪ್ 150 ಸೂಚ್ಯಂಕದ ಲಾಭಾಂಶ: ಷೇರು ಹೂಡಿಕೆಯಲ್ಲಿ ಏರಿಳಿತ ಸಾಮಾನ್ಯ. ನಿಫ್ಟಿ ಮಿಡ್ ಕ್ಯಾಪ್ 150 ಸೂಚ್ಯಂಕ ಕೂಡ ಇದಕ್ಕೆ ಹೊರತಾಗಿಲ್ಲ. ಆದರೆ ದೀರ್ಘಾವಧಿಯಲ್ಲಿ ಈ ಸೂಚ್ಯಂಕ ಉತ್ತಮ ಲಾಭಾಂಶ ನೀಡಿದೆ. ಕಳೆದ 15 ವರ್ಷಗಳಲ್ಲಿ ನಿಫ್ಟಿ ಮಿಡ್ ಕ್ಯಾಪ್ 150 ಸೂಚ್ಯಂಕ ಸರಾಸರಿ ಶೇ 16.5ರಷ್ಟು ಲಾಭಾಂಶ ನೀಡಿದೆ. ಅಂದರೆ ಕಳೆದ 15 ವರ್ಷಗಳಿಂದ ಪ್ರತಿ ತಿಂಗಳು ನೀವು ₹ 10 ಸಾವಿರ ಹೂಡಿಕೆ ಮಾಡಿದ್ದರೆ 2022ರ ಮಾರ್ಚ್ ವೇಳೆಗೆ ಅದು ₹ 78 ಲಕ್ಷ ಆಗಿರುತ್ತಿತ್ತು.

ಫಂಡ್ ಮ್ಯಾನೇಜರ್‌ಗಳು ನಿರ್ವಹಣೆ ಮಾಡುವ ಆ್ಯಕ್ಟಿವ್ ಮಿಡ್ ಕ್ಯಾಪ್ ಫಂಡ್‌ಗಳು ಕಳೆದ 15 ವರ್ಷಗಳಲ್ಲಿ ವಾರ್ಷಿಕ ಸರಾಸರಿ ಶೇ 14ರಷ್ಟು ಮಾತ್ರ ಲಾಭಾಂಶ ನೀಡಿವೆ. ಅಂದರೆ ನಿಫ್ಟಿ ಮಿಡ್ ಕ್ಯಾಪ್ 150 ಸೂಚ್ಯಂಕ ಶೇ 2.5ರಷ್ಟು ಹೆಚ್ಚು ಲಾಭಾಂಶ ನೀಡಿದೆ. ಒಟ್ಟಾರೆಯಾಗಿ, ಟಾಪ್ ಮ್ಯೂಚುವಲ್ ಫಂಡ್ ಯಾವುದು ಎಂದು ಹುಡುಕಾಡುವ ಬದಲು ಈ ರೀತಿಯ ಉತ್ತಮ ಇಂಡೆಕ್ಸ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದರೆ ದೀರ್ಘಾವಧಿಯಲ್ಲಿ ಒಳ್ಳೆಯ ಇಡುಗಂಟು ಸೃಷ್ಟಿಸಲು ಸಾಧ್ಯವಾಗುತ್ತದೆ.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಕರಡಿ ಹಿಡಿತದಲ್ಲಿ ಷೇರುಪೇಟೆ

ಷೇರು ಮಾರುಕಟ್ಟೆಯ ಮೇಲೆ ಕರಡಿ ಹಿಡಿತ ಜೋರಾಗಿದ್ದು ಸೂಚ್ಯಂಕಗಳು ಸತತ ನಾಲ್ಕನೇ ವಾರವೂ ಕುಸಿತ ಕಂಡಿವೆ. ಮೇ 6ಕ್ಕೆ ಕೊನೆಗೊಂಡ ವಾರದಲ್ಲಿ ನಿಫ್ಟಿ ಮತ್ತು ಸೆನ್ಸೆಕ್ಸ್ ಸೂಚ್ಯಂಕಗಳು ಭಾರೀ ಇಳಿಕೆ ದಾಖಲಿಸಿವೆ. 54,835 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 3.89ರಷ್ಟು ತಗ್ಗಿದೆ. 16,411 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 4.04ರಷ್ಟು ಇಳಿಕೆಯಾಗಿದೆ. ಜಾಗತಿಕವಾಗಿ ಅಮೆರಿಕದ ಫೆಡರಲ್ ರಿಸರ್ವ್ ಸೇರಿದಂತೆ ಪ್ರಮುಖ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿ ದರ ಹೆಚ್ಚಳ ಮಾಡುತ್ತಿರುವುದು, ಭಾರತೀಯ ರಿಸರ್ವ್ ಬ್ಯಾಂಕ್ ರೆಪೊ ದರ ಹೆಚ್ಚಳ ಮಾಡಿದ್ದು, ಹಣದುಬ್ಬರ ಏರಿಕೆ, ರಷ್ಯಾ-ಉಕ್ರೇನ್ ಬಿಕ್ಕಟ್ಟು ಸೇರಿದಂತೆ ಹಲವು ಕಾರಣಗಳಿಗೆ ಸೂಚ್ಯಂಕಗಳು ಕುಸಿದಿವೆ.

ವಲಯವಾರು ಪ್ರಗತಿಯಲ್ಲಿ ಈ ವಾರ ಎಲ್ಲ ಕ್ಷೇತ್ರಗಳಲ್ಲಿಯೂ ಕುಸಿತ ಕಂಡುಬಂದಿದೆ. ನಿಫ್ಟಿ ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 8ರಷ್ಟು ಕುಸಿದಿದೆ. ಮಾಧ್ಯಮ ವಲಯ ಶೇ 6ರಷ್ಟು, ವಾಹನ ಉತ್ಪಾದನಾ ವಲಯ ಶೇ 5ರಷ್ಟು, ನಿಫ್ಟಿ ಫಾರ್ಮಾ ವಲಯ ಶೇ 4.7ರಷ್ಟು ತಗ್ಗಿವೆ.

ಏರಿಕೆ–ಇಳಿಕೆ: ನಿಫ್ಟಿಯಲ್ಲಿ ಪವರ್ ಗ್ರಿಡ್ ಶೇ 5ರಷ್ಟು, ಒಎನ್‌ಜಿಸಿ ಶೇ 4ರಷ್ಟು, ಐಟಿಸಿ ಶೇ 2.7ರಷ್ಟು, ಟೆಕ್ ಮಹೀಂದ್ರ ಶೇ 2.5ರಷ್ಟು ಗಳಿಕೆ ದಾಖಲಿಸಿವೆ. ಅಪೋಲೊ ಹಾಸ್ಪಿಟಲ್ಸ್ ಶೇ 14ರಷ್ಟು, ಐಷರ್ ಮೋಟರ್ಸ್ ಶೇ 10ರಷ್ಟು, ಟೈಟನ್ ಶೇ 10ರಷ್ಟು, ಬಜಾಜ್ ಫೈನಾನ್ಸ್ ಶೇ 10.5ರಷ್ಟು, ಬಜಾಜ್ ಫಿನ್‌ಸರ್ವ್ ಶೇ 8.5ರಷ್ಟು ಮತ್ತು ಹಿಂಡಾಲ್ಕೊ ಶೇ 8ರಷ್ಟು ಕುಸಿತ ಕಂಡಿವೆ.

ಮುನ್ನೋಟ: ಜಾಗತಿಕವಾಗಿ ಪ್ರಮುಖ ದೇಶಗಳ ಬ್ಯಾಂಕ್‌ಗಳು ಬಡ್ಡಿ ದರ ಹೆಚ್ಚಳ ಮಾಡುತ್ತಿರುವುದರಿಂದ ಷೇರುಪೇಟೆಯಲ್ಲಿ ಸದ್ಯ ಸಕಾರಾತ್ಮಕತೆ ಕಂಡುಬರುವುದು ಕಷ್ಟ. ದೊಡ್ಡ ಕಂಪನಿಗಳ (ಲಾರ್ಜ್ ಕ್ಯಾಪ್) ಷೇರುಗಳೇ ಶೇ 20ರಿಂದ ಶೇ 30ರ ವರೆಗೆ ಕುಸಿತ ಕಾಣುತ್ತಿದ್ದು ಮಾರುಕಟ್ಟೆ ಯಾವ ದಿಕ್ಕಿನಲ್ಲಿ ಸಾಗಿದೆ ಎನ್ನುವುದು ಎಣಿಕೆಗೆ ಸಿಗುತ್ತಿಲ್ಲ. ಈಗಿನ ಮಟ್ಟಿಗೆ ಹೂಡಿಕೆದಾರರು ಬಂಡವಾಳ ರಕ್ಷಣೆಗೆ ಹೆಚ್ಚು ಒತ್ತು ಕೊಡುವುದು ಅತ್ಯಗತ್ಯ. ಹೆಚ್ಚು ಲಾಭಾಂಶ (ಡಿವಿಡೆಂಟ್) ಕೊಡುವ ಷೇರುಗಳನ್ನು ಹೂಡಿಕೆಗೆ ಪರಿಗಣಿಸಿದರೆ ತೊಂದರೆ ಇಲ್ಲ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ ₹375

12 ಮೊಟ್ಟೆಗೆ ₹55

ಮೈಸೂರು

100 ಮೊಟ್ಟೆಗೆ ₹375

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹255-555

ದ್ವಿತಳಿ (ಬಿ.ವಿ) ₹210-706

'ಫ್ಯೂಚರ್'ನಿಂದ ಸಾಲ ತಗ್ಗಿಸುವ ಯತ್ನ

ವಿಮಾ ವಹಿವಾಟು ಮಾರಾಟದಿಂದ ₹ 3 ಸಾವಿರ ಕೋಟಿ ಸಂಗ್ರಹ ನಿರೀಕ್ಷೆ

ನವದೆಹಲಿ (ಪಿಟಿಐ): ಫ್ಯೂಚರ್ ಎಂಟರ್‌ಪ್ರೈಸಸ್ ಲಿಮಿಟೆಡ್ ಕಂಪನಿಯು ತನ್ನ ಸಾಲವನ್ನು ಕಡಿಮೆ ಮಾಡಿಕೊಳ್ಳುವ ಮೂಲಕ ದಿವಾಳಿ ಪ್ರಕ್ರಿಯೆಯಿಂದ ಹೊರಬರುವ ಪ್ರಯತ್ನದಲ್ಲಿದೆ ಎಂದು ಮೂಲಗಳು ಹೇಳಿವೆ.

ಈ ಉದ್ದೇಶಕ್ಕಾಗಿ, ವಿಮಾ ವಹಿವಾಟಿನಲ್ಲಿ ಹೊಂದಿರುವ ಷೇರುಪಾಲಿನಲ್ಲಿ ಒಂದಷ್ಟನ್ನು ಮಾರಾಟ ಮಾಡಿ ₹ 3 ಸಾವಿರ ಕೋಟಿ ಸಂಗ್ರಹಿಸಲು ಮುಂದಾಗಿದೆ ಎಂದು ತಿಳಿಸಿವೆ.

ಕಂಪನಿಯು ಫ್ಯೂಚರ್ ಜನರಲಿ ಇಂಡಿಯಾ ಇನ್ಶುರೆನ್ಸ್ ಕಂಪನಿ ಲಿಮಿಟೆಡ್‌ನಲ್ಲಿ (ಎಫ್‌ಜಿಐಐಸಿಎಲ್) ಹೊಂದಿರುವ ಷೇರುಪಾಲಿನಲ್ಲಿ ಶೇ 25ರಷ್ಟನ್ನು ತನ್ನ ಜಂಟಿ ಪಾಲುದಾರ ಜನರಲಿ ಕಂಪನಿಗೆ ₹ 1,266 ಕೋಟಿಗೆ ಗುರುವಾರ ಮಾರಾಟ ಮಾಡಿದೆ. ಈ ಒಪ್ಪಂದ ಪೂರ್ಣಗೊಂಡ ಬಳಿಕ 'ಎಫ್‌ಜಿಐಐಸಿಎಲ್'ನಲ್ಲಿ ಕಂಪನಿಯ ಷೇರುಪಾಲು ಶೇ 24.91ರಷ್ಟು ಉಳಿಯಲಿದೆ.

ಮುಂದಿನ 30ರಿಂದ 40 ದಿನಗಳಲ್ಲಿ ಇನ್ನುಳಿದ ಷೇರುಗಳನ್ನೂ ₹ 1,250 ಕೋಟಿಗೆ ಮಾರಾಟ ಮಾಡಲಿದೆ. ಅಲ್ಲದೆ, ಫ್ಯೂಚರ್ ಜನರಲಿ ಇಂಡಿಯಾ ಲೈಫ್ ಇನ್ಶುರೆನ್ಸ್ ಕಂಪನಿ ಲಿಮಿಟೆಡ್‌ನ ಶೇ 33.3ರಷ್ಟು ಷೇರುಗಳನ್ನು ಸಹ ಮಾರಾಟ ಮಾಡುವ ಆಲೋಚನೆ ಹೊಂದಿದೆ ಎಂದು ಹೇಳಿವೆ.

ಪ್ರತ್ಯೇಕ ಒಪ್ಪಂದವೊಂದರಲ್ಲಿ ಜೀವ ವಿಮಾ ವಹಿವಾಟಿನ ಶೇ 33ರಷ್ಟು ಷೇರುಪಾಲನ್ನು ಜನರಲಿ ಕಂಪನಿಗೆ ಮತ್ತು ದೇಶದ ಇನ್ನೊಂದು ಕಂಪನಿಗೆ ₹ 400 ಕೋಟಿಗೆ ಮಾರಾಟ ಮಾಡಲಿದೆ. ಈ ಮೂಲಕ ಕಿಶೋರ್ ಬಿಯಾನಿ ನೇತೃತ್ವದ ಸಮೂಹ ಸಂಸ್ಥೆಯು ಸಂಪೂರ್ಣವಾಗಿ ವಿಮಾ ವಲಯದಿಂದ ಹೊರಬರಲಿದೆ ಎಂದು ಮೂಲಗಳು ತಿಳಿಸಿವೆ.

ಕಂಪನಿಯು ಮಾರ್ಚ್ 31ರ ಒಳಗೆ ₹ 2,911 ಕೋಟಿ ಸಾಲ ಮರುಪಾವತಿಸಲು ವಿಫಲವಾಗಿದೆ. ಕಂಪನಿಯ ಒಟ್ಟಾರೆ ಸಾಲವು ₹ 6,778 ಕೋಟಿ ಇದೆ.

ಮುಖ್ಯಾಂಶಗಳು

- ಸಾಲದ ಸುಳಿಯಲ್ಲಿ ಫ್ಯೂಚರ್ ಎಂಟರ್‌ಪ್ರೈಸಸ್
- ವಿಮಾ ಕ್ಷೇತ್ರದಿಂದ ಹೊರಬರಲು ಸಿದ್ಧತೆ
- ದಿವಾಳಿ ಪ್ರಕ್ರಿಯೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನ

ಪೂರ್ವ ಉಕ್ರೇನಿನ ಲುಹಾನ್‌ಸ್ಕ್ ಪ್ರಾಂತ್ಯದ ಮೇಲೆ ರಷ್ಯಾ ವಾಯು ದಾಳಿ

ಶಾಲೆ ಮೇಲೆ ಬಾಂಬ್: 60 ಮಂದಿ ಸಾವು

ಲುಹಾನ್‌ಸ್ಕ್/ಮಾಸ್ಕೊ (ಎಎಫ್‌ಪಿ/ರಾಯಿಟರ್ಸ್): ಉಕ್ರೇನ್ ಮೇಲೆ ವಿಶೇಷ ಸೇನಾ ಕಾರ್ಯಾಚರಣೆ ನಡೆಸುತ್ತಿರುವ ರಷ್ಯಾ, ಭಾನುವಾರ ಪೂರ್ವದ ಹಳ್ಳಿಯಲ್ಲಿನ ಶಾಲೆ ಮೇಲೆ ಬಾಂಬ್ ದಾಳಿ ನಡೆಸಿದ್ದು, 60 ಮಂದಿ ಮೃತಪಟ್ಟಿದ್ದಾರೆ.

'ಬಿಲೊಹೊರಿವ್ಕಾ ಗ್ರಾಮದ ಶಾಲೆಯೊಂದರಲ್ಲಿ 90 ನಾಗರಿಕರು ಆಶ್ರಯ ಪಡೆದಿದ್ದರು. ರಷ್ಯಾ ವಾಯು ಪಡೆ ನಡೆಸಿದ ಬಾಂಬ್ ದಾಳಿಯಲ್ಲಿ ಶಾಲಾ ಕಟ್ಟಡ ಧ್ವಂಸವಾಗಿದ್ದು, 30 ನಾಗರಿಕರನ್ನು ರಕ್ಷಿಸಲು ಮಾತ್ರ ಸಾಧ್ಯವಾಯಿತು. 60 ನಾಗರಿಕರು ಸಾವಿಗೀಡಾಗಿದ್ದಾರೆ. ಅವಶೇಷಗಳಡಿ ಸಿಲುಕಿರುವ ಶವಗಳನ್ನು ಹೊರತೆಗೆಯುವ ಕಾರ್ಯಾಚರಣೆ ನಡೆಯುತ್ತಿದೆ' ಎಂದು ಲುಹಾನ್‌ಸ್ಕ್ ಪ್ರಾದೇಶಿಕ ಗವರ್ನರ್ ಸೆರಿಹಿ ಹೈದೈ 'ಟೆಲಿಗ್ರಾಮ್'ನಲ್ಲಿ ತಿಳಿಸಿದ್ದಾರೆ.

ಅಲ್ಲದೇ, ಹತ್ತಿರದ ಪ್ರಿವಿಲ್ಲಿಯಾ ಪಟ್ಟಣದ ಮೇಲೆ ರಷ್ಯಾ ಪಡೆಗಳು ನಡೆಸಿದ ಶೆಲ್ ದಾಳಿಗೆ 11 ಮತ್ತು 14 ವರ್ಷದ ಇಬ್ಬರು ಮಕ್ಕಳು ಮೃತಪಟ್ಟಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಉಕ್ರೇನಿನ ಸಮರನೌಕೆ ನಾಶ: ಒಡೆಸಾ ಬಂದರು ಬಳಿ ಉಕ್ರೇನ್ ನೌಕಾಪಡೆಯ ಹಡಗಿನ ಮೇಲೆ ರಾತ್ರಿ ಕ್ಷಿಪಣಿ ದಾಳಿ ನಡೆಸಿ, ನಾಶಪಡಿಸಲಾಗಿದೆ ಎಂದು ರಷ್ಯಾ ರಕ್ಷಣಾ ಸಚಿವಾಲಯ ಭಾನುವಾರ ತಿಳಿಸಿದೆ.

ರಷ್ಯಾದ ಉಪ ಪ್ರಧಾನಿ ಖುಸ್‌ನುಲ್ಲಿನ್ ಅವರು ವೊಲ್ನೊವಾಖಾದಲ್ಲಿ ಸಹಜ ಸ್ಥಿತಿಯ ಮರುಸ್ಥಾಪನೆ ಪರಿಶೀಲಿಸಲು ಆಕ್ರಮಿತ ಮರಿಯುಪೋಲ್ ನಗರಕ್ಕೆ ಭಾನುವಾರ ಭೇಟಿ ನೀಡಿದರು ಎಂದು ಡಾನ್‌ಬಾಸ್ ಗಣರಾಜ್ಯದ ಮುಖ್ಯಸ್ಥ ತಿಳಿಸಿದ್ದಾರೆ.

ಕೆನಡಾ ಪ್ರಧಾನಿ ಭೇಟಿ: ಕೆನಡಾದ ಪ್ರಧಾನಿ ಜಸ್ಟಿನ್ ಟ್ರುಡೊ ಉಕ್ರೇನ್‌ನ ಇರ್ಪಿನ್ ನಗರಕ್ಕೆ ಭಾನುವಾರ ದಿಢೀರ್ ಭೇಟಿ ನೀಡಿದರು. ಅಧ್ಯಕ್ಷ ಝೆಲೆನ್‌ಸ್ಕಿ ಅವರನ್ನು ಭೇಟಿ ಮಾಡಿ, ನೆರವು ನೀಡುವುದಾಗಿ ವಾಗ್ದಾನ ನೀಡಿದರು.

ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರ ಪತ್ನಿ, ದೇಶದ ಪ್ರಥಮ ಮಹಿಳೆ ಜಿಲ್ ಬೈಡನ್ ಅವರು ಭಾನುವಾರ ಉಕ್ರೇನ್‌ಗೆ ಅನಿರೀಕ್ಷಿತ ಭೇಟಿ ನೀಡಿದರು. ತಾಯಂದಿರ ದಿನದ ಅಂಗವಾಗಿ ಝೆಲೆನ್‌ಸ್ಕಿ ಅವರ ಪತ್ನಿ, ಉಕ್ರೇನಿನ ಪ್ರಥಮ ಮಹಿಳೆ ಒಲೆನಾ ಝೆಲೆನ್‌ಸ್ಕಿ ಅವರೊಂದಿಗೆ ಅಚ್ಚರಿಯ ಸಭೆ ನಡೆಸಿದರು. ಉಕ್ರೇನಿನ ಪೂರ್ವ ಪ್ರದೇಶಗಳಲ್ಲಿ ರಷ್ಯಾ ದಾಳಿ ಹೆಚ್ಚಿಸಿರುವ ನಡುವೆಯೇ ಜಿಲ್ ಅವರು, ಹಳ್ಳಿಯ ಶಾಲೆಗೂ ಭೇಟಿ ನೀಡಿದರು.

ಬಡ್ಡಿದರ ಹೆಚ್ಚಿಸಿದ ಕೆನರಾ ಬ್ಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್ ಶನಿವಾರದಿಂದ ಜಾರಿಗೆ ಬರುವಂತೆ ವಿವಿಧ ಸಾಲಗಳ ಮೇಲಿನ ಬಡ್ಡಿ ದರ ಹೆಚ್ಚಿಸಿದೆ.

ಎಂಸಿಎಲ್‌ಆರ್ ಅನ್ನು ಶೇಕಡ 0.10ರಷ್ಟು ಏರಿಕೆ ಮಾಡಿದೆ. ಇದರಿಂದ ಒಂದು ತಿಂಗಳ ಅವಧಿಯ ಎಂಸಿಎಲ್‌ಆರ್ ಶೇ 6.55ರಿಂದ ಶೇ 6.65ಕ್ಕೆ ಏರಿಕೆ ಆಗಿದೆ. ಒಂದು ವರ್ಷದ ಎಂಸಿಎಲ್‌ಆರ್ ಶೇ 7.25ರಿಂದ 7.35ಕ್ಕೆ ಹೆಚ್ಚಾಗಿದೆ. ರೆಪೊ ದರ ಆಧರಿಸಿದ ಸಾಲದ ಬಡ್ಡಿದರವು ಶೇ 6.90ರಿಂದ ಶೇ 7.30ಕ್ಕೆ ಏರಿಕೆ ಕಂಡಿದೆ.

26 ಬಾರಿ ಎವರೆಸ್ಟ್ ಏರಿದ ಶೆರ್ಪಾ

ಕಠ್ಮಂಡು (ಪಿಟಿಐ): ನೇಪಾಳಿ ಶೆರ್ಪಾ ಜನಾಂಗದ ಕಾಮಿ ರಿಟಾ ಎಂಬುವವರು 26 ಬಾರಿ ಮೌಂಟ್ ಎವರೆಸ್ಟ್ ಏರುವ ಮೂಲಕ ಅತಿ ಹೆಚ್ಚು ಬಾರಿ ಎವರೆಸ್ಟ್ ಏರಿದ ಪರ್ವತಾರೋಹಿ ಎಂಬ ದಾಖಲೆ ನಿರ್ಮಿಸಿದ್ದಾರೆ.


ಕಾಮಿ ರಿಟಾ

'52 ವರ್ಷದ ರಿಟಾ ಹಾಗೂ ಆತನ 11 ಮಂದಿ ಶೆರ್ಪಾ ಮಾರ್ಗದರ್ಶಕರ ತಂಡದವರು ಭಾನುವಾರ 21,031.69 ಅಡಿ ಎತ್ತರವನ್ನು ಏರಿದ್ದಾರೆ. ರಿಟಾ ಅವರು ತಮ್ಮ ಹಿಂದಿನ ದಾಖಲೆಯನ್ನು ತಾವೇ ಮುರಿದಿದ್ದಾರೆ' ಎಂದು ಪರ್ವತಾರೋಹಣ ಆಯೋಜಕ ಸಂಸ್ಥೆಯಾದ ಸೆವೆನ್ ಸಮ್ಮಿಟ್ ಟ್ರೆಕ್ಸ್ ಪ್ರೈ.ಲಿ.ನ ವ್ಯವಸ್ಥಾಪಕ ದಾವಾ ಶೆರ್ಪಾ ತಿಳಿಸಿದರು.

ಶ್ರೀಲಂಕಾ ಪ್ರಧಾನಿಗೆ ಫಲಕ ಪ್ರದರ್ಶನ

ಕೊಲಂಬೊ(ಎಎಫ್‌ಪಿ): ದೇಶದ ಆರ್ಥಿಕ ಬಿಕ್ಕಟ್ಟು ನಿಭಾಯಿಸಲಾಗದ ರಾಜಪಕ್ಸ ಕುಟುಂಬಸ್ಥರು ಅಧಿಕಾರದಿಂದ ಕೆಳಗಿಳಿಯಬೇಕು ಎಂದು ಒತ್ತಾಯಿಸಿ ದೇಶದಾದ್ಯಂತ ಶ್ರೀಲಂಕಾ ಪ್ರಜೆಗಳ ಪ್ರತಿಭಟನೆ ಆರಂಭವಾದ ಬಳಿಕ, ಪ್ರಧಾನಿ ಮಹಿಂದಾ ರಾಜಪಕ್ಸ ಅವರು ಇದೇ ಮೊದಲ ಬಾರಿಗೆ ಭಾನುವಾರ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದಾರೆ. ಈ ವೇಳೆ ಅವರು ಪ್ರತಿಭಟನನಿರತರಿಂದ ಭಾರಿ ಪ್ರತಿರೋಧ ಎದುರಿಸಿದ್ದಾರೆ.

ಪ್ರಧಾನಿ ರಾಜಪಕ್ಸ ಅವರು ಭಾನುವಾರ ಅನುರಾಧಪುರದಲ್ಲಿರುವ 2300 ವರ್ಷಗಳ ಇತಿಹಾಸವಿರುವ ಬೌದ್ಧ ಮಂದಿರಕ್ಕೆ ಬಂದಿದ್ದರು. ಈ ವೇಳೆ ಪ್ರತಿಭಟನಕಾರರು ಅವರ ಮೇಲೆ ನಿರ್ಬಂಧ ಹೇರಬೇಕು ಎಂಬ ಫಲಕಗಳನ್ನು ಪ್ರದರ್ಶಿಸಿ, ಘೋಷಣೆ ಕೂಗಿದರು. ಪ್ರಧಾನಿ ಭದ್ರತೆಗಾಗಿ ವಿಶೇಷ ಕಾರ್ಯಪಡೆ(ಎಸ್‌ಟಿಎಫ್)ಯ ಭಾರಿ ಪ್ರಮಾಣದ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು.

ಅಡುಗೆ ಅನಿಲ, ಪೆಟ್ರೋಲ್, ಮತ್ತು ಡೀಸೆಲ್ ಕೊರತೆ ವಿರೋಧಿಸಿ ದೇಶದ ಬಹುತೇಕ ಭಾಗಗಳಲ್ಲಿ ನಿರಂತರವಾಗಿ ಪ್ರತಿಭಟನೆಗಳು ನಡೆಯುತ್ತಿರುವ ಕಾರಣ, ಪ್ರಧಾನಿ ಮಹಿಂದಾ ರಾಜಪಕ್ಸ ಅವರು ಹೆಲಿಕಾಪ್ಟರ್ ಮೂಲಕ ರಾಜಧಾನಿ ಕೊಲಂಬೊಕ್ಕೆ ಹಿಂದಿರುಗಿದರು.

ರಜೆ ರದ್ದು: ದೇಶದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಲು ಭದ್ರತಾ ಸಿಬ್ಬಂದಿಯ ರಜೆಯನ್ನು ರದ್ದುಗೊಳಿಸಿ ರಕ್ಷಣಾ ಸಚಿವಾಲಯ ಆದೇಶ ಹೊರಡಿಸಿದೆ.

ಈ ಮಧ್ಯೆ ಚೀನಾದ ಏಷ್ಯನ್ ಇನ್‌ಫ್ರಾಸ್ಟ್ರಕ್ಚರ್ ಇನ್ವೆಸ್ಟ್‌ಮೆಂಟ್ ಬ್ಯಾಂಕ್ ಶ್ರೀಲಂಕಾಕ್ಕೆ ₹76 ಸಾವಿರ ಕೋಟಿ ತುರ್ತು ಸಹಾಯ ನೀಡಲು ಒಪ್ಪಿದೆ ಎಂದು ದೇಶದ ಹಣಕಾಸು ಸಚಿವಾಲಯ ಭಾನುವಾರ ತಿಳಿಸಿದೆ.

ಕೊಲಂಬೊದಲ್ಲಿ ಜನರು ಅಡುಗೆ ಅನಿಲ ಸಿಲಿಂಡರ್ ಖರೀದಿಸಲು ಭಾನುವಾರ ಖಾಲಿ ಸಿಲಿಂಡರ್‌ಗಳನ್ನು ರಸ್ತೆ ಮೇಲೆಯೇ ಇಟ್ಟುಕೊಂಡು ಕಾದರು—ಎಎಫ್‌ಪಿ ಚಿತ್ರ

'ಏಕರೂಪ ನಾಗರಿಕ ಸಂಹಿತೆ: ಗೋವಾ ಮಾದರಿ'

ನವದೆಹಲಿ (ಪಿಟಿಐ): ಗೋವಾದಲ್ಲಿ ಜಾರಿಯಲ್ಲಿರುವ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಯಾವುದೇ ಕೋಮು ಪ್ರಕ್ಷುಬ್ಧತೆ ಸೃಷ್ಟಿಸಿಲ್ಲ. ಯುಸಿಸಿ ಜಾರಿಗೆ ಚಿಂತನೆ ನಡೆಸಿರುವ ರಾಜ್ಯಗಳು ಗೋವಾವನ್ನು ಮಾದರಿಯಾಗಿ ಪರಿಗಣಿಸಬಹುದು ಎಂದು ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಸಲಹೆ ನೀಡಿದ್ದಾರೆ.

ಸಂದರ್ಶನವೊಂದರಲ್ಲಿ ಈ ಬಗ್ಗೆ ಮಾತನಾಡಿದ ಅವರು, 'ಗೋವಾ ವಿಮೋಚನೆ ಪಡೆದಾಗಿನಿಂದ ಇಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಯಲ್ಲಿದೆ. ಗೋವಾದ ಒಟ್ಟು ಜನಸಂಖ್ಯೆಯಲ್ಲಿ ಶೇ 27ರಷ್ಟು ಕ್ರಿಶ್ಚಿಯನ್ನರು, ಶೇ 6ರಷ್ಟು ಮುಸ್ಲಿಮರು ಸೇರಿದಂತೆ ಮೂರನೇ ಒಂದರಷ್ಟು ಜನರು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರು. ಆದಾಗ್ಯೂ ಇಲ್ಲಿ ಯಾವುದೇ ದೂರು ಅಥವಾ ಸಮಸ್ಯೆ ಉದ್ಭವವಾಗಿಲ್ಲ' ಎಂದು ತಿಳಿಸಿದ್ದಾರೆ.

ಇದೇ ವೇಳೆ, 'ಕಳೆದ 10 ವರ್ಷಗಳಿಂದ ಸಕ್ರಿಯ ರಾಜಕಾರಣದಲ್ಲಿದ್ದೇನೆ. 3 ವರ್ಷದಿಂದ ಗೋವಾ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸುತ್ತಿದ್ದೇನೆ. ನನ್ನ ಅನುಭವದಲ್ಲಿ ಹೇಳುವುದಾದರೆ ಯುಸಿಸಿಯಿಂದ ಯಾರಿಗೂ ಅನ್ಯಾಯವಾಗುವುದಿಲ್ಲ. ಬದಲಾಗಿ ಎಲ್ಲಾ ಧರ್ಮದ ಮಹಿಳೆಯರಿಗೆ ಸಮಾನ ಹಕ್ಕುಗಳು ಲಭ್ಯವಾಗುತ್ತವೆ. ಈ ನಿಟ್ಟಿನಲ್ಲಿ ಗೋವಾ ಎಲ್ಲಾ ರಾಜ್ಯಗಳಿಗೆ ಮಾದರಿ ಎಂದು ಭಾವಿಸುತ್ತೇನೆ' ಎಂದು ಹೇಳಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ
Astrology

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ಪ್ರೇಮ-ವಿಚಾರ, ವಶೀಕರಣ, ಮಾಟ-ಮಂತ್ರ, ಇನ್ನು ಮುಂತಾದ ಸಮಸ್ಯೆಗಳಿಗೆ ಚಿಂತಿಸುವ ಅವಶ್ಯಕತೆ ಇಲ್ಲ. ನಿಮ್ಮ ಸಮಸ್ಯೆ ಏನೇ ಇರಲಿ ಪರಿಹಾರ ಶತಸಿದ್ಧ: 9513707409

ಉದ್ಯೋಗಾವಕಾಶ
General

ರಾವ್ ಸಂಸ್ಥೆಗೆ ವಯಸ್ಸಾದವರನ್ನು,ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂ ನರ್ಸ್ ಗಳು ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002

ತಕ್ಷಣ ಮಹಿಳಾ ಟೆಲಿಕಾಲರ್ ಬೇಕಾಗಿದ್ದಾರೆ, ವಿದ್ಯಾರ್ಹತೆ: 7th,10th,PUC or any Degree. Pass/Fail, ಊಟ ವಸತಿಯೊಂದಿಗೆ ಸಂಬಳ: 10,000ರಿಂದ 22,500ವರೆಗೆ ನೀಡಲಾಗುತ್ತದೆ. Mob: 9743424120, 7483426035

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC,PUC, Degree ಯವರು ITI ನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100-56,000/- ವಸತಿಯೂಟದೊಂದಿಗೆ. 7899778278, 9611715755

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲುಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕರ್ನಾಟಕದ ಎಲ್ಲಾ ಭಾಗದವರಿಗೆ ಮನೆಯಿಂದಲೇ ಕುಳಿತು ಬುಕ್ ಬರೆಯುವ, ಫಾರಂ ತುಂಬುವ ಕೆಲಸ ಮಾಡಿ.ತಿಂಗಳಿಗೆ 18,000-26,000/-ಸಂಪಾದಿಸಿ ಗೃಹಿಣಿಯರಿಗೆ,ವಿದ್ಯಾರ್ಥಿಗಳಿಗೆ, ವಯಸ್ಸಾದವರಿಗೂ ಅವಕಾಶ ಪಾರ್ಟ್-ಟೈಂ/ಫುಲ್-ಟೈಂ. 9353497350, 8904253623

Wanted

ಬೇಕಾಗಿದ್ದಾರೆ. ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ಸಂಪರ್ಕಿಸಿ: 7019132200, 080-25300714

ಸಮಾಜಸೇವೆ
Old Age Home

ಉದ್ಯೋಗಾವಕಾಶ ತಕ್ಷಣ ಬೇಕಾಗಿದ್ದಾರೆ.ಹೋಂ ನರ್ಸ್ ಕೆಲಸ ವಯಸ್ಸಾದವರನ್ನು,ವೃದ್ಧರನ್ನು ನೋಡಿಕೊಳ್ಳಲು ಯುವತಿಯರು, ಮಹಿಳೆಯರು,ಯುವಕರು ತಕ್ಷಣ ಬೇಕಾಗಿದ್ದಾರೆ.ಊಟ, ವಸತಿ ಉಚಿತ ಸಂಬಳ 13,000-16,000/- ಸಂ. 8123699421, 8880954221

ಪ್ರವಾಸ
Travel

ದೆಹಲಿ, ಯಮುನೋತ್ರಿ, ಗಂಗೋತ್ರಿ ಬದರಿನಾಥ್ ಕೇದಾರನಾಥ್ 22.05.2022, 06.06.2022 19.06.2022 ರಿಂದ 18/14 ದಿನಗಳು. ಸ್ವಯಂಭೂ,ಹಿಮಲಿಂಗ ಅಮರನಾಥ್ ವೈಷ್ಣೊದೇವಿ ಕಾಶ್ಮೀರ್,ಅಮೃತಸರ್ 26.06.2022 04.07.2022 ರಿಂದ 13/17 ದಿನಗಳು. ನೈಮೀಶಾರಣ್ಯ ಚಿತ್ರಕೂಟ ಕಾಶಿ,ಗಯಾ,ಪ್ರಯಾಗ 07.08.2022 ರಿಂದ 8 ದಿನಗಳು. ಸಂಪರ್ಕಿಸಿ 26508925, 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

26.06.2022 ಸಪ್ಟಂಬರ್ ಅಕ್ಟೋಬರ್‌ನಲ್ಲಿ 14/20/26 ದಿನಗಳ ಪೂರಿಜಗನ್ನಾಥ್, ಕಾಶಿ,ಗಯಾ,ಅಯೋಧ್ಯ, ನೈಮಿಶಾರಣ್ಯ ಬದರಿನಾಥ್ ಕೇದಾರನಾಥ್ ಗಂಗೋತ್ರಿ ಯುಮುನೋತ್ರಿ ಅಮೃತ್‌ಸರ್ ವೈಷ್ಣೋದೇವಿ, ದೆಹಲಿ. ಜುಲೈ ಅಗಸ್ಟ್ ತಿಂಗಳಲ್ಲಿ ಅಮರನಾಥ್ ಮುಕ್ತಿನಾಥ್ 'ಶ್ರೀಸುಧಾ ಟ್ರಾವಲ್ಸ್' 080-22429289, 9448119290, 9019301300

17.06.2022 ಕಾಶಿ ಗಯಾ,ಅಯೋಧ್ಯ 7 ದಿನಗಳು. 12.05.2022 26.05.2022 ಧರ್ಮಸ್ಥಳ ಹೊರನಾಡು 4 ದಿನಗಳು 19.05.2022 ರಾಮೇಶ್ವರ,ಮದುರೈ,ಚಿದಂಬರಂ 6 ದಿನಗಳು ಜೈನ್ ಟ್ರಾವಲ್ಸ್ ಬೆಂಗಳೂರು-03. 9448402248 7022547922

ವಿಮಾನದಲ್ಲಿ 14.06.2022 7ದಿನಗಳು ಕಾಶಿ, ಅಯೋಧ್ಯ, ನೈಮಿಷ್ಯಾರಣ್ಯ,. 18.05.2022 5ದಿನಗಳು ರಾಮೇಶ್ವರಂ, ಕನ್ಯಾಕುಮಾರಿ. ಆರ್.ಗಾಂಧಿ ಟೂರ್ಸ್ (ರಿ) 9902433500/ 9945445809

03.06.2022 6ದಿನಗಳ ದಕ್ಷಿಣಕನ್ನಡ ಪ್ರವಾಸ 27 ಕ್ಷೇತ್ರಗಳು: ಸಾಗರ ಸಿಗಂದೂರು ಇಕ್ಕೇರಿ, ಶ್ರೀಧರಆಶ್ರಮ ಕೆಳದಿ,ಬನವಾಸಿ,ಶಿರಸಿ ಮಾರಿಕಾಂಬ ಸಹಸ್ರಲಿಂಗ ಯಾಣ,ಗೋಕರ್ಣ ಮುರುಡೇಶ್ವರ ಕೊಲ್ಲೂರು ಅನೆಗುಡ್ಡ,ಮಲ್ಪೆ ಉಡುಪಿಕೃಷ್ಣ ಅಂಬಲಪಾಡಿ ಪೆರಡೂರು,ಕಟೀಲು ಮಂಗಳಾದೇವಿ ಕದ್ರಿ ಮಂಜುನಾಥ ಗೋಕರ್ಣನಾಥೇಶ್ವರ ಕುಕ್ಕೆಸುಬ್ರಮಣ್ಯ ಧರ್ಮಸ್ಥಳ ಶೃಂಗೇರಿ ಬಾಳೆಹೊನ್ನುರು ಕಳಸಾ,ಹೊರನಾಡು ಶ್ರೀಮಲ್ಲಿಕಾರ್ಜುನ ಟ್ರಾವಲ್ಸ್ ಬೆಂಗಳೂರು.40. 9880847001 9342848791

09.07.2022ರಿಂದ ಅಮರನಾಥ್-ವೈಷ್ಣೋದೇವಿ.ಕಾಶ್ಮೀರ,ಅಮೃತಸರ., ದೆಹಲಿ.ರೈಲು ACಬಸ್ಸಿನಲ್ಲಿ19ದಿನಗಳು.38000/-ವಿಮಾನ AC-ಬಸ್ಸಿನಲ್ಲಿ12ದಿನಗಳು.40000/- ಕಾಶಿ,ಗಯಾ,ನಿಮಿಷಾರಣ್ಯ, ಅಲಹಾಬಾದ್. ವಿಮಾನದಲ್ಲಿ.8ದಿನಗಳು.32000/-ವಿವರಗಳಿಗೆ:ಏಷ್ಯನ್ ಟ್ರಾವೆಲ್ ಲೈನ್ಸ್,164/3.ಆರ್.ವಿ.ರಸ್ತೆ(ಮಿನರ್ವ ಬಸ್-ಸ್ಟಾಪ್ ಎದುರು)ಬೆಂಗಳೂರು-4. ಫೋನ್ 080-26565085/ 9480182865/ 8105657052

10/07/2022 13/17 ದಿನಗಳು ರೈಲು/ವಿಮಾನದಲ್ಲಿ, ದೆಹಲಿ ಮಥುರ ಆಗ್ರ, ಅಮೃತಸರ, ಅಮರನಾಥ್, ವೈಷ್ಣೋದೇವಿ, ಕಾಶ್ಮೀರ, ಕುರುಕ್ಷೇತ್ರ 21,000/- (ಕೆಲವೇ ಸೀಟುಗಳಿವೆ) ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ. 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'- 9739847429/ 9845560219.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಪ್ರಜಾವಾಣಿ
EFFECTIVE FROM May 1, 2022
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

	Ordinary	Bold	Ordinary Semi Display	Bold Semi Display
Per word	70	100	80	135

	Single Col	Double Col	Multi Col
CD Per Sqcm	480	450	475

SPECIAL OFFER
PAY 2 And GET 1 Free
PAY 3 And GET 2 Free
PAY 5 And GET 5 Free
condition apply*

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com

ಡುಪ್ಲೆಸಿ–ರಜತ್ ಶತಕದ ಜೊತೆಯಾಟ; ಸನ್‌ರೈಸರ್ಸ್ ವಿರುದ್ಧ 5 ವಿಕೆಟ್ ಗಳಿಸಿದ ಹಸರಂಗ

‘ಗ್ರೀನ್’ ಪಂದ್ಯದಲ್ಲಿ ಆರ್‌ಸಿಬಿ ವಿನ್

ಫಫ್ ಡು ಪ್ಲೆಸಿ ಬ್ಯಾಟಿಂಗ್ ವೈಭವ –ಪಿಟಿಐ ಚಿತ್ರ

ಹಸರಂಗ

ಮುಂಬೈ (ಪಿಟಿಐ): ಪರಿಸರ ಕಾಳಜಿಯೊಂದಿಗೆ ಹಸಿರು ಉಡುಗೆ ತೊಟ್ಟು ಅಂಗಣಕ್ಕೆ ಇಳಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಭರ್ಜರಿ ಜಯ ಗಳಿಸಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಭಾನುವಾರ ಸಂಜೆ ನಡೆದ ಪಂದ್ಯದಲ್ಲಿ ಫಫ್ ಡುಪ್ಲೆಸಿ ಬಳಗ ಮುಂದಿಟ್ಟ 193 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಕೇನ್ ವಿಲಿಯಮ್ಸನ್ ನಾಯಕತ್ವದ ಸನ್‌ರೈಸರ್ಸ್ 19.2 ಓವರ್‌ಗಳಲ್ಲಿ 125 ರನ್ ಗಳಿಸಿ ಆಲೌಟಾಯಿತು. 67 ರನ್‌ಗಳ ಸೋಲೊಪ್ಪಿಕೊಂಡಿತು. ಐದು ವಿಕೆಟ್ ಗಳಿಸಿದ ವಾಣಿಂದು ಹಸರಂಗ ಆರ್‌ಸಿಬಿಯ ಸುಲಭ ಜಯಕ್ಕೆ ಕಾರಣರಾದರು.

ತಂಡ ಖಾತೆ ತೆರೆಯುವ ಮೊದಲೇ ಕೇನ್ ವಿಲಿಯಮ್ಸನ್ ರನ್ ಔಟಾಗಿ ಮರಳಿದರು. ಸ್ಕೋರ್‌ಬೋರ್ಡ್‌ನಲ್ಲಿ ಒಂದು ರನ್ ದಾಖಲಾಗುತ್ತಿದ್ದಂತೆ ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾ ಕೂಡ ಔಟಾದರು. ನಂತರ ರಾಹುಲ್ ತ್ರಿಪಾಠಿ ಭರ್ಜರಿ ಬ್ಯಾಟಿಂಗ್ ಮಾಡಿ ಅರ್ಧಶತಕ ಗಳಿಸಿದರು. ಅವರಿಗೆ ಏಡನ್ ಮರ್ಕರಮ್ ಮತ್ತು ನಿಕೋಲಸ್ ಪೂರನ್ ಸ್ವಲ್ಪ ಸಹಕಾರ ನೀಡಿದರು. ಕೊನೆಯ ಆರು ಮಂದಿ ಎರಡಂಕಿ ಮೊತ್ತ ದಾಟದೆ ಮರಳಿದರು.

ಆಸರೆಯಾದ ಡುಪ್ಲೆಸಿ–ರಜತ್: ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಬೆಂಗಳೂರು ತಂಡಕ್ಕೆ ಬೆಂಗಳೂರು ಹುಡುಗ ಜಗದೀಶ ಸುಚಿತ್ ಮೊದಲ ಎಸೆತದಲ್ಲೇ ಆಘಾತ ನೀಡಿದರು. ವಿರಾಟ್ ಕೊಹ್ಲಿ ಅವರ ವಿಕೆಟ್ ಪಡೆದು ಸಂಭ್ರಮಿಸಿದರು. ಆದರೆ ಫಫ್ ಡುಪ್ಲೆಸಿ ಮತ್ತು ರಜತ್ ಪಾಟೀದಾರ್ ತಂಡಕ್ಕೆ ಆಸರೆಯಾದರು. ಎರಡನೇ ವಿಕೆಟ್‌ಗೆ ಇಬ್ಬರೂ 105 ರನ್‌ಗಳನ್ನು ಸೇರಿಸಿದರು. ಮೋಹಕ ಅರ್ಧಶತಕ ಸಿಡಿಸಿದ ಡುಪ್ಲೆಸಿ ಔಟಾಗದೇ ಉಳಿದರು. ಅರ್ಧಶತಕದತ್ತ ಹೆಜ್ಜೆ ಹಾಕಿದ್ದ ರಜತ್ 38 ಎಸೆತಗಳಲ್ಲಿ 48 ರನ್ ಗಳಿಸಿದರು. ಗುಡ್ ಲೆಂಗ್ತ್ ಎಸೆತವನ್ನು ಪುಲ್ ಮಾಡಿದ ಪಾಟೀದಾರ್ ಅವರ ಬ್ಯಾಟಿನ ಒಳ ಅಂಚಿಗೆ ಸವರಿದ ಚೆಂಡು ತ್ರಿಪಾಠಿ ಕೈಸೇರಿತು.

ಡುಪ್ಲೆಸಿ ಅವರಿಗೆ ಉತ್ತಮ ಬೆಂಬಲ ನೀಡಿದ ಗ್ಲೆನ್ ಮ್ಯಾಕ್ಸ್‌ವೆಲ್ ಎರಡು ಸಿಕ್ಸರ್ ಮತ್ತು ಮೂರು ಬೌಂಡರಿ ಸಿಡಿಸಿದರು. ಅಂತಿಮ ಓವರ್‌ಗಳಲ್ಲಿ ದಿನೇಶ್ ಕಾರ್ತಿಕ್ ಸ್ಫೋಟಕ ಬ್ಯಾಟಿಂಗ್ ಮಾಡಿದರು. ನಾಲ್ಕು ಸಿಕ್ಸರ್ ಮತ್ತು ಒಂದು ಬೌಂಡರಿ ಗಳಿಸಿದ ಅವರು ಕೇವಲ ಎಂಟು ಎಸೆತಗಳಲ್ಲಿ 30 ರನ್ ಗಳಿಸಿ ತಂಡ ಭಾರಿ ಮೊತ್ತ ಗಳಿಸಲು ನೆರವಾದರು.

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 3ಕ್ಕೆ 192 (20 ಓವರ್)
ವಿರಾಟ್ ಸಿ ವಿಲಿಯಮ್ಸನ್ ಬಿ ಸುಚಿತ್ 0 (1 ಎ), ಡುಪ್ಲೆಸಿ ಔಟಾಗದೆ 73 (50 ಎ, 4x8, 6x2), ರಜತ್ ಸಿ ತ್ರಿಪಾಠಿ ಬಿ ಸುಚಿತ್ 48 (38 ಎ, 4x4, 6x2) ಮ್ಯಾಕ್ಸ್‌ವೆಲ್ ಸಿ ಮರ್ಕರಮ್ ಬಿ ಕಾರ್ತಿಕ 33 (24 ಎ, 4x3, 6x2), ದಿನೇಶ್ ಔಟಾಗದೆ 30 (8 ಎ, 4x1, 4x4)
ಇತರೆ (ಲೆಗ್‌ಬೈ 1, ನೋಬಾಲ್ 1, ವೈಡ್ 6) 8
ವಿಕೆಟ್ ಪತನ: 1-0 (ವಿರಾಟ್ ಕೊಹ್ಲಿ, 0.1), 2-105 (ರಜತ್ ಪಾಟೀದಾರ್, 12.2), 3-159 (ಗ್ಲೆನ್ ಮ್ಯಾಕ್ಸ್‌ವೆಲ್, 18.2)
ಬೌಲಿಂಗ್: ಜಗದೀಶ ಸುಚಿತ್ 4–0–30–2, ಭುವನೇಶ್ವರ್ ಕುಮಾರ್ 4–0–34–0, ಫಜಲ್ ಹಕ್ ಫಾರೂಕಿ 4–0–47–0, ಕಾರ್ತಿಕ್ ತ್ಯಾಗಿ 4–0–42–1, ಉಮ್ರನ್ ಮಲಿಕ್ 2–0–25–0, ಅಭಿಷೇಕ್ ಶರ್ಮಾ 2–0–13–0

ಸನ್‌ರೈಸರ್ಸ್ ಹೈದರಾಬಾದ್ 125 (19.2 ಓವರ್)
ಅಭಿಷೇಕ್ ಬಿ ಮ್ಯಾಕ್ಸ್‌ವೆಲ್ 0 (3 ಎ), ವಿಲಿಯಮ್ಸನ್ ರನ್ ಔಟ್ (ಶಹಬಾಜ್) 0 (0 ಎ), ರಾಹುಲ್ ಸಿ ಲೊಮ್ರೊರ್ ಬಿ ಹೇಜಲ್‌ವುಡ್ 58 (37 ಎ, 4x6, 6x2), ಮರ್ಕರಮ್ ಸಿ ಕೊಹ್ಲಿ ಬಿ ವಾಣಿಂದು 21 (27 ಎ, 4x1, 6x1), ನಿಕೋಲಸ್ ಸಿ ಶಹಬಾಜ್ ಬಿ ವಾಣಿಂದು 19 (14 ಎ, 4x2, 6x1), ಸುಚಿತ್ ಸ್ಟಂಪ್ಡ್ ಕಾರ್ತಿಕ್ ಬಿ ವಾಣಿಂದು 2 (7 ಎ), ಶಶಾಂಕ್ ಸಿ ಮ್ಯಾಕ್ಸ್‌ವೆಲ್ ಬಿ ವಾಣಿಂದು 8 (9 ಎ, 6x1), ಕಾರ್ತಿಕ್ ಸಿ ಪಾಟೀದಾರ್ ಬಿ ಹೇಜಲ್‌ವುಡ್ 0 (1 ಎ), ಭುವನೇಶ್ವರ್ ಸಿ ಡುಪ್ಲೆಸಿ ಬಿ ಹರ್ಷಲ್ 8 (9ಎ, 4x1), ಉಮ್ರನ್ ಮಲಿಕ್ ಎಲ್‌ಬಿಡಬ್ಲ್ಯು ವಾಣಿಂದು 0 (1 ಎ), ಫಾರೂಕಿ ಔಟಾಗದೆ 2 (8 ಎ)
ಇತರೆ (ಲೆಗ್‌ಬೈ 3, ವೈಡ್ 4) 7
ವಿಕೆಟ್ ಪತನ: 1-0 (ಕೇನ್ ವಿಲಿಯಮ್ಸನ್, 0.1), 2-1 (ಅಭಿಷೇಕ್ ಶರ್ಮಾ, 0.5), 3-51 (ಏಡನ್ ಮರ್ಕರಮ್, 8.2), 4-89 (ನಿಕೋಲಸ್ ಪೂರನ್, 12.1), 5-104 (ಜಗದೀಶ ಸುಚಿತ್, 14.2), 6-114 (ರಾಹುಲ್ ತ್ರಿಪಾಠಿ, 15.4), 7-114 (ಕಾರ್ತಿಕ್ ತ್ಯಾಗಿ, 15.5), 8-114 (ಶಶಾಂಕ್, 16.3), 9-114 (ಉಮ್ರನ್ ಮಲಿಕ್, 16.4), 10-125 (ಭುವನೇಶ್ವರ್ ಕುಮಾರ್, 19.2)
ಬೌಲಿಂಗ್: ಗ್ಲೆನ್ ಮ್ಯಾಕ್ಸ್‌ವೆಲ್ 2–0–13–1, ಹೇಜಲ್‌ವುಡ್ 4–0–17–2, ಶಹಬಾಜ್ ಅಹಮ್ಮದ್ 2–0–20–0, ಮೊಹಮ್ಮದ್ ಸಿರಾಜ್ 3–0–27–0, ಮಹಿಪಾಲ್ ಲೊಮ್ರೊರ್ 1–0–7–0, ಹರ್ಷಲ್ ಪಟೇಲ್ 3.2–0–20–1, ವಾಣಿಂದು ಹಸರಂಗ 4–1–18–5

ಫಲಿತಾಂಶ: ಬೆಂಗಳೂರು ತಂಡಕ್ಕೆ 67 ರನ್‌ಗಳ ಜಯ

ಕೊಹ್ಲಿ 3ನೇ ಗೋಲ್ಡನ್ ಡಕ್

ಟೂರ್ನಿಯ 15ನೇ ಆವೃತ್ತಿಯಲ್ಲಿ ಮೂರನೇ ಬಾರಿ ಗೋಲ್ಡನ್ ಡಕ್‌ಗೆ (ಮೊದಲ ಎಸೆತದಲ್ಲೇ ಔಟ್) ಒಳಗಾದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿರಾಟ್ ಕೊಹ್ಲಿ ಭಾನುವಾರ ಭಾರಿ ಟ್ರೋಲ್ ಆಗಿದ್ದಾರೆ.

ನಸ್‌ರೈಸರ್ಸ್ ಹೈದರಾಬಾದ್ ಎದುರಿನ ಪಂದ್ಯದ ಮೊದಲ ಎಸೆತದಲ್ಲೇ ಕೊಹ್ಲಿ ಎಡಗೈ ಸ್ಪಿನ್ನರ್ ಜಗದೀಶ ಸುಚಿತ್ ಅವರಿಗೆ ವಿಕೆಟ್ ಒಪ್ಪಿಸಿದ್ದರು. ಲೆಗ್‌ಸ್ಟಂಪ್ ಮೇಲಿದ್ದ ಚೆಂಡನ್ನು ಬೌಂಡರಿಗೆ ಅಟ್ಟಲು ಕೊಹ್ಲಿ ಪ್ರಯತ್ನಿಸಿದರು. ಆದರೆ ಚೆಂಡು ಗಾಳಿಯಲ್ಲಿ ತೇಲಿತು. ಶಾರ್ಟ್ ಮಿಡ್‌ವಿಕೆಟ್‌ನಲ್ಲಿದ್ದ ವಿಲಿಯಮ್ಸನ್ ಸುಲಭ್ಯ ಕ್ಯಾಚ್ ಪಡೆದರು.

ಇದಾಗಿ ಸ್ವಲ್ಪ ಹೊತ್ತಿನಲ್ಲೇ ಸಾಮಾಜಿಕ ತಾಣಗಳಲ್ಲಿ ಮೀಮ್‌ಗಳು ಹರಿದಾಡಿದವು.

ಐಪಿಎಲ್‌ನಲ್ಲಿ ಕೊಹ್ಲಿ ಗೋಲ್ಡನ್ ಡಕ್

ವರ್ಷ	ಎದುರಾಳಿ	ಸ್ಥಳ
2008	ಮುಂಬೈ	ಬೆಂಗಳೂರು
2014	ಪಂಜಾಬ್	ಬೆಂಗಳೂರು
2017	ಕೋಲ್ಕತ್ತ	ಕೋಲ್ಕತ್ತ
2022	ಲಖನೌ	ಮುಂಬೈ
2022	ಹೈದರಾಬಾದ್	ಮುಂಬೈ
2022	ಹೈದರಾಬಾದ್	ಮುಂಬೈ

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಲಖನೌ	11	8	3	0	0	16	0.703
ಗುಜರಾತ್	11	8	3	0	0	16	0.120
ರಾಜಸ್ಥಾನ	11	7	4	0	0	14	0.326
ಬೆಂಗಳೂರು	12	7	5	0	0	14	-0.115
ಡೆಲ್ಲಿ	11	5	6	0	0	10	0.150
ಹೈದರಾಬಾದ್	11	5	6	0	0	10	-0.031
ಪಂಜಾಬ್	11	5	6	0	0	10	-0.231
ಚೆನ್ನೈ	11	4	7	0	0	8	0.028
ಕೋಲ್ಕತ್ತ	11	4	7	0	0	8	-0.304
ಮುಂಬೈ	10	2	8	0	0	4	-0.725

*ಭಾನುವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	22
ಹಸರಂಗ	ಬೆಂಗಳೂರು	21
ರಬಾಡ	ಪಂಜಾಬ್	18

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	618
ರಾಹುಲ್	ಲಖನೌ	451
ಡುಪ್ಲೆಸಿ	ಬೆಂಗಳೂರು	389

ಡೆಲ್ಲಿ ವಿರುದ್ಧ ಚೆನ್ನೈ ಜಯಭೇರಿ

ಮುಂಬೈ (ಪಿಟಿಐ): ಋತುರಾಜ್ ಗಾಯಕವಾಡ್ ಮತ್ತು ಡೇವಾನ್ ಕಾನ್ವೆ ಅವರ ಅಮೋಘ ಜೊತೆಯಾಟ ಹಾಗೂ ಮೊಯಿನ್ ಅಲಿ ಪರಿಣಾಮಕಾರಿ ಬೌಲಿಂಗ್ ಬಲದಿಂದ ಚೆನ್ನೈ ಸೂಪರ್ ಕಿಂಗ್ಸ್ ಭರ್ಜರಿ ಜಯ ಗಳಿಸಿತು.

ಡಿ.ವೈ.ಪಾಟೀಲ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ 91 ರನ್‌ಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಸೋಲಿಸಿತು. ಋತುರಾಜ್ (41; 33 ಎಸೆತ, 4 ಬೌಂಡರಿ, 1 ಸಿಕ್ಸರ್) ಮತ್ತು ಕಾನ್ವೆ (87; 49 ಎ, 7 ಬೌಂ, 5 ಸಿ) ಮೊದಲ ವಿಕೆಟ್‌ಗೆ 110 ರನ್ ಸೇರಿಸಿದರು. ಹೀಗಾಗಿ ತಂಡವು 6ಕ್ಕೆ 208 ರನ್ ಕಲೆ ಹಾಕಿತು. ಗುರಿ ಬೆನ್ನತ್ತಿದ ಡೆಲ್ಲಿ 117 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಚೆನ್ನೈ ಸೂಪರ್ ಕಿಂಗ್ಸ್: 20 ಓವರ್‌ಗಳಲ್ಲಿ 6ಕ್ಕೆ 208 (ಋತುರಾಜ್ 41, ಡೇವಾನ್ ಕಾನ್ವೆ 87, ಶಿವಂ ದುಬೆ 32, ಧೋನಿ ಔಟಾಗದೆ 21 ; ಖಲೀಲ್ ಅಹಮ್ಮದ್ 28ಕ್ಕೆ2, ಆ್ಯನ್ರಿಚ್ ನಾರ್ಕಿಯ 42ಕ್ಕೆ3). ಡೆಲ್ಲಿ ಕ್ಯಾಪಿಟಲ್ಸ್: 17.4 ಓವರ್‌ಗಳಲ್ಲಿ 117 (ಮಿಚೆಲ್ ಮಾರ್ಷ್ 25, ರಿಷಭ್ ಪಂತ್ 21, ಶಾರ್ದೂಲ್ ಠಾಕೂರ್ 24; ಮುಕೇಶ್ ಚೌಧರಿ 22ಕ್ಕೆ 2, ಸಿಮರ್ಜೀತ್ ಸಿಂಗ್ 27ಕ್ಕೆ 2, ಡ್ವೇನ್ ಬ್ರಾವೊ 24ಕ್ಕೆ 2, ಮೊಯಿನ್ ಅಲಿ 13ಕ್ಕೆ 3). ಫಲಿತಾಂಶ: ಚೆನ್ನೈ ಸೂಪರ್ ಕಿಂಗ್ಸ್‌ಗೆ 91 ರನ್‌ಗಳ ಜಯ.

ಇಂದಿನ ಪಂದ್ಯ: ಮುಂಬೈ ಇಂಡಿಯನ್ಸ್– ಕೋಲ್ಕತ್ತ ನೈಟ್ ರೈಡರ್ಸ್.
ಸ್ಥಳ: ಡಿ.ವೈ. ಪಾಟೀಲ್ ಕ್ರೀಡಾಂಗಣ, ಮುಂಬೈ, ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ನಿಟ್ಟುಸಿರು ಬಿಟ್ಟ ಡೆಲ್ಲಿ ಕ್ಯಾಪಿಟಲ್ಸ್

ನೆಟ್ಸ್‌ನಲ್ಲಿ ಬೌಲಿಂಗ್ ಮಾಡುವ ಆಟಗಾರನಲ್ಲಿ ಕೋವಿಡ್–19 ಸೋಂಕು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದಲ್ಲಿ ಭಾನುವಾರ ಆತಂಕ ಉಂಟಾಗಿತ್ತು.

‘ಪರೀಕ್ಷೆಯಲ್ಲಿ ನೆಟ್ ಬೌಲರ್ ಒಬ್ಬರ ವರದಿ ಪಾಸಿಟಿವ್ ಬಂದಿದೆ. ಹೀಗಾಗಿ ಎಲ್ಲ ಆಟಗಾರರನ್ನು ಹೋಟೆಲ್ ಕೊಠಡಿಯಲ್ಲೇ ಇರಲು ಸೂಚಿಸಲಾಗಿದೆ’ ಎಂದು ತಂಡದ ಮೂಲಗಳು ತಿಳಿಸಿದ್ದವು. ಹೀಗಾಗಿ ಚೆನ್ನೈ ಸೂಪರ್ ಕಿಂಗ್ಸ್ ಎದುರಿನ ಪಂದ್ಯ ನಡೆಯುವ ಬಗ್ಗೆ ಸಂದೇಹ ಉಂಟಾಗಿತ್ತು. ನಂತರ ಆಟಗಾರರನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು. ಸಂಜೆ ನೆಗೆಟಿವ್ ವರದಿ ಬಂದ ಕಾರಣ ಆತಂಕ ದೂರವಾಯಿತು. ಈ ನಡುವೆ ಜ್ವರದಿಂದ ಬಳಲುತ್ತಿರುವ ಪೃಥ್ವಿ ಶಾ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು ಅವರ ಆರ್‌ಟಿ ಪಿಸಿಆರ್ ವರದಿ ನೆಗೆಟಿವ್ ಬಂದಿದೆ ಎಂದು ತಂಡದ ಪ್ರಕಟಣೆ ತಿಳಿಸಿದೆ.

ಕೆಎಸ್‌ಸಿಎ ಪ್ರಶಸ್ತಿ ಪ್ರದಾನ; ಸಮಿತ್ ದ್ರಾವಿಡ್, ಮನೀಷ್‌ಗೆ ಪ್ರಶಸ್ತಿ

‘ನಾಲ್ಕು ಜಿಲ್ಲೆಗಳಲ್ಲಿ ಕ್ರಿಕೆಟ್ ಮೈದಾನ ನಿರ್ಮಾಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾವಣಗೆರೆ, ಹಾಸನ, ಗದಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಕ್ರಿಕೆಟ್ ಅಂಗಣಗಳನ್ನು ನಿರ್ಮಿಸಲಾಗುವುದು ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ (ಕೆಎಸ್‌ಸಿಎ) ಕಾರ್ಯದರ್ಶಿ ಸಂತೋಷ್ ಮೆನನ್ ತಿಳಿಸಿದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ಸಂಜೆ ನಡೆದ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು ಕೊಡಗು ಮತ್ತು ಕೋಲಾರದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಭೂಸ್ವಾದೀನ ಕಾರ್ಯ ಮುಕ್ತಾಯವಾಗಿದೆ ಎಂದು ವಿವರಿಸಿದರು. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಆಯೋಜಿಸುವ ಟೂರ್ನಿ ಗಳಿಗೆ ಸಂಬಂಧಿಸಿದ ಕನಿಷ್ಠ ಒಂದು ಪಂದ್ಯವನ್ನು ಹೊಸ ಕ್ರೀಡಾಂಗಣಗಳಲ್ಲಿ ಆಯೋಜಿಸಲು ಪ್ರಯತ್ನಿಸಲಾಗುವುದು ಅವರು ತಿಳಿಸಿದರು.

ಕರ್ನಾಟಕದ ಆಟಗಾರರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಅಧ್ಯಕ್ಷ ರೋಜರ್ ಬಿನ್ನಿ, ಐಪಿಎಲ್‌ನ 15ನೇ ಆವೃತ್ತಿಯಲ್ಲಿ ರಾಜ್ಯದ 15 ಮಂದಿ ಆಟಗಾರರು ವಿವಿಧ ತಂಡಗಳಲ್ಲಿ ಆಡುತ್ತಿದ್ದಾರೆ’ ಎಂದರು.

ಸಮಿತ್, ಮನೀಷ್‌ಗೆ ಪ್ರಶಸ್ತಿ: ಭಾರತ ತಂಡದ ಮಾಜಿ ನಾಯಕ ಮತ್ತು ಹಾಲಿ ಕೋಚ್ ರಾಹುಲ್ ದ್ರಾವಿಡ್ ಅವರ ಪುತ್ರ ಸಮಿತ್ ಹಾಗೂ ಅನುಭವಿ ಬ್ಯಾಟರ್ ಮನೀಷ್ ಪಾಂಡೆ ಅವರು ವಾರ್ಷಿಕ ಪ್ರಶಸ್ತಿ ಗಳಿಸಿದವರಲ್ಲಿ ಪ್ರಮುಖರು. ಕೋವಿಡ್‌ನಿಂದಾಗಿ 3 ವರ್ಷಗಳ ನಂತರ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿತ್ತು.

ಮಲ್ಯ ಅದಿತಿ ಅಂತರರಾಷ್ಟ್ರೀಯ ಶಾಲೆಯ ವಿದ್ಯಾರ್ಥಿ ಸಮಿತ್ ಅವರು ಬಿ.ಟಿ.ರಾಮಯ್ಯ ಶೀಲ್ಡ್‌ಗಾಗಿ ನಡೆದ 14 ವರ್ಷದೊಳಗಿನವರ 2ನೇ ಡಿವಿಷನ್ ಲೀಗ್ ಟೂರ್ನಿಯ 2019–20ನೇ ಋತುವಿನಲ್ಲಿ ಹೆಚ್ಚು ರನ್ ಗಳಿಸಿದ್ದರು. ಮನೀಷ್ ಕಳೆದ ವರ್ಷ ಮುಷ್ತಾಕ್ ಅಲಿ ಟ್ರೋಫಿ ಟೂರ್ನಿಯಲ್ಲಿ ಗರಿಷ್ಠ ರನ್ ಗಳಿಸಿದ್ದರು. ಆರ್.ಸಮರ್ಥ್ (2021–22ರ ವಿಜಯ್ ಹಜಾರೆ ಟ್ರೋಫಿ), ದೇವದತ್ತ ಪಡಿಕ್ಕಲ್ (2020–21ರ ವಿಜಯ್ ಹಜಾರೆ, ಮುಷ್ತಾಕ್ ಅಲಿ ಟ್ರೋಫಿ) ಪ್ರಶಸ್ತಿಗೆ ಪಾತ್ರರಾದ ಇತರ ಪ್ರಮುಖರು.

ಬಿಸಿಸಿಐ ಆಯೋಜಿಸಿದ್ದ ಮಹಿಳೆಯರ ಟ್ವೆಂಟಿ20 ಟೂರ್ನಿಯಲ್ಲಿ ಕರ್ನಾಟಕದ ಪರ ಹೆಚ್ಚು ರನ್ ಗಳಿಸಿದ ವೃಂದಾ ದಿನೇಶ್ (ಎಡದಿಂದ ಮೂರನೇಯವರು) ಅವರಿಗೆ ಭಾರತ ಮಹಿಳಾ ತಂಡದ ನಾಯಕಿ ಮಿಥಾಲಿ ರಾಜ್ ಪ್ರಶಸ್ತಿ ವಿತರಿಸಿದರು. (ಎಡದಿಂದ): ಕೆಎಸ್‌ಸಿಎ ಖಜಾಂಚಿ ವಿನಯ ಮೃತ್ಯುಂಜಯ, ಅಧ್ಯಕ್ಷ ರೋಜರ್ ಬಿನ್ನಿ ಮತ್ತು ಕಾರ್ಯದರ್ಶಿ ಸಂತೋಷ್ ಮೆನನ್ ಇದ್ದಾರೆ –ಪ್ರಜಾವಾಣಿ ಚಿತ್ರ

ಅಲ್ಲಲ್ಲಿ ಬಿರುಗಾಳಿ ಸಹಿತ ಮಳೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಅಳ್ನಾವರದಲ್ಲಿ ಭಾನುವಾರ ಸಂಜೆ ಕೆಲ ನಿಮಿಷ ಗಾಳಿ, ಮಳೆ ಹಾಗೂ ಸಿಡಿಲಿನ ಆರ್ಭಟ ಜೋರಾಗಿತ್ತು. ರಭಸದ ಗಾಳಿ ಮಳೆಗೆ ಇಲ್ಲಿನ ಬಡಾವಣೆಯೊಂದರಲ್ಲಿ ಮನೆ ಮೇಲೆ ಮರ ಉರುಳಿ ಬಿದ್ದಿದೆ. ಮರದ ಕೆಳಗೆ ನಿಲ್ಲಿಸಿದ್ದ ಕಾರಿಗೂ ಹಾನಿ ಆಗಿದೆ.

ಸಮೀಪದ ಹುಲಿಕೇರಿ ಹಾಗೂ ಕಡಬಗಟ್ಟಿ ಗ್ರಾಮಗಳಲ್ಲಿ ಬಹಳಷ್ಟು ಮನೆಯ ಹಂಚು, ತಗಡುಗಳು ಹಾರಿಹೋಗಿವೆ. ಹೊಸ ಲಿಂಗನಮಠ ಗ್ರಾಮದ ಬಳಿ ರಸ್ತೆ ಮೇಲೆ ದೊಡ್ಡ ಮರ ಬಿದ್ದು ಸಂಚಾರ ಬಂದ್ ಆಗಿದೆ.

ವಿಜಯನಗರ ಜಿಲ್ಲೆ ಹೂವಿನಹಡಗಲಿ ತಾಲ್ಲೂಕಿನ ನಾಗತಿಬಸಾಪುರದಲ್ಲಿ ಶನಿವಾರ ರಾತ್ರಿ ಗಾಳಿ ಮಳೆಗೆ 10 ಮನೆಗಳ ಚಾವಣಿ ಹಾರಿ ಹೋಗಿವೆ. ಹೊಸಪೇಟೆಯಲ್ಲಿ ಬಿರುಗಾಳಿ ಸಹಿತ ಕೆಲಕಾಲ ಮಳೆಯಾಗಿದೆ.

ಗದಗ ಜಿಲ್ಲೆ ಮುಂಡರಗಿ ಪಟ್ಟಣವೂ ಸೇರಿದಂತೆ ತಾಲ್ಲೂಕಿನಾದ್ಯಂತ ಭಾರಿ ಗಾಳಿ,ಮಳೆಗೆ ಹಲವಾರು ಗಿಡಮರಗಳು ಧರೆಗುರುಳಿವೆ. ತಾಲ್ಲೂಕಿನ ವಿರುಪಾಪುರ ಗ್ರಾಮದ ಬಳಿ ಚಲಿಸುತ್ತಿದ್ದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಮೇಲೆ ಬೃಹತ್ ಬೇವಿನ ಮರ ಬಿದ್ದಿತು. ಬಸ್ ನಿಧಾನವಾಗಿ ಚಲಿಸುತ್ತಿದ್ದುದ್ದರಿಂದ ಯಾರಿಗೂ ಅಪಾಯ ಆಗಲಿಲ್ಲ.

ಸಿಡಿಲು ಬಡಿದು ಕುರಿಗಾಹಿ ಸಾವು (ದೇವರೆಡ್ಡಿಹಳ್ಳಿ ವರದಿ): ಚಳ್ಳಕೆರೆ ತಾಲ್ಲೂಕಿನ ತಳಕು ಹೋಬಳಿಯ ದೇವರೆಡ್ಡಿಹಳ್ಳಿ ಗ್ರಾಮದಲ್ಲಿ ಭಾನುವಾರ ಸಿಡಿಲು ಬಡಿದು ಕುರಿಗಾಹಿ ಯಶವಂತ (19) ಎಂಬುವರು ಮೃತಪಟ್ಟಿದ್ದಾರೆ. ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಯ ಕೆಲವು ಭಾಗಗಳಲ್ಲಿ ಬಿರುಗಾಳಿ ಸಹಿತ ಮಳೆಯಾಗಿದೆ.

ಸಿಡಿಲಿಗೆ ಎಮ್ಮೆ, ಮೇಕೆ ಬಲಿ: ತುಮಕೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಶನಿವಾರ ತಡರಾತ್ರಿ ಮತ್ತು ಭಾನುವಾರ ಸಂಜೆ ಗುಡುಗು, ಸಿಡಿಲು ಸಹಿತ ಮಳೆಯಾಗಿದೆ. ಸಿ.ಎಸ್.ಜಿ. ಪಾಳ್ಯದಲ್ಲಿ ಆರು ಮೇಕೆ ಮತ್ತು ಸೂರೇನಹಳ್ಳಿಯಲ್ಲಿ ಎಮ್ಮೆ ಸಿಡಿಲು ಬಡಿದು ಸಾವನ್ನಪ್ಪಿವೆ.

ತೀವ್ರಗೊಳ್ಳಲಿದೆ ಚಂಡಮಾರುತ

ನವದೆಹಲಿ (ಪಿಟಿಐ): ಬಂಗಾಳಕೊಲ್ಲಿಯಲ್ಲಿ ಉಂಟಾಗಿರುವ ವಾಯುಭಾರ ಕುಸಿತ ಭಾನುವಾರ ಚಂಡಮಾರುತವಾಗಿ ಪರಿವರ್ತನೆಗೊಂಡಿದೆ.

‘ಅಸನಿ’ ಚಂಡಮಾರುತವು ಇನ್ನಷ್ಟು ತೀವ್ರಗೊಳ್ಳಲಿದ್ದು, ಮುಂದಿನ ದಿನಗಳಲ್ಲಿ ಆಂಧ್ರಪ್ರದೇಶ, ಒಡಿಶಾದಲ್ಲಿ ಭಾರಿ ಗಾಳಿ ಮತ್ತು ಮಳೆಯಾಗುವ ಸಾಧ್ಯತೆ ಇದೆ. ಈಗಲೇ ಗಂಟೆಗೆ 75 ಕಿಲೋಮೀಟರ್ ವೇಗದಲ್ಲಿ ಗಾಳಿ ಬೀಸುತ್ತಿದೆ ಎಂದು ಹವಾಮಾನ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಆದರೆ, ಈ ಚಂಡಮಾರುತವು ಭೂಪ್ರದೇಶಕ್ಕೆ ಅಪ್ಪಳಿಸುವ ಸಾಧ್ಯತೆ ಕಡಿಮೆಯಾಗಿದ್ದು, ಈ ವಾರ ಮಧ್ಯಭಾಗದಲ್ಲಿ ದುರ್ಬಲಗೊಳ್ಳಲಿದೆ ಎನ್ನಲಾಗಿದೆ.

ಭೂಮಿ ಅಕ್ರಮ ಮಂಜೂರಾತಿ: ತಹಶೀಲ್ದಾರ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ಖೊಟ್ಟಿ ದಾಖಲೆ ಸೃಷ್ಟಿಸಿ ಸರ್ಕಾರಿ ಭೂಮಿಯನ್ನು ಖಾಸಗಿ ವ್ಯಕ್ತಿಗಳಿಗೆ ಅಕ್ರಮವಾಗಿ ಮಂಜೂರು ಮಾಡಿರುವ ಆರೋಪದ ಮೇಲೆ ಇಲ್ಲಿನ ತಾಲ್ಲೂಕು ಕಚೇರಿಯ ಗ್ರೇಡ್‌–2 ತಹಶೀಲ್ದಾರ್ ನಟರಾಜ್, ಶಿರಸ್ತೇದಾರ್ ಮಹ್ಮದ್ ಗೌಸ್, ಪ್ರಥಮ ದರ್ಜೆ ಸಹಾಯಕ ಎ.ಎಚ್.ಪುನೀತ್ ಕುಮಾರ್ ಹಾಗೂ ಕಂದಾಯ ನಿರೀಕ್ಷಕ ಸಿ.ಎಂ.ಕೊಟ್ರೇಶ್ ವಿರುದ್ಧ ಪಟ್ಟಣ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ದಾಸರಹಳ್ಳಿ ಕಂದಾಯ ಗ್ರಾಮದ ಸ.ನಂ.229/ಡಿ/1 ವಿಸ್ತೀರ್ಣ 10.36 ಎಕರೆ ಸರ್ಕಾರಿ ಭೂಮಿಗೆ ಸಂಬಂಧಿಸಿದಂತೆ ಖೊಟ್ಟಿ ದಾಖಲೆ ಸೃಷ್ಟಿಸಿ, ದಾಸರಹಳ್ಳಿಯ ವಿಶಾಲಾಬಾಯಿ ಅವರ ಹೆಸರಿಗೆ 4.98 ಎಕರೆ, ಗೌರಿಬಾಯಿ 3.28 ಎಕರೆ ಹಾಗೂ ಕೊಟ್ರಿಬಾಯಿ ಅವರ ಹೆಸರಿಗೆ 2.10 ಎಕರೆ ಭೂಮಿಯನ್ನು ಅಕ್ರಮವಾಗಿ ಮಂಜೂರು ಮಾಡಿದ್ದರು.

2006ಕ್ಕಿಂತ ಮುಂಚೆ ಅಕ್ರಮ ಸಕ್ರಮ ಸಮಿತಿ ಮಂಜೂರಾತಿ ನೀಡಿದ್ದ ಅಕ್ರಮ ಸಕ್ರಮ ಪಟ್ಟಿಯಲ್ಲಿ ಇವರ ಹೆಸರುಗಳನ್ನು ಅಕ್ರಮವಾಗಿ ನಮೂದಿಸಿ, ಭೂಮಿ ತಂತ್ರಾಂಶದಲ್ಲಿ ಪಹಣಿಗಾಗಿ ನೋಂದಾಯಿಸಿದ್ದರು. ಈ ಬಗ್ಗೆ ಜಿಲ್ಲಾಧಿಕಾರಿ ಅನಿರುದ್ಧ್ ಶ್ರವಣ್ ಪಿ. ಅವರಿಗೆ ಸಂಶಯ ಬಂದಿದ್ದರಿಂದ ಸಿಂಗಟಾಲೂರು ಏತ ನೀರಾವರಿ ಯೋಜನೆಯ ವಿಶೇಷ ಭೂ ಸ್ವಾಧೀನಾಧಿಕಾರಿ ಪರಿಣಿಕಾ ಪವನ್ ರಾಮ್ ಅಧ್ಯಕ್ಷತೆಯ ತನಿಖಾ ತಂಡ ರಚಿಸಿ ವರದಿ ನೀಡುವಂತೆ ಸೂಚಿಸಿದ್ದರು.

ಅಕ್ರಮ ನಡೆದಿರುವುದನ್ನು ತನಿಖಾ ತಂಡ ಪತ್ತೆ ಹಚ್ಚಿ ವರದಿ ನೀಡಿದ್ದು ಅಕ್ರಮದಲ್ಲಿ ಭಾಗಿಯಾದ ನಾಲ್ವರ ವಿರುದ್ಧ ಕರ್ನಾಟಕ ಕಂದಾಯ ಕಾಯ್ದೆ 1964ರ ಅಡಿಯಲ್ಲಿ ಪ್ರಕರಣ ದಾಖಲಿಸುವಂತೆ ಜಿಲ್ಲಾಧಿಕಾರಿ ಸೂಚಿಸಿದ್ದರು.

ಹರಪನಹಳ್ಳಿ ಉಪ ವಿಭಾಗಾಧಿಕಾರಿ ಎಚ್.ಜಿ.ಚಂದ್ರಶೇಖರಯ್ಯ, ನಾಲ್ವರು ಆರೋಪಿಗಳ ವಿರುದ್ಧ ಪಟ್ಟಣ ಠಾಣೆಯಲ್ಲಿ ಈಚೆಗೆ ದೂರು ದಾಖಲಿಸಿದ್ದರು.

ಹಿಮಾಚಲ ಪ್ರದೇಶ: ವಿಧಾನಸಭೆ ದ್ವಾರದಲ್ಲಿ ಖಾಲಿಸ್ತಾನಿ ಧ್ವಜ

ಧರ್ಮಶಾಲಾ (ಹಿಮಾಚಲ ಪ್ರದೇಶ) (ಪಿಟಿಐ): ‘ರಾಜ್ಯ ವಿಧಾನಸಭೆಯ ಆವರಣದ ಮುಖ್ಯದ್ವಾರದ ಹೊರ ಭಾಗದಲ್ಲಿ ಖಾಲಿಸ್ತಾನಿ ಧ್ವಜಗಳನ್ನು ಕಟ್ಟಲಾಗಿತ್ತು ಮತ್ತು ಆವರಣದ ಗೋಡೆಯ ಮೇಲೆ ಖಾಲಿಸ್ತಾನಿ ಪರ ಘೋಷಣೆಗಳನ್ನು ಬರೆಯಲಾಗಿತ್ತು. ಧ್ವಜಗಳನ್ನು ತೆಗೆದು, ಬರಹವನ್ನು ಅಳಿಸಲಾಗಿದೆ’ ಎಂದು ಹಿಮಾಚಲ ಪ್ರದೇಶ ಪೊಲೀಸರು ಹೇಳಿದ್ದಾರೆ.

ಧರ್ಮಶಾಲಾದಲ್ಲಿ ಇರುವ ವಿಧಾನಸಭೆ ಕಟ್ಟಡದಲ್ಲಿ ಚಳಿಗಾಲದ ಅಧಿವೇಶನವನ್ನು ಮಾತ್ರ ನಡೆಸಲಾಗುತ್ತದೆ. ಆಗ ಮಾತ್ರ ವಿಧಾನಸಭೆಗೆ ಬಿಗಿಭದ್ರತೆ ಒದಗಿಸಲಾಗುತ್ತದೆ. ಉಳಿದಂತೆ ಸಾಮಾನ್ಯ ಭದ್ರತೆ ಮಾತ್ರ ಇರುತ್ತದೆ. ‘ಶನಿವಾರ ತಡ ರಾತ್ರಿ ಅಥವಾ ಭಾನುವಾರ ನಸುಕಿನಲ್ಲಿ ದುಷ್ಕರ್ಮಿಗಳು ಈ ಕೃತ್ಯ ಎಸಗಿದ್ದಾರೆ. ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಈ ಕೃತ್ಯವನ್ನು ಖಂಡಿಸಿ ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಜೈ ರಾಮ್ ಠಾಕೂರ್ ಅವರು ಟ್ವೀಟ್ ಮಾಡಿದ್ದಾರೆ.

ಹಿಮಾಚಲ ಪ್ರದೇಶ ವಿಧಾನಸಭೆಯ ಆವರಣ ಗೋಡೆಯಲ್ಲಿ ಖಾಲಿಸ್ತಾನಿ ಧ್ವಜ ಹಾರಾಡಿದ ಬಳಿಕ ಅದನ್ನು ವಿರೋಧಿಸಿ ಕಾಂಗ್ರೆಸ್ ಶಾಸಕ ವಿಕ್ರಮಾದಿತ್ಯ ಸಿಂಗ್ ನೇತೃತ್ವದಲ್ಲಿ ಭಾನುವಾರ ಶಿಮ್ಲಾದಲ್ಲಿ ಪ್ರತಿಭಟನೆ ನಡೆಯಿತು –ಪಿಟಿಐ ಚಿತ್ರ

‘ಇದು ಹೇಡಿತನದ ಕೃತ್ಯ. ತಪ್ಪಿತಸ್ಥರನ್ನು ಆದಷ್ಟು ಬೇಗ ಸೆರೆಹಿಡಿಯಲಾಗುವುದು. ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು’ ಎಂದಿದ್ದಾರೆ.

ಈ ಘಟನೆಯನ್ನು ವಿರೋಧ ಪಕ್ಷಗಳು ಖಂಡಿಸಿವೆ. ‘ವಿಧಾನಸಭೆಯ ದ್ವಾರದಲ್ಲಿ ಖಾಲಿಸ್ತಾನಿ ಧ್ವಜಗಳು ಹಾರಾಡಿದ್ದು ದುರದೃಷ್ಟಕರ. ಘಟನೆ ನಡೆದ ವೇಳೆ ಸಿ.ಸಿ.ಟಿ.ವಿ. ಕ್ಯಾಮೆರಾಗಳು ಕೆಲಸ ಮಾಡುತ್ತಿರಲಿಲ್ಲ ಮತ್ತು ಸ್ಥಳದಲ್ಲಿ ಭದ್ರತಾ ಸಿಬ್ಬಂದಿ ಇರದೇ ಇದ್ದದ್ದು ಆಡಳಿತ ಮತ್ತು ಭದ್ರತಾ ಸಂಸ್ಥೆಗಳ ಬಗ್ಗೆ ಹಲವಾರು ಪ್ರಶ್ನೆಗಳು ಹುಟ್ಟುವಂತೆ ಮಾಡಿವೆ’ ಎಂದು ಕಾಂಗ್ರೆಸ್ ರಾಷ್ಟ್ರೀಯ ಕಾರ್ಯದರ್ಶಿ ಸುಧೀರ್ ಶರ್ಮಾ ಟ್ವೀಟ್ ಮಾಡಿದ್ದಾರೆ.

‘ತಾಜ್ ಮಹಲ್‌ನ ಮುಚ್ಚಿದ ಕೋಣೆಗಳ ಬಾಗಿಲು ತೆರೆಸಿ’

ಪ್ರಜಾವಾಣಿ ವಾರ್ತೆ

ಲಖನೌ: ತಾಜ್‌ಮಹಲ್ ಒಳಗಿರುವ ಮುಚ್ಚಿದ ಕೊಠಡಿಗಳ ಬಾಗಿಲು ತೆರೆಸಿ, ಅಲ್ಲಿ ಹಿಂದೂ ವಿಗ್ರಹಗಳು ಮತ್ತು ಧರ್ಮಗ್ರಂಥಗಳು ಇವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ (ಎಎಸ್‌ಐ) ನಿರ್ದೇಶನ ನೀಡಬೇಕು ಎಂದು ಕೋರಿ ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠದ ಮುಂದೆ ಬಿಜೆಪಿಯ ಅಯೋಧ್ಯೆ ಜಿಲ್ಲಾ ಘಟಕದ ಮಾಧ್ಯಮ ಉಸ್ತುವಾರಿ ರಜನೀಶ್ ಕುಮಾರ್ ಸಿಂಗ್ ಅವರು ಅರ್ಜಿ ಸಲ್ಲಿಸಿದ್ದಾರೆ.

ಇನ್ನಷ್ಟೇ ವಿಚಾರಣೆಗೆ ಬರಬೇಕಿರುವ ಈ ಅರ್ಜಿಯಲ್ಲಿ ಸಿಂಗ್, ‘ತಾಜ್ ಮಹಲ್‌ನ ನೆಲಮಾಳಿಗೆ ಮತ್ತು ಮೇಲ್ಮಹಡಿಗಳಲ್ಲಿ 20ಕ್ಕೂ ಹೆಚ್ಚು ಮುಚ್ಚಿದ ಕೋಣೆಗಳಿವೆ. ಅವುಗಳನ್ನು ಸಾರ್ವಜನಿಕ ಪ್ರವೇಶಕ್ಕೆ ಮುಕ್ತವಾಗಿರಿಸಿಲ್ಲ. ಆ ಕೊಠಡಿಗಳಲ್ಲಿ ಹಿಂದೂ ದೇವರ ವಿಗ್ರಹಗಳು ಮತ್ತು ಧರ್ಮಗ್ರಂಥಗಳು ಇದ್ದು, ತಾಜ್ ಮಹಲ್ ವಾಸ್ತವವಾಗಿ ಶಿವ ದೇವಾಲಯ ಎಂಬುದನ್ನು ಇವು ಸಾಬೀತುಪಡಿಸುತ್ತವೆ’ ಎಂದು ಹೇಳಿದ್ದಾರೆ.

ಮುಂಬೈ: ಧ್ವನಿವರ್ಧಕಗಳ ಶಬ್ದ ಕಡಿಮೆ ಮಾಡಿದ ಮಸೀದಿಗಳು

ಮುಂಬೈ (ರಾಯಿಟರ್ಸ್): ಆಜಾನ್ ವೇಳೆ ಧ್ವನಿವರ್ಧಕಗಳಿಂದ ಹೊರಡುವ ಶಬ್ದವನ್ನು ಕಡಿಮೆ ಮಾಡಬೇಕು ಎಂದು ಹಿಂದೂ ಸಂಘಟನೆಗಳು ಬೇಡಿಕೆ ಇಟ್ಟ ಬೆನ್ನಲ್ಲೇ, ಮುಂಬೈನ ಹಲವಾರು ಮಸೀದಿಗಳು ಧ್ವನಿವರ್ಧಕದ ಶಬ್ದವನ್ನು ಕಡಿಮೆ ಮಾಡಿವೆ.

ಈ ವಿಷಯದಲ್ಲಿ ಪೊಲೀಸರು ಮಧ್ಯಪ್ರವೇಶಿಸಿದ್ದು, ಧ್ವನಿವರ್ಧಕಗಳ ಶಬ್ದವನ್ನು ಕಡಿಮೆ ಮಾಡುವುದಾಗಿ ಮಸೀದಿಗಳು ತಿಳಿಸಿವೆ ಎಂದು ಮೂಲಗಳು ಹೇಳಿವೆ.

‘ಆಜಾನ್‌ನ ಶಬ್ದವು ಈಗ ರಾಜಕೀಯ ವಿಷಯವಾಗಿದೆ. ಆದರೆ, ಇದು ಕೋಮು ಬಣ್ಣ ಪಡೆಯುವುದು ನನಗೆ ಇಷ್ಟ ಇಲ್ಲ’ ಎಂದು ನಗರದಲ್ಲಿರುವ ಜುಮಾ ಮಸೀದಿಯ ಮುಖ್ಯ ಬೋಧಕ ಮೊಹಮ್ಮದ್ ಅಶ್ಫಾಕ್ ಕಾಜಿ ಹೇಳಿದ್ದಾರೆ.

‘ಸ್ಥಳೀಯ ಹಿಂದೂ ಮುಖಂಡರೊಬ್ಬರ ದೂರು ಸಲ್ಲಿಸಿದ ಹಿನ್ನೆಲೆಯಲ್ಲಿ, 900ಕ್ಕೂ ಅಧಿಕ ಮಸೀದಿಗಳು ಆಜಾನ್ ಸಮಯದಲ್ಲಿ ಧ್ವನಿವರ್ಧಕದ ಶಬ್ದವನ್ನು ಕಡಿಮೆ ಮಾಡಿವೆ’ ಎಂದು ಪ್ರಭಾವಿ ಇಸ್ಲಾಮಿಕ್ ವಿದ್ವಾಂಸರಲ್ಲೊಬ್ಬರಾಗಿರುವ ಕಾಜಿ ಹೇಳಿದ್ದಾರೆ.

‘ಧ್ವನಿವರ್ಧಕ ಬಳಕೆ ವಿಷಯದಲ್ಲಿ ನ್ಯಾಯಾಲಯದ ಆದೇಶವನ್ನು ಗೌರವಿಸಬೇಕು. ಯಾವುದೇ ಸಂದರ್ಭದಲ್ಲಿಯೂ ರಾಜ್ಯದಲ್ಲಿ ಕೋಮು ಸಂಘರ್ಷಕ್ಕೆ ಅವಕಾಶ ನೀಡುವುದಿಲ್ಲ’ ಎಂದು ಮುಂಬೈನ ಹಿರಿಯ ಪೊಲೀಸ್ ಅಧಿಕಾರಿ ವಿ.ಎನ್.ಪಾಟೀಲ ಹೇಳಿದ್ದಾರೆ.

ಮಹಾರಾಷ್ಟ್ರ ನವನಿರ್ಮಾಣ ಸೇನಾದ ಮುಖಂಡ ರಾಜ್ ಠಾಕ್ರೆ ಅವರು, ಮಸೀದಿ ಹಾಗೂ ಇತರ ಸ್ಥಳಗಳಲ್ಲಿನ ಧ್ವನಿವರ್ಧಕಗಳ ಶಬ್ದವು ನಿಯಮಗಳಂತೆ ಮಿತಿಯಲ್ಲಿರುವಂತೆ ನೋಡಿಕೊಳ್ಳಬೇಕು ಎಂದು ಕಳೆದ ಏಪ್ರಿಲ್‌ನಲ್ಲಿ ಆಗ್ರಹಿಸಿದ್ದರು. ಈ ಬಗ್ಗೆ ಕ್ರಮ ಕೈಗೊಳ್ಳದಿದ್ದಲ್ಲಿ ಸಂಘಟನೆಯ ಕಾರ್ಯಕರ್ತರು ಮಸೀದಿಗಳ ಮುಂದೆ ಪ್ರತಿಭಟನೆ ರೂಪದಲ್ಲಿ ಹಿಂದೂ ಶ್ಲೋಕಗಳನ್ನು ಪಠಿಸುವುದಾಗಿ ಎಚ್ಚರಿಸಿದ್ದರು.

ಠಾಕ್ರೆ ಅವರ ಮಾತುಗಳನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಇದರ ಬೆನ್ನಲ್ಲೇ, ಹಿರಿಯ ಪೊಲೀಸ್ ಅಧಿಕಾರಿಗಳು ಕಾಜಿ ಅವರೂ ಸೇರಿದಂತೆ ಧರ್ಮ ಗುರುಗಳ ಸಭೆ ನಡೆಸಿದ್ದರು. ಧ್ವನಿವರ್ಧಕಗಳ ಶಬ್ದವನ್ನು ಕಡಿಮೆ ಮಾಡುವ ಬಗ್ಗೆ ಅವರೊಂದಿಗೆ ಚರ್ಚಿಸಿದ್ದರು.

ಸಂಕ್ಷಿಪ್ತ ಸುದ್ದಿ

ರೈಲು ಪ್ರಯಾಣಿಕರ ನೆರವಿಗಾಗಿ 51,000 ಸಿಬ್ಬಂದಿಗೆ ತರಬೇತಿ

ನವದೆಹಲಿ: ರೈಲು ಪ್ರಯಾಣದ ವೇಳೆ ಪ್ರಯಾಣಿಕರಿಗೆ ನೆರವಾಗುವ ನಿಟ್ಟಿನಲ್ಲಿ ಭಾರತೀಯ ರೈಲ್ವೆಯು 51,000 ಮುಂಚೂಣಿ ರೈಲ್ವೆ ಸಿಬ್ಬಂದಿಗೆ ತರಬೇತಿ ನೀಡಿದೆ.

ಪ್ರಯಾಣದ ವೇಳೆ ಪ್ರಯಾಣಿಕರಿಗೆ ಏನೇ ಸಮಸ್ಯೆ ಅಥವಾ ಅವರ ವಿರುದ್ಧ ಏನೇ ಘಟನೆಗಳು ನಡೆದಾಗ, ಕರ್ಮಯೋಗಿಗಳೆಂದು ಗುರುತಿಸಲಾಗುವ ಈ ಮುಂಚೂಣಿ ರೈಲ್ವೆ ಸಿಬ್ಬಂದಿ ನೆರವಿಗೆ ಬರಲಿದ್ದಾರೆ. ಸಂತ್ರಸ್ತ ಪ್ರಯಾಣಿಕರನ್ನು ಸರ್ಕಾರದ ರೈಲ್ವೆ ಪೊಲೀಸರು ಅಥವಾ ರೈಲ್ವೆ ರಕ್ಷಣಾ ಪಡೆಗಳ ಬಳಿಗೆ ಕರೆದೊಯ್ಯಲಿದ್ದಾರೆ. ಜೊತೆಗೆ ಪ್ರಯಾಣಿಕರು ಬಿದ್ದು ಗಾಯಗೊಂಡಾಗ ಅವರಿಗೆ ವೈದ್ಯಕೀಯ ನೆರವನ್ನೂ ನೀಡಲಿದ್ದಾರೆ. ಎಂದು ಭಾರತೀಯ ರೈಲ್ವೆ ವಕ್ತಾರ ರಾಜೀವ್ ಜೈನ್ ತಿಳಿಸಿದ್ದಾರೆ.

‘ಹಿಟ್ಲರ್‌ನ ಅನುಯಾಯಿ ಮೋದಿ’

ಮುಂಬೈ: ’ಪ್ರಧಾನಿ ನರೇಂದ್ರ ಮೋದಿ ಅವರು ಜರ್ಮನ್ ಸರ್ವಾಧಿಕಾರಿ ಅಡಾಲ್ಫ್ ಹಿಟ್ಲರ್‌ನನ್ನು ಅನುಸರಿಸುತ್ತಾರೆ’ ಎನ್ನುವ ಮೂಲಕ ಶಿವಸೇನಾ ಪ್ರಧಾನ ವಕ್ತಾರ ಹಾಗೂ ರಾಜ್ಯಸಭೆ ಸದಸ್ಯ ಸಂಜಯ್ ರಾವುತ್ ಮತ್ತೊಂದು ರಾಜಕೀಯ ವಿವಾದ ಸೃಷ್ಟಿಸುವ ಹೇಳಿಕೆ ನೀಡಿದ್ದಾರೆ.

ಮೋದಿಯನ್ನು ವಿಮರ್ಶಿಸುತ್ತಿಲ್ಲ ಎಂದು ಸ್ಪಷ್ಟಪಡಿಸಿರುವ ರಾವುತ್, ‘ಹಿಟ್ಲರ್ ಯಾವ ರೀತಿಯ ಕಾರ್ಯಕ್ರಮಗಳನ್ನು ಮಾಡುತ್ತಿದ್ದನೋ, ಮೋದಿ ಹಾಗೂ ಅವರ ಪಕ್ಷ ಸಹ ಅದೇ ರೀತಿ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ. ಇದು ನಿಜ. ಒಂದು ಬಾರಿ ಸಾಮಾಜಿಕ ಜಾಲತಾಣಗಳ ಕಡೆ ಗಮನ ಹರಿಸಿ’ ಎಂದು ಹೇಳಿದ್ದಾರೆ.

ಚುನಾವಣಾ ಕಣಕ್ಕಿಳಿಯಿರಿ: ಸಂಸದೆ ಸವಾಲು

ಮುಂಬೈ(ಪಿಟಿಐ): ಹನುಮಾನ್ ಚಾಲಿಸಾ ಪ್ರಕರಣಕ್ಕೆ ಸಂಬಂಧಿಸಿ ಮುಂಬೈ ಪೊಲೀಸರಿಂದ ಬಂಧನಕ್ಕೆ ಒಳಗಾಗಿ ಜಾಮೀನಿನ ಮೇಲೆ ಬಿಡುಗಡೆಯಾಗಿರುವ ಪಕ್ಷೇತರ ಸಂಸದೆ ನವನೀತ್ ರಾಣಾ ಕೌರ್ ಅವರು, ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ತಮ್ಮ ಎದುರು ಚುನಾವಣೆ ಎದುರಿಸಲಿ ಎಂದು ಸವಾಲು ಹಾಕಿದ್ದಾರೆ.

ಭಾನುವಾರ ಆಸ್ಪತ್ರೆಯಿಂದ ಬಿಡುಗಡೆಯಾಗಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಜನರಿಂದ ನೇರವಾಗಿ ಶಾಸನಸಭೆಗೆ ಆಯ್ಕೆಯಾಗಲು ಕ್ಷೇತ್ರವನ್ನು ಆರಿಸಿಕೊಳ್ಳಲಿ. ಅದೇ ಕ್ಷೇತ್ರದಿಂದ ಅವರ ವಿರುದ್ಧ ನಾನು ಸ್ಪರ್ಧೆ ಮಾಡುತ್ತೇನೆ. ನಾನು ಕಠಿಣ ಮತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡಿ ಚುನಾವಣೆಯನ್ನು ಗೆಲ್ಲುತ್ತೇನೆ. ಆಗ ಅವರಿಗೆ ಜನರ ಶಕ್ತಿ ತಿಳಿಯಲಿದೆ' ಎಂದು ಹೇಳಿದರು.

ಹರಿಯಾಣ: ಹರಪ್ಪ ಕಾಲದ ಮಾನವ ಅಸ್ಥಿಪಂಜರಗಳು ಪತ್ತೆ

ರಾಖಿಗಡಿ: ಹರಪ್ಪ ಕಾಲದ ಎರಡು ಮಾನವ ಅಸ್ಥಿಪಂಜರಗಳು ಹರಿಯಾಣದ ಹಿಸ್ಸಾರ್ ಜಿಲ್ಲೆಯಲ್ಲಿ ಪತ್ತೆಯಾಗಿದ್ದು, ಅವುಗಳನ್ನು ಡಿಎನ್‌ಎ ಪರೀಕ್ಷೆಗಾಗಿ ರವಾನಿಸಲಾಗಿದೆ ಎಂದು ಭಾರತೀಯ ಪುರಾತತ್ವ ಇಲಾಖೆ (ಎಎಸ್‌ಐ) ತಿಳಿಸಿದೆ.

ಜಿಲ್ಲೆಯ ರಾಖಿಗಡಿ ಎಂಬಲ್ಲಿ ಇಬ್ಬರು ಮಹಿಳೆಯರ ಅಸ್ಥಿಪಂಜರಗಳು ಸಿಕ್ಕಿವೆ. ಈ ಅಸ್ಥಿಪಂಜರಗಳ ಪರೀಕ್ಷೆಯಿಂದ ಹರಪ್ಪ ಕಾಲದ ಜನರ ಆಹಾರ ಪದ್ಧತಿ ಹಾಗೂ ಅವರ ಇತಿಹಾಸದ ಬಗ್ಗೆ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ ಎಂದು ಇಲಾಖೆಯ ಜಂಟಿ ಮಹಾರ್ದೇಶಕ ಎಸ್.ಕೆ.ಮಂಜುಲ್ ಹೇಳಿದ್ದಾರೆ.

ಈ ಮೃತ ದೇಹಗಳು ಸುಮಾರು ಐದು ಸಾವಿರ ವರ್ಷಗಳ ಹಿಂದಿನವು ಎಂದು ಅಂದಾಜಿಸಲಾಗಿದೆ. ಮೃತದೇಹಗಳ ಪಕ್ಕದಲ್ಲೇ ಮಡಿಕೆ ಮತ್ತು ಕರಕುಶಲ ವಸ್ತುಗಳು ದೊರೆತಿವೆ. ದೆಹಲಿಯ ವಾಯವ್ಯ ದಿಕ್ಕಿನಲ್ಲಿ 150 ಕಿ.ಮೀ ದೂರದಲ್ಲಿರುವ ರಾಖಿಗಡಿಯಲ್ಲಿ ಫೆ.24 ರಂದು ಉತ್ಖನನ ಆರಂಭಿಸಲಾಗಿತ್ತು ಎಂದು ಅವರು ತಿಳಿಸಿದ್ದಾರೆ.

ಇಬ್ಬರು ಉಗ್ರರ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು–ಕಾಶ್ಮೀರದ ಕುಲ್ಗಾಂ ಜಿಲ್ಲೆಯಲ್ಲಿ ಭದ್ರತಾ ಪಡೆ ಭಾನುವಾರ ನಡೆಸಿದ ಎನ್‌ಕೌಂಟರ್‌ನಲ್ಲಿ ಪಾಕಿಸ್ತಾನದ ಲಷ್ಕರ್–ಎ–ತಯಬಾ ಸಂಘಟನೆಯ ಒಬ್ಬ ಸೇರಿ ಇಬ್ಬರು ಭಯೋತ್ಪಾದಕರನ್ನು ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ದಕ್ಷಿಣ ಕಾಶ್ಮೀರ ಜಿಲ್ಲೆಯ ಚೆಯಾನ್ ದೇವ್ಸರ್ ಪ್ರದೇಶದಲ್ಲಿ ಭಯೋತ್ಪಾದಕರ ಇರುವಿಕೆಯ ಮಾಹಿತಿ ಮೇರೆಗೆ ಭದ್ರತಾ ಪಡೆಗಳು ಕೈಗೊಂಡ ಶೋಧ ಕಾರ್ಯಾಚರಣೆ ವೇಳೆ ಎನ್‌ಕೌಂಟರ್ ನಡೆಸಲಾಯಿತು. ‘ ಹತ್ಯೆಯಾದ ಒಬ್ಬ ಭಯೋತ್ಪಾದಕ ಹೈದರ್, ಪಾಕಿಸ್ತಾನದ ಎಲ್‌ಇಟಿ ಸಂಘಟನೆಗೆ ಸೇರಿದವನು’ ಎಂದು ಕಾಶ್ಮೀರದ ಐಜಿಪಿ ವಿಜಯ್ ಕುಮಾರ್ ಟ್ವೀಟ್ ಮಾಡಿದ್ದಾರೆ.

ರಾಜಸ್ಥಾನ ಸಚಿವರ ಮಗನ ವಿರುದ್ಧ ಅತ್ಯಾಚಾರ ಪ್ರಕರಣ

ನವದೆಹಲಿ: ಇಲ್ಲಿನ ಸ್ಥಳೀಯ ಪೊಲೀಸರು ರಾಜಸ್ಥಾನ ಸಚಿವರ ಮಗನ ವಿರುದ್ಧ ಅತ್ಯಾಚಾರ ಪ್ರಕರಣದ ದೂರನ್ನು ದಾಖಲಿಸಿದ್ದಾರೆ.

23 ವರ್ಷದ ಯುವತಿ ರಾಜಸ್ಥಾನ ಸಚಿವರ ಮಗ ರೋಹಿತ್ ವಿರುದ್ಧ ದೂರು ನೀಡಿದ್ದಾರೆ. ದೆಹಲಿ ಪೊಲೀಸರು ರೋಹಿತ್ ವಿರುದ್ಧ ದೂರು ದಾಖಲಿಸಿಕೊಂಡಿದ್ದಾರೆ. 2021ರ ಜನವರಿಯಲ್ಲಿ ಕೆಲಸದ ಸಂದರ್ಶನ ನೆಪದಲ್ಲಿ ತಮ್ಮನ್ನು ದೆಹಲಿಗೆ ಕರೆಸಿಕೊಂಡು ಅತ್ಯಾಚಾರ ಮಾಡಿದ್ದಾರೆ. ನಗ್ನ ಚಿತ್ರಗಳು ಹಾಗೂ ವಿಡಿಯೊಗಳನ್ನು ಸಂಗ್ರಹಿಸಿ ಇಟ್ಟುಕೊಂಡಿದ್ದಾರೆ ಎಂದು ಸಚಿವರ ಮಗನ ವಿರುದ್ಧ ಯುವತಿ ದೂರಿದ್ದಾರೆ.

ಮೊದಲ ಪತ್ನಿಗೆ ವಿಚ್ಛೇದನ ಕೊಟ್ಟು, ತಮ್ಮನ್ನು ಮದುವೆಯಾಗುವುದಾಗಿ ರೋಹಿತ್ ಹೇಳಿದ್ದರು ಎಂದಿದ್ದಾರೆ.

ಜ್ಯೇಷ್ಠತೆ ಅನುಸಾರ ಎಎಸ್‌ಐಗಳಿಗೆ ಮುಂಬಡ್ತಿ: ಡಿಜಿಪಿ ಸುತ್ತೋಲೆ

ಬೆಂಗಳೂರು: ಹುದ್ದೆಯಾಧಾರಿತ ಪದ್ಧತಿ ಅಳವಡಿಸಿ ತಮ್ಮ ವಲಯ ಹಾಗೂ ಕಮಿಷನರೇಟ್ ಘಟಕಗಳಲ್ಲಿನ ಸಿಬ್ಬಂದಿಗೆ ಜ್ಯೇಷ್ಠತೆಯ ಅನುಸಾರ ಪಿಎಸ್‌ಐ ಹುದ್ದೆಗೆ ಮುಂಬಡ್ತಿ ನೀಡುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಸುತ್ತೋಲೆ ಹೊರಡಿಸಿದ್ದಾರೆ.

‘ಪಿಎಸ್‌ಐ 545 ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿತ್ತು. ಪ್ರಸಕ್ತ ವಿದ್ಯಮಾನಗಳನ್ನು ಗಮನಿಸಿದರೆ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವುದು ಇನ್ನೂ ಸ್ವಲ್ಪ ತಡವಾಗುವ ಸಾಧ್ಯತೆ ಇದೆ. ಹೀಗಾಗಿ ಒಂದು ವರ್ಷದಲ್ಲಿ ವಯೋ ನಿವೃತ್ತಿ ಹೊಂದಲಿರುವ, ವಯೋ ನಿವೃತ್ತಿ ಅಂಚಿನಲ್ಲಿರುವ ಎಎಸ್‌ಐಗಳಿಗೆ ಪಿಎಸ್‌ಐಗಳಾಗಿ ಮುಂಬಡ್ತಿ ನೀಡಲು ಕ್ರಮ ಕೈಗೊಳ್ಳಿ. ಮುಂಬಡ್ತಿ ಹುದ್ದೆಗಳು ಇಲ್ಲದಿದ್ದಲ್ಲಿ, ಅಂತಹ ಸಿಬ್ಬಂದಿಗೆ ಸಂಬಂಧಪಟ್ಟ ಹುದ್ದೆಯ ಜ್ಯೇಷ್ಠತಾ ಪಟ್ಟಿಯಲ್ಲಿ ಜ್ಯೇಷ್ಠತೆ ಮತ್ತು ಮುಂಬಡ್ತಿಗೆ ಪರಿಗಣಿಸುವ ತೃಪ್ತಿಕರ ಸೇವೆಯನ್ನು ಆಧರಿಸಿಕೊಂಡು, ನಿಯಮಾನುಸಾರ ನೇರ ನೇಮಕಾತಿ ಹುದ್ದೆಗಳಿಗೆ ಎದುರಾಗಿ ತಾತ್ಕಾಲಿಕವಾಗಿ ಸ್ವತಂತ್ರ ಪ್ರಭಾರದಲ್ಲಿರಿಸಲು ಕ್ರಮ ಜರುಗಿಸಿ’ ಎಂದು ಸುತ್ತೋಲೆಯಲ್ಲಿ ಸೂಚಿಸಿದ್ದಾರೆ.

ರಾಜ್ಯ ಅಥ್ಲೆಟಿಕ್ ಕೂಟ: ಜೂನಿಯರ್ ವಿಭಾಗದಲ್ಲಿ ವರ್ಷಾ, ಕೃಷಿಕ್‌ಗೆ ಚಿನ್ನದ ಪದಕ

ಶಶಿಕಾಂತ್, ರೀನಾ ಮಿಂಚಿನ ಓಟ

ಪ್ರಜಾವಾಣಿ ವಾರ್ತೆ

ಉಡುಪಿ: ಬೆಂಗಳೂರಿನ ಡಿವೈಇಎಸ್ ಪ್ರತಿನಿಧಿಸಿದ ಶಶಿಕಾಂತ್ ಮತ್ತು ಬೆಂಗಳೂರು ಜಿಲ್ಲೆಯನ್ನು ಪ್ರತಿನಿಧಿಸಿದ ರೀನಾ ಜಾರ್ಜ್ ಅವರು ರಾಜ್ಯ ಅಥ್ಲೆಟಿಕ್ ಕೂಟದಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದ ವೇಗದ ಓಟಗಾರರು ಎನಿಸಿದರು.

ಜಿಲ್ಲಾ ಕ್ರೀಡಾಂಗಣದಲ್ಲಿ ಭಾನುವಾರ ಆರಂಭಗೊಂಡ ಕೂಟದ ಪುರುಷರ 100 ಮೀಟರ್ಸ್ ಓಟದಲ್ಲಿ ಶಶಿಕಾಂತ 10.56 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ರೀನಾ ಜಾರ್ಜ್ 11.68 ಸೆಕೆಂಡುಗಳ ಸಾಧನೆ ಮಾಡಿದರು. ಪುರುಷರ 800 ಮೀ ಓಟದಲ್ಲಿ ವಿಶ್ವಂಭರ ಕೋಳೆಕರ್ ಮೊದಲಿಗರಾದರು.

ಮೊದಲ ದಿನದ ಫಲಿತಾಂಶಗಳು: ಪುರುಷರ ವಿಭಾಗ: 100 ಮೀ ಓಟ: ಶಶಿಕಾಂತ್ (ಡಿವೈಇಎಸ್ ವಿದ್ಯಾನಗರ)-1. ಕಾಲ:10.56, ಧನಂಜಯ್ (ಶಿವಮೊಗ್ಗ)-2, ರವಿಕಿರಣ್ (ಬೆಂಗಳೂರು)-3; 400 ಮೀ ಓಟ: ಮಿಜೊ ಚಾಕೊ ಕುರಿಯನ್ (ದಕ್ಷಿಣ ಕನ್ನಡ)-1. ಕಾಲ: 47.07, ನಿಹಾಲ್ ಜೋಯಲ್ (ದಕ್ಷಿಣ ಕನ್ನಡ)-2, ಮಹಾಂತೇಶ್ ಹೆಳವಿ (ದಕ್ಷಿಣ ಕನ್ನಡ)-3; 100 ಮೀ ಹರ್ಡಲ್ಸ್: ಅದ್ವಿತ್, (ದಕ್ಷಿಣ ಕನ್ನಡ)-1. ಕಾಲ: 14.65, ಸಾಗರ್ (ಮೈಸೂರು)-2, ಸುಶಾಂತ್ ಎಂ.ಡಿ (ಡಿವೈಇಎಸ್)-3; 800 ಮೀ ಓಟ: ವಿಶ್ವಂಭರ ಕೋಳೆಕರ್ (ಫ್ಯೂಷನ್ ಅಥ್ಲೆಟಿಕ್ ಕ್ಲಬ್)-1. ಕಾಲ-01:53.1. ಟಿ.ಎಚ್.ದೇವಯ್ಯ (ಆಳ್ವಾಸ್)-2, ಎಂ.ಸಿ. ಮಿಲನ್ (ಆಳ್ವಾಸ್ ಮೂಡುಬಿದರೆ)-3; 5000 ಮೀಟರ್: ಎಂ.ನಿತಿನ್ ಕುಮಾರ್ (ಕೊಡಗು)-1. ಕಾಲ:15:42.6, ಪಿ.ಮಣಿಕಂಠ (ಯುನಿಕ್ ಅಥ್ಲೆಟಿಕ್ ಕ್ಲಬ್)-2, ಎಂ.ವೈಭವ್ ಎಂ.ಪಟೇಲ್, (ಡಿವೈಇಎಸ್ ಎಸ್‌ಆರ್ ಸ್ಪೋರ್ಟ್ಸ್ ಹಾಸ್ಟೆಲ್)-3; ಡಿಸ್ಕಸ್ ಥ್ರೋ: ಮೊಹಮ್ಮದ್ ಸಕ್ಲೇನ್ ಅಹಮದ್ (ಮೈಸೂರು)-1. ದೂರ: 48.56 ಮೀ, ಬಿ.ಸಂಜೀವ್ ಬಿ.ಕೊಲವಿ (ಡಿವೈಇಎಸ್)-2, ಎನ್.ಮೋಹಿತ್‌ರಾಜ್ (ಮೈಸೂರು)-3; ಹ್ಯಾಮರ್ ಥ್ರೋ: ಆಂಜನೇಯ (ಉತ್ತರ ಕನ್ನಡ)-1 ದೂರ: 50.53 ಮೀ, ಬಾಲಚಂದ್ರ (ಕೊಪ್ಪಳ)-2, ಭರತ್ ಶೆಟ್ಟಿ (ಡಿವೈಇಎಸ್ ಬೆಂಗಳೂರು)-3. ಟ್ರಿಪಲ್ ಜಂಪ್: ಮಹಾಂತ್ ಬಿ. (ಪಾಂಡವಪುರ ಅಥ್ಲೆಟಿಕ್ ಸಂಸ್ಥೆ)-1, ಸಂದೇಶ್ (ಆಳ್ವಾಸ್)-2, ಮಂಜುನಾಥ್ (ವೈಎಸ್‌ಸಿ)-3; ಪೋಲ್ ವಾಲ್ಟ್: ಭವಿತ್ ಕುಮಾರ್ (ಎಸ್‌ಡಿಎಂ ಉಜಿರೆ)-1. ಮಾದೇಶನ್ (ವೈಎಸ್‌ಸಿ ಬೆಂಗಳೂರು)-2. **ಮಹಿಳೆಯರ ವಿಭಾಗ:** 100 ಮೀ ಓಟ: ರೀನಾ ಜಾರ್ಜ್ (ಬೆಂಗಳೂರು)-1. ಕಾಲ: 11.68, ಕೀರ್ತನಾ (ಉಡುಪಿ)-2, ಸ್ನೇಹಾ ಪಿ.ಜೆ (ಕರ್ನಾಟಕ ಅರಣ್ಯ ಇಲಾಖೆ)-3; 400 ಮೀ ಓಟ: ಲಿಖಿತಾ.ಎಂ (ದಕ್ಷಿಣ ಕನ್ನಡ, ಕೂಟ ದಾಖಲೆ)-1, ಕಾಲ: 53.18, ಇಂಚರಾ (ಬೆಂಗಳೂರು)-2, ಜಿ.ಕೆ.ವಿಜಯ ಕುಮಾರಿ (ಬೆಂಗಳೂರು ಗ್ರಾಮಾಂತರ)-3; 800 ಮೀ ಓಟ: ದೀಪಶ್ರೀ (ಆಳ್ವಾಸ್)-1. ಕಾಲ: 02:21.5, ಗಿರಿಜಶ್ರೀ ಬಾಲಾಂಬಿಕಾ (ಬೆಂಗಳೂರು)-2, ಜಿ.ದಿಶಾ (ಮೈಸೂರು)-3, 5,000 ಮೀಟರ್ ಓಟ: ಚೈತ್ರಾ ದೇವಾಡಿಗ (ಆಳ್ವಾಸ್)-1. ಕಾಲ 19:27.7, ಮಲ್ಲೇಶ್ವರಿ ರಾಥೋಡ್ (ಮೈಸೂರು)-2, ಎನ್.ಗೀತಾ (ಬಾಲಧಾಮ ಸ್ಪೋರ್ಟ್ಸ್ ಫೌಂಡೇಷನ್)-3; ಡಿಸ್ಕಸ್ ಥ್ರೋ: ಕಲಾವತಿ ಬಸಪ್ಪ ತೇಲಿ (ಬೆಳಗಾವಿ)-1, ದೂರ: 45.82 ಮೀ, ಎಂ.ಎನ್.ಸುಶ್ಮಾ (ಮೈಸೂರು)-2, ನಿವೇದಿತಾ ಸಾವಂತ್ (ಉತ್ತರ ಕನ್ನಡ)-3; ಹ್ಯಾಮರ್ ಥ್ರೋ: ಅನ್ರಿನ್ (ಆಳ್ವಾಸ್)-1. ದೂರ: 44.80 ಮೀ, ನಿವೇದಿತಾ ಸಾವಂತ್ (ಉತ್ತರ ಕನ್ನಡ)-2, ವೀಕ್ಷಾ (ಆಳ್ವಾಸ್)-3; ಟ್ರಿಪಲ್ ಜಂಪ್: ಬಿ.ಐಶ್ವರ್ಯಾ (ಫ್ಯೂಷನ್‌ಅ ಥ್ಲೆಟಿಕ್ಸ್, ಕೂಟ ದಾಖಲೆ)-1. ಅಂತರ: 13.30 ಮೀ, ಪಿ.ಪಿ. ಹರ್ಷಿಣಿ (ಬೆಂಗಳೂರು)-2. 100 ಮೀ ಹರ್ಡಲ್: ಮೇಧಾ ಕಾಮತ್ (ಬೆಂಗಳೂರು)-1 ದೂರ: 14.62, ಇವಾಂಜಿಲಿನ್ ಶಾರುನ್ ಭುವನ (ಬೆಂಗಳೂರು)2, ಆರ್.ಸಿಂಧುರ (ದಕ್ಷಿಣ ಕನ್ನಡ)3, ಪೋಲ್ ವಾಲ್ಟ್: ಸಿಂಧುಶ್ರೀ ಜಿ.ಸಾಯಿ (ಬೆಂಗಳೂರು)-1.

20 ವರ್ಷದೊಳಗಿನ ಮಹಿಳೆಯರು: 100 ಮೀ ಓಟ: ವರ್ಷಾ-1. ಕಾಲ 11.98, ಕರ್ನೇಲಿಯೊ-2, ನಯನಾ-3. 400 ಮೀ ಓಟ: ದಿಶಾ ಅಲಿಗೆ (ಬೆಂಗಳೂರು ನಗರ)-1. ಕಾಲ: 01:00.4, ಎಚ್.ಎಸ್.ಹರ್ಷಿತಾ (ಮೈಸೂರು)-2, ಎನ್.ಸಿ.ಮಾನಸಾ (ಕೊಡಗು)-3; 800 ಮೀ ಓಟ: ಇ.ಬಿ.ಅರ್ಪಿತಾ (ಫ್ಯೂಷನ್)-1. ಕಾಲ: 02:15.2, ಜ್ಯೋತಿ ಕಟ್ಟಿಮನಿ (ಧಾರವಾಡ)-2, ಎಚ್.ಎಂ.ಸಹನಾ (ಹಾಸನ)-3; 3000 ಮೀ: ಪ್ರಿಯಾಂಕಾ (ಸಾಯ್)-1. ಕಾಲ:11:07.9, ಟಿನಾ ಗಗನನ್ ವಾಂಖೆಡೆ (ಬೆಳಗಾವಿ)-2, ಶುಭಾಂಗಿ ಕಾಕತ್ಕರ್ (ಬೆಳಗಾವಿ)-3; ಡಿಸ್ಕಸ್ ಥ್ರೋ: ಮಾಧುರ್ಯ (ಡಿವೈಇಎಸ್ ಉಡುಪಿ)-1. ದೂರ: 33.86, ಧೈರಿ (ಮೈಸೂರು)-2. ಹ್ಯಾಮರ್ ಥ್ರೋ: ನಿಶೆಲ್ ಡೆಲ್ಫಿನಾ ಡಿಸೋಜಾ (ದಕ್ಷಿಣ ಕನ್ನಡ)-1. ದೂರ: 42.50, ಕೀರ್ತಿ.ಪಿ (ಬಳ್ಳಾರಿ)-2, ಟ್ರಿಪಲ್ ಜಂಪ್: ಕೃತಿ ಜಿ.ಶೆಟ್ಟಿ (ದಕ್ಷಿಣ ಕನ್ನಡ)-1. ಅಂತರ: 11.87, ಕೆ.ಎನ್.ಭೂಮಿಕಾ (ಕೊಡಗು)-2, ವೈಷ್ಣ ಬಾಲು ಬುದ್ರಕ್ (ಬೆಳಗಾವಿ)-3; 100 ಮೀ ಹರ್ಡಲ್ಸ್: ಚಂದ್ರಿಕಾ ಶೆಟ್ಟಿ (ಉಡುಪಿ)-1. ಕಾಲ: 16.58, ದೀಕ್ಷಿತಾ ರಾಮಕೃಷ್ಣ ಗೌಡ (ಆಳ್ವಾಸ್)-2, ಅಪೂರ್ವಾ ಆನಂದ್ ನಾಯಕ್ (ಬೆಳಗಾವಿ)-3; ಪೋಲ್‌ವಾಲ್ಟ್: ಪ್ರೀತಿ (ಆಳ್ವಾಸ್)-1. ದೂರ: 2.60 ಮೀ; 20 ವರ್ಷದೊಳಗಿನ ಪುರುಷರು: 100 ಮೀ ಓಟ: ಎಂ.ಕೃಷಿಕ್-1. ಕಾಲ: 10.66, ರೋಷನ್ ವೆಂಕಟೇಶ್ ಕಾಟ್ವೆ (ಡಿವೈಇಎಸ್ ವಿದ್ಯಾನಗರ)-2, ಕೆ.ವೈ ಮುತ್ತಣ್ಣ (ಬಾಲಧಾಮ ಸ್ಪೋರ್ಟ್ಸ್ ಫೌಂಡೇಷನ್)-3; 400 ಮೀ ಓಟ: ಸಿ.ಎಚ್.ರಿಹಾನ್-1. ಕಾಲ:47.94, ಸಾತ್ವಿಕ್-2, ಓಂ ಸುನಿಲ್ ಚೌವ್ಹಾಣ್ (ಡಿವೈಇಎಸ್ ವಿದ್ಯಾನಗರ)-3; 800 ಮೀ ಓಟ: ಬೋಪಣ್ಣ (ಮೈಸೂರು)-1. ಕಾಲ: 01:55.8, ಸಿ.ಸುಪ್ರೀತ್ (ಆಳ್ವಾಸ್)-2, ಲೋಕೇಶ್ (ಡಿವೈಇಎಸ್)-3; 3000 ಮೀ ಓಟ: ಶಿವಾಜಿ (ಡಿವೈಇಎಸ್ ವಿದ್ಯಾನಗರ)-1. ಕಾಲ:08:44.6, ಅರುಣ್ ಶಂಕರ್ ಮಾಳವಿ (ಬೆಳಗಾವಿ)-2, ಭೀಮಾಶಂಕರ (ಕೊಡಗು)-3; 10000 ಮೀ ವೇಗನಡಿಗೆ: ಅಭಿಷೇಕ್ ಗೌಡ (ಯುನಿಕ್ ಅಥ್ಲೆಟಿಕ್ ಕ್ಲಬ್ ಮೈಸೂರು)-1, ಕಾಲ:58:40.1, ಅಭಿಲಾಶ್ ಗೌಡ (ಯುನಿಕ್)-2, ವರ್ಷಿತ್ (ಕೊಡಗು)-3; ಡಿಸ್ಕಸ್ ಥ್ರೋ: ಮಣಿರತ್ನ (ಡಿವೈಇಎಸ್ ಬೆಂಗಳೂರು)-1. ದೂರ: 46.00, ಶಶಾಂಕ್ ಪಾಟೀಲ (ಡಿವೈಇಎಸ್ ಬೆಳಗಾವಿ)-2, ಸುಶಾಂತ್ (ನಿಟ್ಟೆ)-3; 10 ಮೀ ಹರ್ಡಲ್ಸ್: ಕೃಷಿಕ್ (ತುಮಕೂರು)-1, ದೂರ: 14.26, ಅಂಕಿತ್ (ಉಡುಪಿ)-2, ದೀಕ್ಷಿತ್ ಗೌಡ (ಡಿವೈಇಎಸ್)-3; ಹ್ಯಾಮರ್ ಥ್ರೋ: ಸಚಿನ್ (ಡಿವೈಇಎಸ್ ಬೆಳಗಾವಿ)-1. ದೂರ: 51.81, ಧೀರಜ್ ಪೂಜಾರಿ (ಡಿವೈಇಎಸ್ ಬೆಂಗಳೂರು)-2, ಚನ್ನವೀರೇಶ್ ಎಸ್.ಹಿಕ್ಕಿಮಠ್, (ಡಿವೈಇಎಸ್ ಬೆಳಗಾವಿ)-3; ಟ್ರಿಪಲ್ ಜಂಪ್: ಅಖಿಲೇಶ್ (ಉಡುಪಿ, ಕೂಟ ದಾಖಲೆ)-1. ಅಂತರ: 15.40, ಜಾಫರ್ ಖಾನ್ ಮೊಹಮ್ಮದ್ ಅಲಿಖಾನ್ (ಬೆಳಗಾವಿ)-2, ಡ್ಯಾನಿಯಲ್ ಮ್ಯಾಥ್ಯೂ (ಬೆಂಗಳೂರು)-3; ಪೋಲ್ ವಾಲ್ಟ್: ಆದಿತ್ಯ ವಿ.ಎಂ (ವೈಎಸ್‌ಸಿ ಬೆಂಗಳೂರು)-1

ಡೆಫ್‌ಲಿಂಪಿಕ್ಸ್: ಧನುಷ್–ಪ್ರಿಯೇಷಾಗೆ ಚಿನ್ನ


ಧನುಷ್ ಮತ್ತು ಪ್ರಿಯೇಷಾ

ನವದೆಹಲಿ (ಪಿಟಿಐ): ಡೆಫ್‌ಲಿಂಪಿಕ್ಸ್ ಭಾರತದ ಕ್ರೀಡಾಪಟುಗಳು ಪದಕದ ಬೇಟೆ ಮುಂದುವರಿದಿದೆ. ಬ್ರೆಜಿಲ್‌ನ ಕಾಕ್ಸಾಯಿಸ್ ಡು ಸುಲ್‌ನಲ್ಲಿ ನಡೆಯುತ್ತಿರುವ ಕೂಟದ 10 ಮೀ. ಏರ್ ರೈಫಲ್ ಮಿಶ್ರ ತಂಡ ವಿಭಾಗದಲ್ಲಿ ಧನುಷ್ ಶ್ರೀಕಾಂತ್– ಪ್ರಿಯೇಷಾ ದೇಶಮುಖ್ ಭಾನುವಾರ ಚಿನ್ನದ ಪದಕಕ್ಕೆ ಗುರಿಯಿಟ್ಟರು.

ಫೈನಲ್‌ನಲ್ಲಿ ಭಾರತದ ಜೋಡಿಯು 16–10ರಿಂದ ಜರ್ಮನಿಯ ಸೆಬಾಸ್ಟಿಯನ್ ಹೆರ್ಮಾನಿ ಮತ್ತು ಸಬ್ರಿನಾ ಎಕರ್ಟ್ ಅವರನ್ನು ಪರಾಭವಗೊಳಿಸಿದರು. ಧನುಷ್ ಅವರಿಗೆ ಇದು ಕೂಟದಲ್ಲಿ ಎರಡನೇ ಚಿನ್ನವಾಗಿದೆ. 10 ಮೀ. ಏರ್ ರೈಫಲ್ ವೈಯಕ್ತಿಕ ವಿಭಾಗದಲ್ಲೂ ಅವರು ಅಗ್ರಸ್ಥಾನ ಗಳಿಸಿದ್ದರು.

ಇಂಡಿಯನ್ ಗ್ರ್ಯಾನ್‌ಪ್ರಿ ಕೂಟಗಳು ಸ್ಥಳಾಂತರ

ಭುವನೇಶ್ವರ (ಪಿಟಿಐ): ಮಧುರೈನಲ್ಲಿ ನಿಗದಿಯಾಗಿದ್ದ ಇಂಡಿಯನ್ ಗ್ರ್ಯಾನ್‌ಪ್ರಿ 3 ಮತ್ತು 4 ಕೂಟಗಳನ್ನು ಭುವನೇಶ್ವರಕ್ಕೆ ಸ್ಥಳಾಂತರ ಮಾಡಲಾಗಿದೆ. ಈ ಕೂಟಗಳು ಇದೇ 21 ಮತ್ತು 24ರಂದು ನಡೆಯಲಿವೆ ಎಂದು ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ಭಾನುವಾರ ತಿಳಿಸಿದೆ. ಆರಂಭದಲ್ಲಿ ಮಧುರೈನಲ್ಲಿ ನಿಗದಿ ಯಾಗಿದ್ದ ಟೂರ್ನಿಗಳು ತಿರುವನಂತಪುರದಲ್ಲಿ ನಡೆಯಲಿವೆ ಎಂದು ಗುರುವಾರ ಎಎಫ್‌ಐ ಹೇಳಿತ್ತು.

ಪ್ಯಾರಾ ಈಜು: ಮುಕುಂದನ್ ದಾಖಲೆ

ಮುಕುಂದನ್

ಬೆಂಗಳೂರು: ಕರ್ನಾಟಕದ ಪ್ಯಾರಾ ಈಜುಪಟು ನಿರಂಜನ್ ಮುಕುಂದನ್ ಅವರು 800 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ 12 ವರ್ಷದ ಏಷ್ಯನ್ ದಾಖಲೆಯನ್ನು ಮೀರಿದ್ದಾರೆ.

ಜೆಕ್ ಗಣರಾಜ್ಯದಲ್ಲಿ ಭಾನುವಾರ ನಡೆದ ಪ್ಯಾರಾ ಸ್ವಿಮಿಂಗ್ ಕಪ್ ಕೂಟದ ಎಸ್‌7 ವಿಭಾಗದಲ್ಲಿ ಅವರು ದಾಖಲೆ ಬರೆದರು. 11 ನಿ. 17.22 ಸೆಕೆಂಡುಗಳಲ್ಲಿ ಅವರು ಗುರಿ ತಲುಪಿದರು. ಈ ಹಿಂದಿನ ದಾಖಲೆಯನ್ನು 2010ರಲ್ಲಿ ದಕ್ಷಿಣ ಕೊರಿಯಾದ ಕಿಮ್ ಸೆಜಿನ್ (12 ನಿ. 10.34 ಸೆ.) ಅವರ ಹೆಸರಿನಲ್ಲಿತ್ತು.

ಈ ಕೂಟದಲ್ಲಿ ಮುಕುಂದನ್ 3 ಚಿನ್ನ, 2 ಬೆಳ್ಳಿ ಮತ್ತು 1 ಕಂಚು ಗೆದ್ದರು.

ಥಾಮಸ್, ಊಬರ್ ಕಪ್ ಬ್ಯಾಡ್ಮಿಂಟನ್ ಟೂರ್ನಿ

ಭಾರತ ತಂಡಗಳಿಗೆ ಭರ್ಜರಿ ಗೆಲುವು

ಲಕ್ಷ್ಯ ಸೇನ್

ಬ್ಯಾಂಕಾಕ್ (ಪಿಟಿಐ): ಥಾಮಸ್ ಮತ್ತು ಊಬರ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತ ತಂಡಗಳು ಶುಭಾರಂಭ ಮಾಡಿವೆ.

ಭಾನುವಾರ ಆರಂಭಗೊಂಡ ಥಾಮಸ್ ಕಪ್ ಟೂರ್ನಿಯ ‘ಸಿ’ ಗುಂಪಿನ ಮೊದಲ ಹಣಾಹಣಿಯಲ್ಲಿ ಭಾರತ 5–0ಯಿಂದ ಜರ್ಮನಿಯನ್ನು ಮಣಿಸಿತು. ಲಕ್ಷ್ಯಸೇನ್ ಮೊದಲ ಪಂದ್ಯದಲ್ಲಿ ಗಳಿಸಿಕೊಟ್ಟ ಮುನ್ನಡೆಯನ್ನು ಉಳಿಸಿಕೊಂಡ ಭಾರತ ನಂತರ ಸಂಪೂರ್ಣ ಆಧಿಪತ್ಯ ಸ್ಥಾಪಿಸಿತು. ಮ್ಯಾಕ್ಸ್ ವೀಸ್‌ಕಿರ್ಚನ್ ಅವರನ್ನು ಲಕ್ಷ್ಯ ಸೇನ್ 21-16, 21-13ರಲ್ಲಿ ಮಣಿಸಿದರು.

ಎರಡನೇ ಹಣಾಹಣಿಯಲ್ಲಿ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ 21-15, 10-21, 21-13ರಲ್ಲಿ ಜೋನ್ಸ್ ರಾಲ್ಫಿ ಜಾನ್ಸೆನ್ ಮತ್ತು ಮರ್ವಿನ್ ಸೀಡೆಲ್ ಎದುರು ಜಯ ಗಳಿಸಿದರು. ಕಿದಂಬಿ ಶ್ರೀಕಾಂತ್ ಸಿಂಗಲ್ಸ್ ಪಂದ್ಯದಲ್ಲಿ ಕಾಯ್ ಶಫರ್ ವಿರುದ್ಧ 18-21, 21-9, 21-11ರಲ್ಲಿ ಜಯ ಸಾಧಿಸಿದರು. 4ನೇ ಪಂದ್ಯದಲ್ಲಿ ಅರ್ಜುನ್ ಮತ್ತು ಧ್ರುವ ಕಪಿಲ 25-23, 21-15ರಲ್ಲಿ ಜಾರ್ನಿ ಜೀಸ್ ಮತ್ತು ಜಾನ್ ಕಾಲಿನ್ ವಿರುದ್ಧ ಗೆದ್ದರು. ಭರ್ಜರಿ ಮುನ್ನಡೆ ಸಾಧಿಸಿದ ಭಾರತಕ್ಕೆ ಕೊನೆಯ ಪಂದ್ಯದಲ್ಲಿ ಎಚ್.ಎಸ್.ಪ್ರಣಯ್ ಸುಲಭ ಜಯ ತಂದುಕೊಟ್ಟರು. ಮಥಿಯಾಸ್ ಕಿಕ್‌ಲಿಜ್ ಎದುರು ಅವರು 21-9 21-9ರಲ್ಲಿ ಜಯ ದಾಖಲಿಸಿದರು.

ಮಹಿಳಾ ತಂಡವು ಊಬರ್ ಕಪ್ ಡಿ ಗುಂಪಿನ ಪಂದ್ಯದಲ್ಲಿ 4–1ರಿಂದ ಕೆನಡಾ ತಂಡವನ್ನು ಮಣಿಸಿತು. ಸಿಂಗಲ್ಸ್‌ನಲ್ಲಿ ಪಿ.ವಿ. ಸಿಂಧು 21–17, 21–10ರಿಂದ ಮಿಚೆಲ್ಲೆ ಲೀ ವಿರುದ್ಧ ಗೆದ್ದರೆ, ಡಬಲ್ಸ್ ಜೋಡಿ ಶೃತಿ ಮಿಶ್ರಾ– ಸಿಮ್ರನ್ ಸಿಂಘಿ 19–21, 12–21ರಿಂದ ಸೋತರು. ಎರಡು ಸಿಂಗಲ್ಸ್ ಪಂದ್ಯಗಳಲ್ಲಿ ಆಕರ್ಷಿ ಕಶ್ಯಪ್, ಅಸ್ಮಿತಾ ಚಲಿಹಾ ಕೂಡ ಜಯ ಗಳಿಸಿದರೆ, ತನಿಶಾ ಕ್ರಾಸ್ಟೊ ಮತ್ತು ತ್ರಿಶಾ ಜೋಲಿ ಕೂಡ ಡಬಲ್ಸ್‌ನಲ್ಲಿ ಗೆಲುವು ಸಾಧಿಸಿದರು.

ಹಾಕಿ: ಕೊಲ್ಹಾಪುರ ಪೊಲೀಸ್ ಜಯಭೇರಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಕೊಲ್ಹಾಪುರದ ಪೊಲೀಸ್ ತಂಡ ಇಲ್ಲಿನ ಸೆಟ್ಲಮೆಂಟ್‌ನಲ್ಲಿ ನಡೆಯುತ್ತಿರುವ ಅಖಿಲ ಭಾರತ ಆಹ್ವಾನಿತ ಹಾಕಿ ಟೂರ್ನಿಯಲ್ಲಿ ಭಾನುವಾರ ಭರ್ಜರಿ ಗೆಲುವು ದಾಖಲಿಸಿತು. ಆತಿಥೇಯ ಯಂಗ್‌ಸ್ಟಾರ್ ಸ್ಪೋರ್ಟ್ಸ್ ಕ್ಲಬ್ ‘ಬಿ’ ತಂಡದ ಎದುರಿನ ಪಂದ್ಯದಲ್ಲಿ ಪೊಲೀಸ್ ತಂಡ 7-0ಯಿಂದ ಜಯ ಗಳಿಸಿತು. ಮುಕುಂದ ರಜಪೂತ್ (1ನೇ ನಿಮಿಷ), ಸಂದೀಪ ಸಾವಂತ್ (7,36ನೇ ನಿ) ಸತ್ಯಜೀತ್ ಸಾವಂತ್ (14ನೇ ನಿ), ಅಮಿತ್ ಜಾಧವ್ (27, 34ನೇ ನಿ) ಮತ್ತು ವಿನೋದ್ ಮನುಗಡೆ (40ನೇ ನಿ) ಗೋಲು ಗಳಿಸಿದರು.

ಯಂಗ್‌ಸ್ಟಾರ್ ‘ಎ’ ತಂಡವೂ ಸೋಲಿನ ಕಹಿ ಅನುಭವಿಸಿತು. ಹೈದರಾಬಾದ್‌ನ ಎಆರ್‌ಸಿ ತಂಡ 3-1ರಲ್ಲಿ ಆತಿಥೇಯರನ್ನು ಮಣಿಸಿತು. ಎಆರ್‌ಸಿ ಪರವಾಗಿ ಭಾನುಪ್ರಸಾದ (12ನೇ ನಿ), ಕೌಶಿಕ್ (21ನೇ ನಿ) ಹಾಗೂ ಸುಶೀಲ್ (45ನೇ ನಿ) ಗೋಲು ಗಳಿಸಿದರೆ, ಯಂಗ್‌ಸ್ಟಾರ್‌ಗಾಗಿ ರಾಕೇಶ ಗೋಕಾಕ (34ನೇ ನಿ) ಸೋಲಿನ ಅಂತರ ಕಡಿಮೆ ಮಾಡಿದರು.

ದಿನದ ಮೊದಲ ಪಂದ್ಯದಲ್ಲಿ ಕೊಲ್ಹಾಪುರದ ಎಂಕೆಎಂ ತಂಡ ವಾಸು ಇಲೆವನ್ ವಿರುದ್ಧ 1-0ಯಿಂದ ಗೆದ್ದಿತು. ಪ್ರಮೋದ ಕಾಳೆ 55ನೇ ನಿಮಿಷದಲ್ಲಿ ಗೋಲು ಗಳಿಸಿದರು. ನೈರುತ್ಯ ರೈಲ್ವೆ ತಂಡ ಇಸ್ಲಾಂಪುರದ ಎಸ್.ಡಿ.ಪಾಟೀಲ್ ತಂಡವನ್ನು 3-1ರಲ್ಲಿ ಮಣಿಸಿತು. 2ನೇ ನಿಮಿಷದಲ್ಲಿ ಪಾಟೀಲ್ ತಂಡದ ಪ್ರಥಮೇಶ ತಂಡಕ್ಕೆ ಮುನ್ನಡೆ ತಂದುಕೊಟ್ಟರು.

9ನೇ ನಿಮಿಷದಲ್ಲಿ ವಿನೀತ್ ಅವರ ಗೋಲಿನ ಮೂಲಕ ರೈಲ್ವೆ ಸಮಬಲ ಸಾಧಿಸಿತು. 25ನೇ ನಿಮಿಷದಲ್ಲಿ ಸಮಂತ್ ಹಾಗೂ 38ನೇ ನಿಮಿಷದಲ್ಲಿ ಲಿಖಿತ್ ಚೆಂಡನ್ನು ಗುರಿ ಮುಟ್ಟಿಸಿದರು.

ವಾಲಿಬಾಲ್: ಕೇರಳ ಪೊಲೀಸ್ ಮುಡಿಗೆ ಪ್ರಶಸ್ತಿ

ಸುಳ್ಯ: ಕೇರಳ ಪೊಲೀಸ್ ತಂಡ ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ವಾಲಿಬಾಲ್ ಟೂರ್ನಿಯ ಮಹಿಳೆಯರ ವಿಭಾಗದ ಪ್ರಶಸ್ತಿ ತನ್ನದಾಗಿಸಿಕೊಂಡಿತು. ಫೈನಲ್‌ನಲ್ಲಿ ಕೇರಳ ತಂಡ ಚೆನ್ನೈನ ಎಸ್‌ಆರ್‌ಎಂ ವಿರುದ್ಧ ಜಯ ಗಳಿಸಿತು.

ಆರಂಭದಿಂದಲೇ ಮುನ್ನಡೆ ಸಾಧಿಸಿದ ಕೇರಳ ಪೊಲೀಸ್ 25–21 ಪಾಯಿಂಟ್‌ಗಳೊಂದಿಗೆ ಮೊದಲ ಸೆಟ್‌ನಲ್ಲಿ ಜಯ ಗಳಿಸಿತು. 25–18ರಲ್ಲಿ ಎರಡನೇ ಸೆಟ್ ಗೆದ್ದ ತಂಡ ಮೂರನೆಯ ಸೆಟ್‌ನಲ್ಲಿ 25–16ರ ಜಯ ಸಾಧಿಸಿತು.

ಸಂಕ್ಷಿಪ್ತ ಸುದ್ದಿ

ಸ್ಪೇನ್ ಚೆಸ್: ಗುಕೇಶ್‌ಗೆ ಪ್ರಶಸ್ತಿ

ಡಿ.ಗುಕೇಶ್

ಪುಂಟಾ ಪ್ರಿಮಾ, ಸ್ಪೇನ್ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಡಿ.ಗುಕೇಶ್ ಅವರು ಇಲ್ಲಿ ನಡೆದ ಚೆಸೆಬಲ್ ಸನ್‌ವೇ ಫಾರ್ಮೆಂಟೆರಾ ಓಪನ್ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ.

ಗುಕೇಶ್ ಅವರಿಗೆ ಇದು ಹ್ಯಾಟ್ರಿಕ್ ಪ್ರಶಸ್ತಿಯಾಗಿದೆ. ಇತ್ತೀಚೆಗೆ ಅವರು ಲಾ ರೋಡಾ ಮತ್ತು ಮೆನೊರ್ಕಾ ಓಪನ್ ಟೂರ್ನಿಗಳಲ್ಲಿ ಟ್ರೋಫಿ ಜಯಿಸಿದ್ದರು.

15 ವರ್ಷದ ಗುಕೇಶ್ (ಇಎಲ್‌ಒ 2637), ಅಂತಿಮ ಸುತ್ತಿನಲ್ಲಿ ಆರ್ಮೇನಿಯಾದ ಹೈಕ್ ಎಂ. ಮಾರ್ಟಿರೋಸಿಯನ್ ಎದುರು ಡ್ರಾ ಸಾಧಿಸಿದರು. ಒಟ್ಟು ಎಂಟು ಪಾಯಿಂಟ್ಸ್ ಕಲೆಹಾಕಿದರು.

ಟಿ20 ವಿಶ್ವಕಪ್‌ಗೆ ಜಿತೇಶ್ ಆಯ್ಕೆ ಆಗಲಿ: ಸೆಹ್ವಾಗ್

ನವದೆಹಲಿ (ಪಿಟಿಐ): ಜಿತೇಶ್ ಶರ್ಮಾ ಅವರು ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಭಾರತ ತಂಡದಲ್ಲಿ ಕಾಯ್ದಿರಿಸಿದ ವಿಕೆಟ್ ಕೀಪರ್ ಆಗಲಿ ಎಂದು ತಂಡದ ಮಾಜಿ ಆಟಗಾರ ವೀರೇಂದ್ರ ಸೆಹ್ವಾಗ್ ಅಭಿಪ್ರಾಯಪಟ್ಟಿದ್ದಾರೆ.

28 ವರ್ಷದ ಜಿತೇಶ್, ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ಪಂಜಾಬ್ ಕಿಂಗ್ಸ್ ಪರ ಆಡುತ್ತಿದ್ದಾರೆ. ಶನಿವಾರ ನಡೆದ ರಾಜಸ್ಥಾನ ರಾಯಲ್ಸ್ ಎದುರಿನ ಪಂದ್ಯದಲ್ಲಿ 18 ಎಸೆತಗಳನ್ನು ಎದುರಿಸಿದ್ದ ಅವರು ಔಟಾಗದೆ 38 ರನ್ ಗಳಿಸಿ ತಂಡದ ಜಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

‘ಜಿತೇಶ್ ಪರಿಣಾಮಕಾರಿ ಪ್ರದರ್ಶನ ನೀಡಿದ್ದಾರೆ. ಆಸ್ಟ್ರೇಲಿಯಾದಲ್ಲಿ ನಿಗದಿಯಾಗಿರುವ ವಿಶ್ವಕಪ್‌ಗೆ ನಾವೇಕೆ ಅವರನ್ನು ಆಯ್ಕೆ ಮಾಡಬಾರದು‘ ಎಂದು ಕ್ರಿಕ್‌ಬಜ್ ಲೈವ್ ಟಾಕಿಂಗ್ ಪಾಯಿಂಟ್ಸ್‘ ಕಾರ್ಯಕ್ರಮದಲ್ಲಿ ಹೇಳಿದ್ದಾರೆ.

ರಾಜೇಶ್ ನೇಮಕ

ನವದೆಹಲಿ (ಪಿಟಿಐ): ಭಾರತ ಬಾಕ್ಸಿಂಗ್ ಫೆಡರೇಷನ್ (ಬಿಎಫ್‌ಐ) ಉಪಾಧ್ಯಕ್ಷ ರಾಜೇಶ್ ಭಂಡಾರಿ ಅವರನ್ನು ಮುಂದೂಡಿಕೆಯಾಗಿರುವ ಏಷ್ಯನ್ ಗೇಮ್ಸ್‌ಗೆ ಬಾಕ್ಸಿಂಗ್ ಕ್ರೀಡೆಯ ಕಾರ್ಯಪಡೆಯ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿದೆ.